

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ



ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 18 ಗುರುವಾರ 2024
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 45 | ಸಂಚಿಕೆ: 93 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

111 ಅಡಿ ದಾಟಿದ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ

● ಭರ್ತಿಯಾಗಲು ಬೇಕಿದೆ ಇನ್ನು 13 ಅಡಿ ● 35,534 ಕ್ಯೂಸೆಕ್ ಒಳ ಹರಿವು; ನಿರಂತರವಾಗಿ ನಾಲೆ, ತಮಿಳುನಾಡಿಗೆ ನೀರು ಹರಿಯುತ್ತಿದೆ

ಮಂಡ್ಯ, ಜು.17– ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಬುಧವಾರ 111.90 ಅಡಿ ದಾಟಿದ್ದು, 35,534 ಕ್ಯೂಸೆಕ್ ಒಳ ಹರಿವಿದೆ.

ಕೊಡಗು ಜಿಲ್ಲೆಯಲ್ಲಿ ನಿರಂತರವಾಗಿ ಮಳೆಯಾಗುತ್ತಿರುವುದು ನೀರಿನ ಮಟ್ಟ ತ್ವರಿತವಾಗಿ ಹೆಚ್ಚಾಗಲು ಕಾರಣವಾಗಿದೆ. ಕಾವೇರಿ ಉಗಮ ಸ್ಥಾನ ಕೊಡಗಿನಲ್ಲಿ ಇನ್ನು 10 ದಿನ ಇದೇ ರೀತಿ ಮಳೆ ಮುಂದುವರೆದರೆ ಜಲಾಶಯ ಅತೀ ಶೀಘ್ರ ಭರ್ತಿಯಾಗಲಿದೆ.

124.80 ಅಡಿ ಗರಿಷ್ಟ ನೀರಿನ ಮಟ್ಟದ ಕೃಷ್ಣರಾಜ ಸಾಗರ ಅಣೆಕಟ್ಟೆ, ಈ ಬಾರಿ ತುಂಬುವುದೇ ಎಂಬ ಅನುಮಾನ ವ್ಯಕ್ತವಾಗಿತ್ತು. ಆರಂಭದಲ್ಲಿ ಮುಂಗಾರು ಸಮರ್ಪಕವಾಗಿ ಆಗದಿದ್ದ ಕಾರಣ, ರೈತರಲ್ಲಿ ಆತಂಕವೂ ಮೂಡಿತ್ತು. ಆದರೆ ದಿನ ಕಳೆದಂತೆ ಕಾವೇರಿ ಜಲಾನಯನ ಪ್ರದೇಶ ಅದರಲ್ಲೂ ಕೊಡಗಿನಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಇದೀಗ ನೀರಿನ ಮಟ್ಟ 111 ಅಡಿ ದಾಟಿದೆ. ಅಣೆಕಟ್ಟೆ ಭರ್ತಿಗೆ ಇನ್ನು 13 ಅಡಿ ಬಾಕಿ ಇದೆ.

ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಗಣನೀಯವಾಗಿ ಕಡಿಮೆಯಾಗಿತ್ತು. ಅದಾಗಲೇ ರಾಜಧಾನಿ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿ, ನೀರು ಪೋಲು ಮಾಡಿದರೆ ದಂಡ ವಿಧಿಸುವ ಕಾರ್ಯಕ್ಕೂ ಬಿಬಿಎಂಪಿ ಕೈಹಾಕಿತ್ತು.

ಬೆಳೆಗಳಿಗೆ ನೀರಿರಲಿಲ್ಲ: ಇದು ರಾಜಧಾನಿ ಕಥೆಯಾದರೆ ಕಾವೇರಿ ನದಿ ನೀರನ್ನೇ ಆಶ್ರಯಿಸಿದ್ದ ಮಂಡ್ಯ ಜಿಲ್ಲೆಗೆ ಕುಡಿಯಲು ನೀರಿದ್ದರೂ ಬೆಳೆಗಳಿಗೆ ನೀರಿಲ್ಲದೇ ಸಾವಿರಾರು ಹೆಕ್ಟೇರ್ ಬೆಳೆ ನಾಶವಾಗಿತ್ತು. ಇದರಿಂದ ರೈತರು ಕಂಗಾಲಾಗಿದ್ದರು.



ಬೆಳೆಗೆ ಮಾಡಿದ್ದ ಸಾಲ ತೀರಿಸಲಾಗದೇ ರೈತರು ಆತ್ಮಹತ್ಯೆಯ ಹಾದಿ ಹಿಡಿದಿದ್ದರು. ಜಲಾಶಯದ ನೀರಿನ ಮಟ್ಟ 100 ಅಡಿ ದಾಟಿದ ನಂತರ ರೈತರಿಗೆ ಅನುಕೂಲಕಾರಿಯಾಗಿ ನಾಲೆಗೆ ನೀರು ಬಿಡಲು ಸರ್ಕಾರ ನಿರ್ಧರಿಸಿತ್ತು.

ತಮಿಳುನಾಡು ಕ್ಯಾತೆ: ಈ ನಡುವೆ ಸಿಡಬ್ಲ್ಯೂಆರ್‌ಸಿ ತಮಿಳುನಾಡಿಗೆ ಇಂತಿಷ್ಟು ನೀರು ಬಿಡಿ ಎಂದು ಕರ್ನಾಟಕಕ್ಕೆ ಸೂಚನೆ ನೀಡುತ್ತಾ ಬಂದಿತ್ತು. ಆದರೆ ಕರ್ನಾಟಕ ಕುಡಿಯಲು ನೀರಿಲ್ಲ ಎಂದು ವಾದ ಮಾಡುತ್ತಾ ದಿನ ದೂಡುತ್ತಾ ಇತ್ತು.

ರೈತರಿಗೆ ಹೊಸ ತಲೆನೋವು: ಇತ್ತ ಅಣೆಕಟ್ಟೆಯಲ್ಲಿ ನೀರಿದ್ದರೂ ನಾಲೆಗೆ ಹರಿಸಲು ಸಮಸ್ಯೆ ಎದುರಾಗಿತ್ತು. ಕಾರಣ ಮಂಡ್ಯ ಜಿಲ್ಲೆಯ ಹಲವು ಕಡೆ ವಿ.ಸಿ.ನಾಲೆ ಆಧುನೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ನಾಲೆಗಳಿಗೆ ತಕ್ಷಣ ನೀರು ಹರಿಸಲು ಸಾಧ್ಯವಿರಲಿಲ್ಲ. ಆದರೆ ಮಾಜಿ ಶಾಸಕರು, ರೈತ ಮುಖಂಡರ ಒತ್ತಾಯದ ಮೇರೆಗೆ ಕಳೆದ ಕೆಲ ದಿನಗಳ ಹಿಂದೆ ನಾಲೆಗಳಿಗೆ ನೀರು ಬಿಡಲಾಗಿದೆ. ಕಳಪೆ ಕಾಮಗಾರಿಯೋ ಇಲ್ಲಾ ನೀರಿನ ರಭಸಕ್ಕೋ ಕೆಲವೆಡೆ ನಾಲೆಯ ಗಾರೆ ಕಿತ್ತು ಬಂದಿದೆ. ಇದು ಸಹ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಅಣೆಕಟ್ಟೆ ಶೀಘ್ರ ಭರ್ತಿಯಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬಾಗಿನ ಅರ್ಪಿಸುವ ಭಾಗ್ಯ ದೊರಕಲಿದೆ. ಜೊತೆಗೆ ಅಣೆಕಟ್ಟೆ ತುಂಬಿದರೆ ತಮಿಳುನಾಡಿಗೂ ನೀರು ಹರಿಯಲಿದ್ದು, ಅವರ ಕ್ಯಾತೆಗೆ ತೆರೆ ಬೀಳಲಿದೆ. ಜೊತೆಗೆ ಜಿಲ್ಲೆಯ ರೈತರ ಬೆಳೆಗೆ ಹಾಗೂ ಮೈಸೂರು, ಬೆಂಗಳೂರು ಕುಡಿಯುವ ನೀರಿನ ಸಮಸ್ಯೆಯೂ ನೀಗಲಿದೆ.

● ಸಂಪುಟ ಅನುಮೋದನೆ ನೀಡಿದ ಎರಡೇ ದಿನದಲ್ಲಿ; ಮುಖ್ಯಮಂತ್ರಿ ಅಧಿಕೃತವಾಗಿ ಪ್ರಕಟಿಸಿದ ಕೆಲವೇ ಗಂಟೆಯಲ್ಲಿ 'ವಿಧೇಯಕಕ್ಕೆ ತಡೆ' ● ಕೈಗಾರಿಕೋದ್ಯಮಿಗಳು, ಖಾಸಗಿ ವಲಯದ ಉದ್ಯಮಗಳ ಎಚ್ಚರಿಕೆಗೆ ಬೆಚ್ಚಿದ ಸರ್ಕಾರ

ಕನ್ನಡಿಗರಿಗೆ ಉದ್ಯೋಗ ವಿಧೇಯಕಕ್ಕೆ 'ಗ್ರಹಣ'

ಬೆಂಗಳೂರು, ಜು. 17(ಕೆಎಂಶಿ)–ರಾಜ್ಯದ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ಯಮಗಳಲ್ಲಿ ಕನ್ನಡಿಗರಿಗೆ



ಮೀಸಲಾತಿ ಕಲ್ಪಿಸುವ ವಿಧೇಯಕಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದ ಎರಡೇ ದಿನದಲ್ಲಿ ಅನುಮೋದನೆಯನ್ನು ತಡೆ ಹಿಡಿದಿರುವ ವಿಲಕ್ಷಣ ಘಟನೆ ನಡೆದಿದೆ.

ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಂಪುಟ ಸಭೆಯಲ್ಲಿ ಈ ವಿಧೇಯಕಕ್ಕೆ ಅನುಮೋದನೆ ನೀಡಲಾಗಿತ್ತಾದರೂ, ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಚಾರವನ್ನು ಬಹಿರಂಗಪಡಿಸಿರಲಿಲ್ಲ. ಆದರೆ, ಇಂದು ಮಧ್ಯಾಹ್ನ 3 ಗಂಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, "ರಾಜ್ಯದ ಖಾಸಗಿ ಕೈಗಾರಿಕೆಗಳು ■ 9ನೇ ಪುಟಕ್ಕೆ

CM of Karnataka
@CMofKarnataka

ರಾಜ್ಯದ ಖಾಸಗಿ ಕೈಗಾರಿಕೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ.50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ.75 ಮೀಸಲಾತಿ ನಿಗದಿಪಡಿಸುವ ವಿಧೇಯಕಕ್ಕೆ ಸೋಮವಾರ ನಡೆದ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ಕನ್ನಡಿಗರು ಕನ್ನಡದ ನೆಲದಲ್ಲಿ ಉದ್ಯೋಗ ವಂಚಿತರಾಗುವುದನ್ನು ತಪ್ಪಿಸಿ, ತಾಯ್ನಾಡಿನಲ್ಲಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂಬುದು ನಮ್ಮ ಸರ್ಕಾರದ ಆಶಯ. ನಮ್ಮದು ಕನ್ನಡಪರವಾದ ಸರ್ಕಾರ. ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆಯಾಗಿದೆ.

- ಮುಖ್ಯಮಂತ್ರಿ @siddaramaiah

CM of Karnataka @CMofKar... · 1h

ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕವು ಇನ್ನೂ ಸಿದ್ಧತೆಯ ಹಂತದಲ್ಲಿದೆ.

ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು.

ಉದ್ಯೋಗ ಮೀಸಲಾತಿ ಬದಲು ಕನ್ನಡಿಗರಲ್ಲಿ ಕೌಶಲ ಬೆಳೆಸಿ...

ಬೆಂಗಳೂರು, ಜು.17–ರಾಜ್ಯದಲ್ಲಿ ಕೈಗಾರಿಕೆಗಳು ಮತ್ತಿತರ



ಮೋಹನ್ ದಾಸ್ ಪೈ

ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ. 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ.75ರಷ್ಟು ಮೀಸಲಾತಿ ನಿಗದಿಪಡಿಸುವ ವಿಧೇಯಕಕ್ಕೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದ ಬೆನ್ನಲ್ಲೇ, ರಾಜ್ಯ ಸರ್ಕಾರದ ವಿರುದ್ಧ ಉದ್ಯಮಿ ಟಿವಿ ಮೋಹನ್ ದಾಸ್ ಪೈ ವಾಗ್ದಾಳಿ ನಡೆಸಿದ್ದು, ಕನ್ನಡಿಗರಿಗೆ ಮೀಸಲಾತಿ ■ 9ನೇ ಪುಟಕ್ಕೆ

ಐದು ವರ್ಷದಲ್ಲಿ ಕುಮಾರಸ್ವಾಮಿ ಕಾವೇರಿ ಸಮಸ್ಯೆಗೆ ಪರಿಹಾರ ಕಲ್ಪಿಸಿದರೆ

ರಾಜಕೀಯಕ್ಕೆ ಗುಡ್‌ಬೈ



ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸವಾಲು

ಕರ್ನಾಟಕಕ್ಕೆ ಕಾವೇರಿ ನೀರು ಉಳಿಸಿಕೊಟ್ಟರೆ ಕುಮಾರಸ್ವಾಮಿಯ ಸೇವಕನಾಗುವೆ

ಮಂಡ್ಯ,ಜು.17– ಮುಂದಿನ ಐದು ವರ್ಷಗಳಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕಾವೇರಿ ಸಮಸ್ಯೆಗೆ ಪರಿಹಾರ ಕಲ್ಪಿಸಿದರೆ ನಾನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಜೊತೆಗೆ ರಾಜಕೀಯದಲ್ಲೂ ಇರುವುದಿಲ್ಲ ಎಂದು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸವಾಲು ಹಾಕಿದ್ದಾರೆ.

ನಾಗಮಂಗಲ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿ ಜಾರಿಯಲ್ಲಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ರದ್ದುಗೊಳಿಸಿ ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕಾವೇರಿ ನೀರನ್ನು ಸಂಪೂರ್ಣವಾಗಿ ಕರ್ನಾಟಕಕ್ಕೆ ದೊರಕಿಸಿಕೊಟ್ಟರೆ ನಾನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದೂ ಇಲ್ಲ. ಅವರ ಸೇವಕನಾಗಿ ಕೆಲಸ ಮಾಡುತ್ತೇನೆ ಎಂದು ನುಡಿದರು. ಮಂಡ್ಯ ಜಿಲ್ಲೆಯ ಸಂಸದರಾಗಿ, ಕೇಂದ್ರ ಸಚಿವರಾಗಿ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸುವುದು ಅವರ ಕರ್ತವ್ಯ. ಅದನ್ನು ಬಿಟ್ಟು ಬೇಜವಾಬ್ದಾರಿತನದಿಂದ ■ 6ನೇ ಪುಟಕ್ಕೆ

ಮುಂಗಾರು ಹಂಗಾಮಿನಲ್ಲಿ ಬೆಳೆಗಳಿಗೆ ನೀರು

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಹರಿಸಲಾಗುವುದು. ಬೆಂಗಳೂರಿನಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಶೀಘ್ರದಲ್ಲಿಯೇ ಕಟ್ಟು ನೀರು ಪದ್ಧತಿಯಲ್ಲಿ ಹರಿಸುವ ಕುರಿತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಪ್ರಸ್ತುತ ಕೆಆರ್‌ಎಸ್ ಜಲಾಶಯದಿಂದ ಕೆರೆ–ಕಟ್ಟೆಗಳನ್ನು ತುಂಬಿಸಲು ನೀರು ಹರಿಸಲಾಗುತ್ತಿದೆ. ಜಲಾಶಯಕ್ಕೆ 36 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿರುವುದರಿಂದ ನೀರಿನ ಮಟ್ಟ 111 ಅಡಿ ತಲುಪಿದೆ. ಸದ್ಯಕ್ಕೆ 115 ಅಡಿಯವರೆಗೆ ಜಲಾಶಯದ ನೀರಿನ ಮಟ್ಟ ತಲುಪುವ ನಿರೀಕ್ಷೆ ಇದೆ. ಮುಂದೆಯೂ ಮಳೆ ಉತ್ತಮವಾಗಿ ಬಿದ್ದು ಜಲಾಶಯ ಭರ್ತಿಯಾದರೆ ಎರಡನೇ ಬೆಳೆಗೆ ನೀರು ಹರಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ■ 2ನೇ ಪುಟಕ್ಕೆ

ಆಡಳಿತಾತ್ಮಕ ಅನುಕೂಲಕ್ಕೆ ರೈಲ್ವೆ ಅಧಿಕಾರಿಗಳು ಕನ್ನಡ ಕಲಿಯಿರಿ

ಮಂಗಳೂರು, ಜು.17–ಕರ್ನಾ



ಸೋಮಣ್ಣ

ಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈಲ್ವೆ ಅಧಿಕಾರಿಗಳು ಆಡಳಿತಾತ್ಮಕ ಅನುಕೂಲಕ್ಕಾಗಿ ಕನ್ನಡ ಭಾಷೆಯನ್ನು ಕಲಿಯಲು ಪ್ರಯತ್ನಿಸಬೇಕು ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಸಲಹೆ ನೀಡಿದ್ದಾರೆ. ಮಂಗಳೂರಿನಲ್ಲಿ ಬುಧವಾರ ರೈಲ್ವೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಮಾತನಾಡಿದ ಅವರು, ನಾನು ಚಿಕ್ಕವನಿದ್ದಾಗ ಹಿಂದಿ ಹೇರಿಕೆ ವಿರುದ್ಧ ಪ್ರತಿಭಟನೆ ನಡೆಸಿ ಜೈಲು ಪಾಲಾಗಿದ್ದೆ. ಆದರೆ ಈಗ ನನಗೆ ಹಿಂದಿಯ ಮಹತ್ವ ಅರಿವಾಗಿದೆ. ಪ್ರತಿನಿತ್ಯ ಬೆಳಗ್ಗೆ 6 ಗಂಟೆಗೆ ಎದ್ದು ಹಿಂದಿಯಲ್ಲಿ ಅಕ್ಷರ ಬರೆಯಲು ಕಲಿಯುತ್ತಿರುವುದಾಗಿ ತಿಳಿಸಿದರು.

ಇನ್ನು ಆರು ತಿಂಗಳಲ್ಲಿ ಹಿಂದಿ ಕಲಿತು ಪತ್ರ ಬರೆಯಲು ಹಾಗೂ ಸಂಸತ್ತಿನಲ್ಲಿ ಭಾಷಣ ಮಾಡುವುದನ್ನು ಕಲಿಯುತ್ತೇನೆ. ರೈಲ್ವೆ ಅಧಿಕಾರಿಗಳು ಕನ್ನಡ ಕಲಿಯುವುದು ಕಷ್ಟವಲ್ಲ, ಅವರು ಭಾಷೆ ಕಲಿಯಲು ಸಾಮಗ್ರಿಗಳನ್ನು ಒದಗಿಸುವಂತೆ ಸ್ಥಳದಲ್ಲಿದ್ದ ಶಾಸಕರಿಗೆ ಸೂಚಿಸಿದರು. ಸಂಸದ ಬ್ರಿಜೇಶ್ ಚೌಟ ■ 2ನೇ ಪುಟಕ್ಕೆ

ಸಾರ್ವಜನಿಕ ಸ್ಥಳದಲ್ಲಿ ನಿತ್ಯ ಐದು ತಾಸು ಗಸ್ತು ತಿರುಗಿ

ಬೆಂಗಳೂರು, ಜು.17– ರಾಜ್ಯಾದ್ಯಂತ



ಅಲೋಕ್ ಮೋಹನ್

ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸರ ಗೋಚರತೆ ತೀರಾ ಕಡಿಮೆ ಆಗಿದ್ದು, ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರತಿದಿನ ಬೆಳಿಗ್ಗೆ 9ರಿಂದ 11ರವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 9ರವರೆಗೆ ಪೊಲೀಸ್ ಸಮವಸ್ತ್ರದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಗಸ್ತು ನಡೆಸಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಆದೇಶಿಸಿದ್ದಾರೆ. ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಬೆಂಗಳೂರು ಸೇರಿದಂತೆ ಇತರ ನಗರಗಳ ಪೊಲೀಸ್ ಕಮಿಷನರೇಟ್‌ಗಳ ವ್ಯಾಪ್ತಿಗೆ ಬರುವ ಡಿಸಿಪಿಗಳು ಪ್ರತಿದಿನ ಕನಿಷ್ಠ ಒಂದು ಪೊಲೀಸ್ ಠಾಣೆಗೆ ಭೇಟಿ ನೀಡಬೇಕು ಎಂದು ಸೂಚಿಸಿದ್ದಾರೆ.

ಎಲ್ಲ ವಲಯದ ಐಜಿಪಿಗಳು, ಡಿಐಜಿಪಿಗಳು ಹಾಗೂ ಹೆಚ್ಚುವರಿ ಪೊಲೀಸ್ ಆಯುಕ್ತರೂ ತಮ್ಮ ವ್ಯಾಪ್ತಿಯ ಠಾಣೆಗಳಿಗೆ ಭೇಟಿ ನೀಡಬೇಕು. ಭೇಟಿ ಸಂದರ್ಭದಲ್ಲಿ ಕಾರ್ಯ ನಿರ್ವಹಣೆ ಪರಿಶೀಲಿಸಬೇಕು. ಅಲ್ಲದೇ ಪ್ರಮುಖ ಅಪರಾಧ ಪ್ರಕರಣಗಳು ನಡೆದಾಗ ಸ್ಥಳಕ್ಕೆ ಭೇಟಿ ನೀಡಬೇಕು ಎಂದು ಹೇಳಿದ್ದಾರೆ. ■ 6ನೇ ಪುಟಕ್ಕೆ

ಹಣ ಅಕ್ರಮ ವರ್ಗಾವಣೆ ಪ್ರಕರಣ

ಇಡಿಯಿಂದ ಶಾಸಕ ನಾಗೇಂದ್ರ ಪತ್ನಿ ವಿಚಾರಣೆ

ಬೆಂಗಳೂರು, ಜು. 17(ಕೆಎಂಶಿ)–



ಮಂಜುಳಾ

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಮಾಜಿ ಸಚಿವ, ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಪತ್ನಿ ಮಂಜುಳಾ ಅವರನ್ನು ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಇಂದು ಬೆಳಗ್ಗೆ ವಶಕ್ಕೆ ಪಡೆದು, ವಿಚಾರಣೆ ನಂತರ ರಾತ್ರಿ ಅಧಿಕಾರಿಗಳೇ ಅವರನ್ನು ಮನೆಗೆ ಬಿಟ್ಟುಬಂದಿದ್ದಾರೆ. ಡಾಲರ್ಸ್ ಕಾಲೋನಿಯ ನಿವಾಸದಿಂದ ಇಡಿ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದ ನಂತರ ಶಾಂತಿನಗರದ ತಮ್ಮ ಕಚೇರಿಯಲ್ಲಿ ಹಗರಣಕ್ಕೆ ಸಂಬಂಧಿಸಿದಂತೆ ಅವರ ವಿಚಾರಣೆ ನಡೆಸಿದರು. ನಾಗೇಂದ್ರ ಅವರ ಬ್ಯಾಂಕ್ ಖಾತೆ ಜೊತೆಗೆ ಅವರ ಪತ್ನಿ ಖಾತೆಯಿಂದಲೂ ಹೆಚ್ಚು ಮೊತ್ತದ ಹಣ ವರ್ಗಾವಣೆ ಆಗಿರುವ ವಿಚಾರ ತನಿಖೆಯಿಂದ ಕಂಡುಬಂದ ಹಿನ್ನೆಲೆಯಲ್ಲಿ ಮಂಜುಳಾ ಅವರನ್ನು ವಿಚಾರಣೆಗೊಳಪಡಿಸಲಾಗಿದೆ.



ಕಬಿನಿ ಜಲಾಶಯದಿಂದ 50 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಹೊರ ಹರಿವು

ನೆರೆ ಆತಂಕ; ಜಿಲ್ಲಾಧಿಕಾರಿಗಳ ಭೇಟಿ; ಅಗತ್ಯ ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ



ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಬುಧವಾರ ನಂಜನಗೂಡಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದಲ್ಲದೇ ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ಸಲಹೆ–ಸೂಚನೆಗಳನ್ನು ನೀಡಿದರು.

ಹೆಚ್.ಡಿ.ಕೋಟೆ/ನಂಜನಗೂಡು, ಜು. 17– ಕೇರಳದಲ್ಲಿ ಭಾರಿ ಮಳೆ ಹಿನ್ನೆಲೆಯಲ್ಲಿ ಕಬಿನಿ ಹಾಗೂ ನುಗು ಜಲಾಶಯಗಳು ಭರ್ತಿಯಾಗಿದ್ದು, ನದಿಗೆ 50 ಸಾವಿರ ಕ್ಯೂಸೆಕ್‌ಗೂ ಹೆಚ್ಚಿನ ಪ್ರಮಾಣದ ನೀರು ಬಿಡುತ್ತಿರುವ ಹಿನ್ನೆಲೆಯಲ್ಲಿ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮ ವಹಿಸುವ ಸಲುವಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಬುಧವಾರ ಕಬಿನಿ, ನುಗು ಜಲಾಶಯಗಳು ಹಾಗೂ ನಂಜನಗೂಡಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದಲ್ಲದೇ ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ಸಲಹೆ–ಸೂಚನೆಗಳನ್ನು ನೀಡಿದರು.

ಇಂದು ಬೆಳಗ್ಗೆ ಕಬಿನಿ ಮತ್ತು ನುಗು ಜಲಾಶಯಗಳಿಗೆ ಭೇಟಿ ನೀಡಿದ ಅವರು, ಕಬಿನಿ ಜಲಾಶಯದ ಪ್ರವಾಸ ಮಂದಿರದಲ್ಲಿ ಅಧಿಕಾರಿಗಳ ಸಭೆ ಕರೆದು ಮಾಹಿತಿ ಪಡೆದರು. ಕಬಿನಿ ಜಲಾಶಯಕ್ಕೆ 38,600 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 50,000 ಕ್ಯೂಸೆಕ್ ನೀರು ಹೊರಬಿಡಲಾಗುತ್ತಿದೆ. ಕೇರಳದಲ್ಲಿ ಈಗಾಗಲೇ 55 ಮಿಲಿ ಮೀಟರ್ ಮಳೆಯಾಗಿರುವುದರಿಂದ ಜಲಾಶಯಕ್ಕೆ ಇನ್ನೂ ಹೆಚ್ಚಿನ ಪ್ರಮಾಣದ ನೀರು ಹರಿದು ಬರುವ ಸಾಧ್ಯತೆ ಇದೆ. ಇದರಿಂದಾಗಿ ನದಿಪಾತ್ರದಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗುವ ಕಾರಣದಿಂದ ಅಧಿಕಾರಿಗಳು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ■ 9ನೇ ಪುಟಕ್ಕೆ



ಕಬಿನಿ ಹಾಗೂ ನುಗು ಜಲಾಶಯಗಳು ಭರ್ತಿಯಾಗಿದ್ದು, ನದಿಗೆ 50 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಬಿಟ್ಟಿರುವುದು.



ಕಬಿನಿ ಜಲಾಶಯದಿಂದ ಭಾರಿ ಪ್ರಮಾಣದಲ್ಲಿ ನೀರು ಬಿಟ್ಟಿರುವುದರಿಂದ ನಂಜನಗೂಡಿನ ಸ್ನಾನಘಟ್ಟ ಜಲಮಯವಾಗಿದೆ.

ಭಾರತೀಯ ವಿದ್ಯಾಭವನದಲ್ಲಿ ಭಕ್ತಿ ಸುಧಾ ಸಾಂಸ್ಕೃತಿಕ ಕಾರ್ಯಕ್ರಮ


ಕೀರ್ತನ್ ಹೊಳ್ಳ


ಕೌಶಿಕ್ ಭಟ್


ತೇಜಸ್ ಕಾಟೋಟಿ


ಸಾತ್ವಿಕ್ ಹೆಗ್ಡೆ

ಮೈಸೂರು, ಜು. 17– ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು ವತಿಯಿಂದ ಜು.20ರಂದು ಸಂಜೆ 6 ಗಂಟೆಗೆ –131ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿದ್ವಾನ್ ಕೀರ್ತನ್ ಹೊಳ್ಳ ಅವರಿಂದ ಭಕ್ತಿ ಸುಧಾ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಕೌಶಿಕ್ ಭಟ್–ತಬಲ, ವಿದ್ವಾನ್ ತೇಜಸ್ ಕಾಟೋಟಿ–ಹಾರ್ಮೋನಿಯಂ, ವಿದ್ವಾನ್ ಸಾತ್ವಿಕ್ ಹೆಗ್ಡೆ–ತಾಳದಲ್ಲಿ ಸಹಕಾರ ನೀಡಲಿದ್ದಾರೆ.

ನಾಳೆಯಿಂದ ಶ್ರೀ ವಿದ್ಯಾಧೀಶಾಚಾರ್ಯ ಗುತ್ತಲ್ ಅವರಿಂದ ವಿಶೇಷ ಪ್ರವಚನ



ಮೈಸೂರು,ಜು.17–ನಗರದ ಅಗ್ರಹಾರದಲ್ಲಿರುವ ಶ್ರೀ ಉತ್ತರಾದಿ ಮಠದಲ್ಲಿ ಶ್ರೀ 1008 ಶ್ರೀ ಸತ್ಯಸಂಕಲ್ಪತೀರ್ಥ ಶ್ರೀಪಾದಂಗಳವರ 185ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಜು.19ರಿಂದ 21ರವ ರೆಗೆ ಸಂಜೆ 6ರಿಂದ 7.30ರವರೆಗೆ ಉತ್ತರಾದಿ ಮಠದ ಆಡಳಿತಾಧಿಕಾರಿ ಹಾಗೂ ನಾಡಿನ ಪ್ರಸಿದ್ಧ ಪ್ರವಚನಕಾರ ರಾದ ಪಂ.ಶ್ರೀ.ವಿದ್ಯಾಧೀಶಾಚಾರ್ಯ ಗುತ್ತಲ್ ಅವರಿಂದ ಶ್ರೀ ರಾಘವೇಂದ್ರಸ್ವಾಮಿಗಳು ರಚಿಸಿರುವ 'ಪ್ರಾತಃಸಂಕಲ್ಪಗದ್ಯ' ವಿಷಯ ಕುರಿತು ವಿಶೇಷ ಪ್ರವಚನವನ್ನು ಆಯೋಜಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಉತ್ತರಾದಿ ಮಠದ ಪ್ರಧಾನ ವ್ಯವಸ್ಥಾಪಕ ಪಂ.ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ



ಮೈಸೂರಿನ ಪ್ರಮುಖ ಸ್ಥಳದಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ನಾಯಕ ಸಮಾಜದ ಹಿರಿಯ ಮುಖಂಡ ಕ್ಯಾತಮಾರನಹಳ್ಳಿ ವೆಂಕಟೇಶ್, ಉಪಾಧ್ಯಕ್ಷ ಜವರನಾಯಕ, ಪದಾಧಿಕಾರಿಗಳಾದ ಮರಿಸ್ವಾಮಿ ನಾಯಕ್, ಸಾಹುಕಾರಹುಂಡಿ ಮಹದೇವು, ನಾರಾಯಣ್, ಕೃಷ್ಣಪ್ಪ, ಫೋಟೋ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಜು.25ಕ್ಕೆ ಯಕ್ಷರಂಗದಿಂದ ಉಚಿತ ಯಕ್ಷಗಾನ ಪ್ರದರ್ಶನ

ದಾವಣಗೆರೆ, ಜು. 17– ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆ, ಕರಾವಳಿ ಮಿತ್ರ ಮಂಡಳಿ ಮತ್ತು ದೃಶ್ಯ ಕಲಾ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಜು.25, ಸಂಜೆ 6.30ಕ್ಕೆ ದಾವಣಗೆರೆಯ ವಿದ್ಯಾನಗರ ರಸ್ತೆಯ ದೃಶ್ಯಕಲಾ ಮಹಾವಿದ್ಯಾಲಯದ ಆವರಣದ ಒಳಾಂಗಣದಲ್ಲಿ ಉಡುಪಿ ಜಿಲ್ಲೆಯ ಹಾಲಾಡಿಯ ಶ್ರೀ ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿಯ ವೃತ್ತಿನಿರತ ಪ್ರಸಿದ್ಧ ಯಕ್ಷಗಾನ ಕಲಾವಿದರಿಂದ ಕೀರ್ತಿಶೇಷ ಹಲಸನಹಳ್ಳಿ ನರಸಿಂಹಶಾಸ್ತ್ರಿ ವಿರಚಿತ "ಚಂದ್ರಹಾಸ ಚರಿತ್ರೆ" ಪೌರಾಣಿಕ ಕಥಾನಕದ ಯಕ್ಷಗಾನ ಉಚಿತ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಡಿಎವಿ ಶಾಲೆಯ ವಿದ್ಯಾರ್ಥಿಗಳ ಸಾಧನೆ



ರಾಜ್ಯ ಸಬ್–ಜೂನಿಯರ್ ಈಜು ಚಾಂಪಿಯನ್ ಶಿಪ್ 2024–25ರ ವಿವಿಧ ವಿಭಾಗಗಳಲ್ಲಿ ಡಿ.ಎ.ವಿ ಪಬ್ಲಿಕ್ ಶಾಲೆಯ ಮಕ್ಕಳು ಬಹುಮಾನ ಗಳಿಸಿದ್ದಾರೆ.

ಮೈಸೂರು, ಜು. 17–ಬೆಂಗಳೂರಿನ ಬಸವನಗುಡಿಯ ಕಾರ್ಪೋರೇಷನ್ ಈಜು ಕೊಳದಲ್ಲಿ ಕರ್ನಾಟಕ ಈಜು ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಸಬ್–ಜೂನಿಯರ್ ಈಜು ಚಾಂಪಿಯನ್ ಶಿಪ್ 2024–25ರ ವಿವಿಧ ವಿಭಾಗಗಳಲ್ಲಿ ಭಾಗವಹಿಸಿದ್ದ ಡಿ.ಎ.ವಿ ಪಬ್ಲಿಕ್ ಶಾಲೆಯ ಮಕ್ಕಳು ಬಹುಮಾನಗಳನ್ನು ಗೆಲ್ಲುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಸುಬ್ರಹ್ಮಣ್ಯ ಜೀವಾಂಶ್ ಮಂಜುನಾಥ್ ವಿವಿಧ ವಿಭಾಗಗಳಲ್ಲಿ ಬಹುಮಾನಗಳನ್ನು ಗೆಲ್ಲುವುದರೊಂದಿಗೆ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ಸಾನ್ವಿ.ಆರ್, ಆದ್ರಿತ್.ಎ. ಶಾಂಡಿಲ್ಯ ವಿವಿಧ ವಿಭಾಗಗಳಲ್ಲಿ ಬಹುಮಾನಗಳನ್ನು ಗಳಿಸಿದ್ದಾರೆ. ಜೆ.ಪಿ.ನಗರದಲ್ಲಿ ಆಯೋಜಿಸಲಾಗಿದ್ದ ಆಲ್ ಸ್ಟಾರ್ ಬಾಸ್ಕೆಟ್‌ಬಾಲ್ ಲೀಗ್ 2024 ರಲ್ಲಿ ಭಾಗವಹಿಸಿದ್ದ ಆರಾಧ್ಯ, ವೈಭವ್.ಕೆ, ಕೈಲಾಶ್ ಕೆ.ಆರ್, ಬಹುಮಾನಗಳನ್ನು ಪಡೆದಿದ್ದಾರೆ. ಶಾಲೆಯ ಆಡಳಿತ ಮಂಡಳಿಯ ಸಿ.ಇ.ಓ ಶ್ರೀಮತಿ ಜಯಶ್ರೀ ಎಸ್.ಮೂರ್ತಿ, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಕೆ.ಆರ್. ಶೋಭಾ, ಉಪಪ್ರಾಂಶುಪಾಲರು ಶ್ರೀಮತಿ ಕಾವ್ಯಶ್ರೀ, ಮುಖ್ಯಶಿಕ್ಷಕಿ ಶ್ರೀಮತಿ ಬಿಂದುಶ್ರೀ ಸಾಧನೆಗೈದಿರುವ ಮಕ್ಕಳು ಹಾಜರಿದ್ದರು.

ಒಂದನೇ ಪುಟದಿಂದ

ಮುಂಗಾರು ಹಂಗಾಮಿನಲ್ಲಿ ಬೆಳೆಗಳಿಗೆ ನೀರು

ಕಬಿನಿ ಜಲಾಶಯದಿಂದ 30 ಸಾವಿರ ಕ್ಯುಸೆಕ್ ನೀರು ತಮಿಳುನಾಡಿಗೆ ಹರಿದು ಹೋಗುತ್ತಿರುವುದರಿಂದ ಕೆಆರ್‌ಎಸ್‌ನಿಂದ ನೀರು ಬಿಡುಗಡೆ ಮಾಡುವ ಪ್ರಶ್ನೆಯೇ ಇಲ್ಲ. ಹಾಗಾಗಿ ರೈತರು ಆತಂಕ ಪಡುವ ಅವಶ್ಯಕತೆ ಇಲ್ಲ. ಸಾಮಾನ್ಯವಾಗಿ ಪ್ರತಿ ವರ್ಷ ಜುಲೈ ಮಧ್ಯಭಾಗದಿಂದ ನೀರು ಹರಿಸುವುದು ವಾಡಿಕೆ. ಆ ಸಮಯದಿಂದಲೇ ಭತ್ತದ ಒಟ್ಲು ಮತ್ತು ರಾಗಿ ಬಿತ್ತನೆ ಪ್ರಾರಂಭವಾಗುತ್ತದೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರಿಯಾದ ಸಮಯಕ್ಕೆ ರೈತರಿಗೆ ಅನುಕೂಲವಾಗುವಂತೆ ನೀರು ಹರಿಸುವ ನಿರ್ಧಾರ ಮಾಡಿದ್ದೇವೆ. ವಿರೋಧಿಗಳು ಸುಮ್ಮನೆ ರಾಜಕೀಯ ಲಾಭ ಪಡೆಯಲು ನೀರಿನ ವಿಚಾರದಲ್ಲಿ ಟೀಕೆ ಮಾಡುತ್ತಿದ್ದಾರೆ ಎಂದು ಜರಿದರು.

ಗೋಷ್ಠಿಯಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಮುಖಂಡ ಟಿ.ಎಲ್. ಕೃಷ್ಣೇಗೌಡ, ಮನ್‌ಮುಲ್ ನಿರ್ದೇಶಕ ಕದಲೂರು ರಾಮಕೃಷ್ಣ ಇತರರಿದ್ದರು.

ಕನ್ನಡ ಕಲಿಯಿರಿ

ಮಾತನಾಡಿ, ಹೊರಗಿನವರು ಕೆಲಸ ಕಿತ್ತುಕೊಳ್ಳುತ್ತಿದ್ದಾರೆ ಎಂಬ ಭಾವನೆ ಹೋಗಲಾಡಿಸಲು ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ರೈಲ್ವೆ ಅಧಿಕಾರಿಗಳು ಕನ್ನಡ ಕಲಿಯಬೇಕು. ಕನ್ನಡ ಬಲ್ಲ ಅನೇಕ ಅಧಿಕಾರಿಗಳಿದ್ದಾರೆ, ಕನ್ನಡ ಭಾಷೆ ಗೊತ್ತಿರುವವರನ್ನು ಕೆಲಸಕ್ಕೆ ನೇಮಿಸಬೇಕು, ಇಲ್ಲವೇ ಇಲ್ಲಿ ಕೆಲಸ ಮಾಡುವವರು ಕನ್ನಡ ಕಲಿಯಬೇಕು ಎಂದು ಹೇಳಿದರು.

ಅವಧೂತ ದತ್ತಪೀಠದಲ್ಲಿ ಜು.21ರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ

ಸೆ.18ರವರೆಗೆ ನಿರಂತರ ವಿಶೇಷ ಪೂಜಾ ವಿಧಿ ವಿಧಾನ


ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು,ಜು.17–ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವವನ್ನು ಜು.21ರಿಂದ ಸೆ.18ರವರೆಗೆ ಆಯೋಜಿಸಲಾಗಿದೆ.

ಜು.21ರಂದು ಗುರುಪೂರ್ಣಿಮಾ ಅಂಗವಾಗಿ ಬೆಳಗ್ಗೆ ಗುರುಪರಂಪರಾ ಪೂಜೆ, ಚೈತನ್ಯಾರ್ಚನೆ, ವ್ಯಾಸಪೂಜೆ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪಾದುಕಾ ಪೂಜೆ, ಪವಮಾನ ಹೋಮ, ದತ್ತ ಹೋಮ, ಸಂಜೆ 6 ಗಂಟೆಗೆ ಶ್ರೀ ಅನುಮಾಂಡ್ಲ ಭೂಮಯ್ಯ ಅವರಿಗೆ 'ಶ್ರೀ ಗಣಪತಿ ಸಚ್ಚಿದಾನಂದ ಪ್ರಶಸ್ತಿ ಪ್ರದಾನ ಮತ್ತು ಶ್ರೀ ಗುರುಗೀತಾ ಪಾರಾಯಣ ನಡೆಯಲಿದೆ. ಜು.22ರಂದು ಶ್ರೀ ಬ್ರಹ್ಮಾಂಡ ಪುರಾಣ, ಸಂಜೆ 7ಕ್ಕೆ ಚಾತುರ್ಮಾಸ್ಯ ಪ್ರವಚನ ಪ್ರಾರಂಭವಾಗಲಿದೆ. ಜು.24 ಸಂಕಷ್ಟಹರ ಚತುರ್ಥಿ.

ಶತಚಂಡೀಯಾಗ ಪ್ರಾರಂಭ: ಜು.26 ಆಷಾಢ ಮಾಸ ಪ್ರಯುಕ್ತ ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ಮತ್ತು ಶ್ರೀ ರಾಜರಾಜೇಶ್ವರಿ ದೇವಿಗೆ ಅರ್ಚನೆ, ಜು.28ರಂದು ಅನಘಾಷ್ಟಮಿ ವ್ರತ ಮತ್ತು ದತ್ತ ಸ್ವಾಮಿಗೆ ತೈಲಾಭಿಷೇಕ, ಜು.29ರಂದು ಶ್ರೀ ಮರಕತ ಸುಬ್ರಹ್ಮಣ್ಯಸ್ವಾಮಿಗೆ ಆಡೀ ಕೃತ್ತಿಕ ಪ್ರಯುಕ್ತ ಕಾವಡಿ ಸೇವೆ, ವಿಶೇಷ ಅಭಿಷೇಕ, ವಿಶೇಷ ಅರ್ಚನೆ, ಜು.31ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಶ್ರೀ ಸ್ವಾಮೀಜಿಯವರ ಏಕಾದಶೀ ಮೌನವ್ರತ, ಆ.2ರಂದು ಆಷಾಢ ಮಾಸ ಪ್ರಯುಕ್ತ ಶ್ರೀ ವಿಶಾಲಾಕ್ಷೀ ಅಮ್ಮನವರಿಗೆ ಮತ್ತು ಶ್ರೀ ರಾಜರಾಜೇಶ್ವರಿ ದೇವಿಗೆ ವಿಶೇಷ ಅರ್ಚನೆ; ಆ.4ರಂದು ಶತ ಚಂಡೀ ಯಾಗದ ಮಹಾಪೂರ್ಣಾಹುತಿ, ಶ್ರೀ ಚಾಮುಂಡಿದೇವಿ ಆಲಯದಲ್ಲಿ ಅಮ್ಮನವರಿಗೆ ಫಲ ಸಮರ್ಪಣೆ, ದತ್ತ ಸ್ವಾಮಿಗೆ ತೈಲಾಭಿಷೇಕ.

ಶ್ರಾವಣ ಮಾಸ ಆರಂಭ, ಕುಂಕುಮಾರ್ಚನೆ: ಆ.5ರಂದು ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣಮಾಸ ಪ್ರಯುಕ್ತ ಏಕಾದಶ ರುದ್ರಾಭಿಷೇಕ, ಆಶ್ಲೇಷ ಬಲಿ ಪೂಜೆ.

ಸಂಪೂರ್ಣ ಶ್ರೀಮದ್ರಾಮಾಯಣ ಮಹಾಯಾಗ: ಆ.9ರಂದು ಗರುಡ ಪಂಚಮಿ, ನಾಗಪಂಚಮಿ, ನಾಗೇಂದ್ರಸ್ವಾಮಿಗೆ ವಿಶೇಷ ಅರ್ಚನೆ, ವೇದವಟುಗಳಿಗೆ ಭೋಜನ; ಆ.10ರಂದು ಶ್ರಾವಣ ಶನಿವಾರ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರಸ್ವಾಮಿಗೆ ವಿಶೇಷ ಅರ್ಚನೆ; ಆ.11ರಂದು ಭಾನುಸಪ್ತಮಿ, ಸೌರಹೋಮ, ಆದಿತ್ಯ ಹೃದಯ ಪಾರಾಯಣ, ಶ್ರೀ ಸೂರ್ಯ ನಾರಾಯಣ ಸ್ವಾಮಿಗೆ ವಿಶೇಷ ಅರ್ಚನೆ, ದತ್ತ ಸ್ವಾಮಿಗೆ ತೈಲಾಭಿಷೇಕ; ಆ.12ರಂದು ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣಮಾಸ ಪ್ರಯುಕ್ತ ಏಕಾದಶ ರುದ್ರಾಭಿಷೇಕ, ನರಹರಿ ತೀರ್ಥರ ಆರಾಧನೆ, ಅರ್ಚಕ ಸಭೆ. ಶ್ರೀ ದುಗ್ಗಿರಾಲ ಯಾಜ್ಞವಲ್ಕ್ಯ ದಿಲೀಪಕುಮಾರ ಶರ್ಮರಿಗೆ ಸ್ಮಾರ್ತನರಹರಿ ಪ್ರಶಸ್ತಿ ಪ್ರದಾನ.


ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ

ದತ್ತಯಾಗ: ಆ.15ರಂದು ಸ್ವಾತಂತ್ರ್ಯ ದಿನಾಚರಣೆ, ಧ್ವಜ ವಂದನೆ, ಬಾಲಕ ಬಾಲಕಿಯರಿಗೆ ವಸ್ತ್ರಧಾನ, ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಶ್ರೀ ಸ್ವಾಮೀಜಿಯವರ ಏಕಾದಶಿ ಮೌನವ್ರತ, ಆ.16ರಂದು ವರಮಹಾಲಕ್ಷ್ಮಿ ವ್ರತ.

ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ಪವಿತ್ರೋತ್ಸವ: ಆ.17ರಂದು ಶ್ರಾವಣ ಶನಿವಾರ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಶನಿತ್ರಯೋದಶಿ, ಶನಿ ತೈಲಾಭಿಷೇಕ; ಆ.18ರಂದು ಶ್ರೀ ಮದ್ರಾಮಾಯಣ ಯಾಗ ಮಹಾಪೂರ್ಣಾಹುತಿ, ದತ್ತ ಯಾಗ ಮಹಾಪೂರ್ಣಾಹುತಿ, ದತ್ತ ಸ್ವಾಮಿಗೆ ತೈಲಾಭಿಷೇಕ; ಆ.19ರಂದು ರಾಖಿ ಹುಣ್ಣಿಮೆ, ಹಯಗ್ರೀವ ಜಯಂತಿ, ಪವಮಾನ ಹೋಮ, ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಮಾಸ ಪ್ರಯುಕ್ತ ಏಕಾದಶ ರುದ್ರಾಭಿಷೇಕ; ಆ.22ರಂದು ಸಂಕಷ್ಟಹರ ಚತುರ್ಥಿ, ಆ.24ರಂದು ಶ್ರಾವಣ ಶನಿವಾರ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಶ್ರೀ ಭೂ ಸಮೇತ ಶ್ರೀ ದತ್ತ ವೆಂಕಟರಮಣ ಸ್ವಾಮಿಯವರ ದಿವ್ಯ ಕಲ್ಯಾಣ, ಆ.25ರಂದು ದತ್ತ ಸ್ವಾಮಿಗೆ ತೈಲಾಭಿಷೇಕ, ಆ.26ರಂದು ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣಮಾಸ ಪ್ರಯುಕ್ತ ಏಕಾದಶ ರುದ್ರಾಭಿಷೇಕ, ಅನಘಾಷ್ಟಮಿ ವ್ರತ, ಶ್ರೀ ಕೃಷ್ಣಾಷ್ಟಮಿ, ಗೋಪೂಜೆ, ಗೋಪಾಲಕರಿಗೆ ಸನ್ಮಾನ, ಜನ್ಮಾಷ್ಟಮಿ ಪ್ರಯುಕ್ತ ನಿಶೀಥಿಪೂಜೆ; ಆ.29ರಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಗಮನ, ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಶ್ರೀ ಸ್ವಾಮೀಜಿಯವರ ಏಕಾದಶೀ ಮೌನವ್ರತ, ಆ.30ರಂದು ಮಹಾಸುದರ್ಶನ ಯಾಗ, ಆ.31ರಂದು ಶನಿ ತ್ರಯೋದಶಿ, ನವಗ್ರಹ ಸಹಿತ ಶನೈಶ್ಚರ ಮಹಾಯಾಗ, ಶ್ರಾವಣ ಶನಿವಾರ ಪ್ರಯುಕ್ತ ಶ್ರೀದತ್ತ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅರ್ಚನೆ, ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸೆ.1ರಂದು ಮಾಸ ಶಿವರಾತ್ರಿ ದತ್ತ ಸ್ವಾಮಿಗೆ ತೈಲಾಭಿಷೇಕ, ಸೆ.2ರಂದು ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣಮಾಸ ಪ್ರಯುಕ್ತ ಏಕಾದಶ ರುದ್ರಾಭಿಷೇಕ, ಕುಂಕುಮಾರ್ಚನೆ ಪರಿಸಮಾಪ್ತಿ.

ಇಷ್ಟಿಯಾಗ

ಸೆ.5ರಂದು ಬಲರಾಮ ಜಯಂತಿ, ವರಾಹ ಜಯಂತಿ, ಶಿಕ್ಷಕರ ದಿನಾಚರಣೆ, ಸೆ.6ರಂದು ಸ್ವರ್ಣಗೌರೀ ವ್ರತ, ಸೆ.7ರಂದು ವಿನಾಯಕ ಚತುರ್ಥಿ, ಸಹಸ್ರ ಮೋದಕ ಗಣಪತಿ ಹೋಮ, ಶ್ರೀ ಗಣಪತಿ ನವರಾತ್ರಿ ಪ್ರಾರಂಭ, ಸೆ.8ರಂದು ದತ್ತ ಸ್ವಾಮಿಗೆ ತೈಲಾಭಿಷೇಕ, ಋಷಿ ಪಂಚಮಿ ಪ್ರಯುಕ್ತ ಚತುರ್ವೇದ ಸಭೆ. ಸೆ.13ರಿಂದ 15ರವರೆಗೆ ಕ್ರಿಯಾಯೋಗ ತರಗತಿಗಳು, ಸೆ.13ರಿಂದ 17ರವರೆಗೆ ಶ್ರೀ ಸಂತಾನ ಗೋಪಾಲಯಾಗ, ಸೆ.14ರಂದು ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಏಕಾದಶಿ ಮೌನ ವ್ರತ, ಸೆ.15ರಂದು ದತ್ತ ಸ್ವಾಮಿಗೆ ತೈಲಾಭಿಷೇಕ, ಶ್ರೀ ಅನಘಾಲಕ್ಷ್ಮೀ ಸಮೇತ ಶ್ರೀ ದತ್ತಸತ್ಯ ನಾರಾಯಣ ಸ್ವಾಮಿ ದಿವ್ಯಕಲ್ಯಾಣ, ಸೆ. 16ರಂದು ಗಣಪತಿ ನವಾರಾತ್ರಿ ಸಮಾಪ್ತಿ ಸೆ.17ರಂದು ಅನಂತಪದ್ಮನಾಭ ವ್ರತ, ಸಮತಾನ ಗೋಪಾಲಯಾಗ ಪರಿ ಸಮಾಪ್ತಿ, ಸೆ.18 ರಂದು ಚಾತುರ್ಮಾಸ್ಯ ವ್ರತ ಪರಿಸಮಾಪ್ತಿ, ಪವಮಾನ ಹೋಮ, ಸೀಮೋಲ್ಲಂಘನ, ಬೆಂಗಳೂರಿಗೆ ವಿಶ್ವ ರೂಪ ವಿಜಯಯಾತ್ರೆ ನಡೆಯಲಿದೆ.

ಕಾರ್ ಸ್ಟಂಟ್ ಮಾಡಿದ ಯುವಕನ ಮೇಲೆ ಹಲ್ಲೆ; 6 ಮಂದಿ ಸೆರೆ

ಮೈಸೂರು, ಜು.17(ಆರ್‌ಕೆ)– ಕಾರ್‌ನ ಮೂಲಕ ಸ್ಟಂಟ್ ಮಾಡಿದ ಯುವಕನನ್ನು ಥಳಿಸಿದ್ದ 6 ಮಂದಿಯನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು, ತಲೆಮರೆಸಿಕೊಂಡಿರುವ ನಾಲ್ವರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಮೈಸೂರಿನ ದಟ್ಟಗಳ್ಳಿ ನಿವಾಸಿಗಳಾದ ಪವನ್ ಅಲಿಯಾಸ್ ಡಾಲಿ, ತೇಜಸ್, ಅಗ್ನಿ, ಹೇಮಂತ, ಅಮೀರ್ ಹಾಗೂ ಮತ್ತೊರ್ವ ತೇಜಸ್ ಬಂಧಿತರು. 19ರಿಂದ 20 ವರ್ಷ ವಯಸ್ಸಿನ ಈ ಯುವಕರು, ಬೆಂಗಳೂರು ಮೂಲದ ದರ್ಶನ್ ಮೇಲೆ ಹಲ್ಲೆ ನಡೆಸಿದ್ದರು.

ಜುಲೈ 11ರಂದು ಸಂಜೆ ಸುಮಾರು 6 ಗಂಟೆ ವೇಳೆಯಲ್ಲಿ ದಟ್ಟಗಳ್ಳಿಯ ಲೆಮೆನ್ ಟ್ರೀ ಹೋಟೆಲ್ ಬಳಿ ದರ್ಶನ್ ಸ್ನೇಹಿತರೊಂದಿಗೆ ಮಾತನಾಡುತ್ತಾ ನಿಂತಿದ್ದಾಗ, ಪವನ್ ಹಾಗೂ ಇತರರು ಅಲ್ಲಿಗೆ ಬಂದು, ಈತನ ಕಡೆ ನೋಡಿ, ವ್ಯಂಗ್ಯವಾಡಿ, ರೇಗಿಸಿದ್ದಾರೆ. ಈ ವಿಚಾರಕ್ಕೆ ಮಾತಿಗೆ ಮಾತು ಬೆಳೆಯುತ್ತಿದ್ದಂತೆಯೇ ತನ್ನ ಕಾರ್‌ನಲ್ಲಿ ಅಲ್ಲಿಂದ ಹೊರಟ ದರ್ಶನ್, ಮತ್ತೆ ವೇಗವಾಗಿ ವಾಪಸ್ ಬಂದು ಯುವಕರ ಮೇಲೆ ಹರಿಸುವ ಹಾಗೆ ಸ್ಟಂಟ್ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಇದರಿಂದ ಕೆರಳಿದ ಪವನ್, ಆತನ ಜೊತೆಗಿದ್ದ ಯುವಕರು ದರ್ಶನ್ ಮೇಲೆ ಹಲ್ಲೆ ನಡೆಸಿ, ನಂತರ ಆ ಕಾರಿನಲ್ಲೇ ಆತನ ಕೂರಿಸಿಕೊಂಡು ಥಳಿಸಿ, ಕೊನೆಗೆ ಅಶೋಕಪುರಂ ರೈಲು ನಿಲ್ದಾಣ ಬಳಿ ಬಿಟ್ಟು ಹೋಗಿದ್ದರು. ಆ ವೇಳೆ ಹಣ ಕೊಡುವಂತೆಯೂ ಪೀಡಿಸಿ, ಕಡೆಗೆ ದರ್ಶನ್ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು.

ನಾಲ್ವರಿಗಾಗಿ ಶೋಧ

ಜುಲೈ 13ರಂದು ದರ್ಶನ್ ತಂದೆ ಉಮೇಶ್ ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 115(2), 119(1), 127(2) ಹಾಗೂ 190 ರೀತ್ಯಾ (ಕಾರು ಅಡ್ಡಗಟ್ಟಿ ಹಲ್ಲೆ ಮಾಡಿ ಮೊಬೈಲ್ ಕಿತ್ತುಕೊಂಡಿರುವ ಬಗ್ಗೆ) ಕುವೆಂಪುನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಅರುಣ್ ಪ್ರಕರಣ ದಾಖಲಿಸಿಕೊಂಡಿದ್ದರು.

ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಆಧರಿಸಿ ತನಿಖಾ ಕಾರ್ಯ ಕೈಗೆತ್ತಿಕೊಂಡ ಪೊಲೀಸರು, ಅಂತೂ ಪವನ್, ತೇಜಸ್, ಅಗ್ನಿ, ಹೇಮಂತ, ಅಮೀರ್ ಹಾಗೂ ತೇಜಸ್‌ನನ್ನು ಬಂಧಿಸಿದ್ದಾರೆ. ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡು ತಲೆಮರೆಸಿಕೊಂಡಿರುವ ಇತರ ನಾಲ್ವರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಮಾತಾ ಅಮೃತಾನಂದ ಮಯಿ ಮಠದಲ್ಲಿ ಗುರುಪೂರ್ಣಿಮೆ

ಮೈಸೂರು,ಜು.17–ಬೋಗಾದಿ 2ನೇ ಹಂತದ ಮಾತಾ ಅಮೃತಾನಂದಮಯಿ ಮಠದಲ್ಲಿ ಜು.21ರಂದು ಗುರು ಪೂರ್ಣಿಮೆ ಆಚರಿಸಲಾಗುವುದು.

ಗುರು ಪೂರ್ಣಿಮಾ ಭಾಗವಾಗಿ ಗುರು ಗಣಪತಿ ಹೋಮ ಮತ್ತು ನವಗ್ರಹ ಹೋಮ ಬೆಳಗ್ಗೆ 6 ಗಂಟೆಗೆ ನಡೆಯಲಿದೆ. ಗುರುಪಾದುಕಾ ಪೂಜೆ, ಅರ್ಚನೆ, ಭಕ್ತರಿಂದ ಕ್ಷೀರಾಭಿಷೇಕ, ಭಜನೆ ಮತ್ತು ಸತ್ಸಂಗ ಬೆಳಗ್ಗೆ 10 ಗಂಟೆಯ ನಂತರ ನಡೆಯಲಿದೆ. ಮಧ್ಯಾಹ್ನ 12:30ಕ್ಕೆ ಆರತಿ, ಮಹಾಪ್ರಸಾದ ವಿತರಣೆ ನಡೆಯಲಿದೆ.

ಇಂದಿನಿಂದ ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಶಾಲಾಕ್ಯತಂತ್ರ ವಿಭಾಗದ ವತಿಯಿಂದ ಜು.18ರಿಂದ 25ರವರೆಗೆ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9448211075, 7483704114 ಸಂಪರ್ಕಿಸಬಹುದು.

ಇಂದು ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಜು.17–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.18ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–4259259.

ಅಖಿಲ ನಾಮಧಾರಿಗೌಡ ನೌಕರರ ಸಂಘದ ವಾರ್ಷಿಕ ಮಹಾಸಭೆ




ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಅಖಿಲ ನಾಮಧಾರಿಗೌಡರ ನೌಕರರ ಸಂಘದ ವಾರ್ಷಿಕ ಮಹಾಸಭೆ ನಡೆಯಿತು.

ಮೈಸೂರು, ಜು. 17–ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ಮತ್ತು ಸರಗೂರು ತಾಲೂಕಿನ ಅಖಿಲ ನಾಮಧಾರಿಗೌಡರ ನೌಕರರ ಸಂಘದ 18ನೇ ವಾರ್ಷಿಕ ಮಹಾಸಭೆಯನ್ನು ಸರಗೂರಿನ ಅಖಿಲ ನಾಮಧಾರಿ ಗೌಡ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ತಾಲೂಕು ಅಖಿಲ ನಾಮಧಾರಿಗೌಡ ಸಮಾಜದ ಅಧ್ಯಕ್ಷ ಎಂ.ಎನ್.ಭೀಮ್‌ರಾಜ್ ಉದ್ಘಾಟಿಸಿ ಮಾತನಾಡಿ, ನೌಕರರ ಸಂಘ ಮತ್ತು ಯುವಕರ ಸಂಘ ಸಮಾಜದ ಎರಡು ಕಣ್ಣುಗಳಿದ್ದಂತೆ. ಮಕ್ಕಳಿಗೆ ಆಸ್ತಿ ಮುಖ್ಯವಲ್ಲ, ವಿದ್ಯೆ ಕಲಿಸಿ ಸರಿಯಾದ ದಾರಿಯನ್ನು ತೋರಿಸುವಂತದ್ದು. ನಾವು ಈಗ ಕಲಿಸಿದ ಉತ್ತಮ ಸಂಸ್ಕಾರ ಮುಂದೆ ಅವರಿಗೆ ದಾರಿದೀಪವಾಗುತ್ತದೆ ಎಂದರಲ್ಲದೆ, ನಮ್ಮ ಸಮಾಜವನ್ನು ಒಬಿಸಿಗೆ ಸೇರಿಸಲು ಶ್ರಮಿಸೋಣ ಎಂದು ಕರೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಕೆಲಸದಿಂದ ನಿವೃತ್ತರಾದ ನೌಕರರಿಗೆ ಸನ್ಮಾನಿಸಲಾಯಿತು. ಪ್ರತಿಭಾ ಪುರಸ್ಕಾರವನ್ನು ಎ.ಅಂಕಪ್ಪ, ಬಹುಮಾನವನ್ನು ಕೆ.ಕೆಂಪರಾಜು ವಿತರಿಸಿದರು. ವೇದಿಕೆಯಲ್ಲಿ ನೌಕರರ ಸಂಘದ ಅಧ್ಯಕ್ಷ ಎಸ್.ನಾಗೇಂದ್ರ, ಉಪಾಧ್ಯಕ್ಷ ಎ.ಬಿ. ರಮೇಶ್, ಪ್ರಧಾನ ಕಾರ್ಯದರ್ಶಿ ಎ.ಪ್ರಸನ್ನ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.07.2024 ಗುರುವಾರ, ಮಳೆ ನಕ್ಷತ್ರ: ಪುನರ್ವಸು 6.07.2024 ರಿಂದ 19.07.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಶಾಲಾಕ್ಯತಂತ್ರ ವಿಭಾಗ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್:** ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ
- **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಹಿಮಾಲಯ ಪರ್ವತಾರೋಹಿ ಡಾ. ಉಷಾ ಹೆಗ್ಡೆ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಮುಖ್ಯ ಅತಿಥಿಗಳು : ಎನ್‌ಐಇ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಆರ್. ಕಾವ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ :** ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ಪಿ.ಎಸ್. ಗಂಗಾಧರ್ ಅವರಿಂದ ಆಯ್ಕೆ ಮತ್ತು ಅವಕಾಶದ ವೆಚ್ಚದ ನಡುವೆ ಸಮತೋಲನ ಸಾಧನೆ–ಇಕಾನ್ ಡಿಪ್ಲೊಮ್ಯಾಟ್ ದೃಷ್ಟಿಕೋನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ನವಿತಾ ತಿಮ್ಮಯ್ಯ, ಸ್ಥಳ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಆವರಣ, ಮಾನಸಗಂಗೋತ್ರಿ, ಬೆಳಗ್ಗೆ 11.45ಕ್ಕೆ.
- **ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್), ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್ :** ಹೊಸ ಅಪರಾಧಿಕ ಕಾನೂನುಗಳ ನೋಟ ಕುರಿತು ವಿದ್ಯಾವರ್ಧಕ ಕಾನೂನು ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಎ.ಆರ್.ಪ್ರಕೃತಿ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಪಿಯುಸಿಎಲ್, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಪ್ರೊ.ಕೆ.ಕಾಳಚನ್ನೇಗೌಡ, ಸ್ಥಳ: 403, ಶ್ಯಾಗಲೆ ಹೌಸ್, ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್, ಗೋಕುಲಂ ಮೂರನೇ ಹಂತ, ಸಂಜೆ 4ರಿಂದ.
- **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ :** ಶ್ರೀ ಜಯಚಾಮರಾಜ ಒಡೆಯರ್ ಸಂಸ್ಮರಣಾ ದಿನಾಚರಣೆ, ಉದ್ಘಾಟನೆ : ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ರೋ. ಎಂ.ಎಲ್. ನಾಗೇಶ್, ಶ್ರೀ ಜಯಚಾಮರಾಜ ಒಡೆಯರ್‌ರವರ ಕೃತಿಗಳನ್ನಾಧರಿಸಿದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಎಸ್.ಆರ್. ವಿನಯ್ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ಸುನಾದ ಕೃಷ್ಣ–ಮೃದಂಗ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ.
- **ಶ್ರೀ ಕೃಷ್ಣ ಗಾನಸಭಾ :** ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ 105ನೇ ಜಯಂತಿ ಮಹೋತ್ಸವ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ವಿದುಷಿ ಅದಿತಿ ಪ್ರಹ್ಲಾದ್ ಅವರಿಂದ ಗಾಯನ, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಕೇಶವ ಎಂ. ಕುಮಾರ್ –ಪಿಟೀಲು, ವಿದ್ವಾನ್ ಎಂ.ಜೆ. ಕಿರಣ್‌ಕುಮಾರ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ 3ನೇ ಹಂತ, ಸಂಜೆ 6ಕ್ಕೆ.
- **ಶ್ರೀ ಕೃಷ್ಣ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಮಿತ್ರ ಮಂಡಳಿ :** ಉಡುಪಿ ಶ್ರೀ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾದೀಶತೀರ್ಥ ಶ್ರೀಪಾದಂಗಳವರಿಂದ ಶ್ರೀ ಮನ್ಮಹಾಭಾರತ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ–ಸಮಾಚಾರ, ಬಾನುಲಿ ಸರಣಿ, ಪ್ರಸ್ತುತಿ : ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎ.ಎನ್.ಶೀಲಾ, ವ್ಯಾಖ್ಯಾನ: ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ತ್ಯಾಗರಾಜರ ಕೃತಿಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು: ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.30 ದೇವರನಾಮ, 12.45 ಚಟ್–ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆಗಳು–ಎಂ.ವಾಣಿ ಸತೀಶ್, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತೀ: ಸರಿಸೃಪಗಳು ಹಾಗೂ ಉಭಯಚರಿಗಳ ಕುರಿತು ಪರಿಸರವಾದಿ ಹಾಗೂ ವನ್ಯಜೀವಿ ಛಾಯಾಚಿತ್ರಗ್ರಾಹಕ ಸುಹಾಸ್ ಪ್ರೇಮ್‌ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿಕೊಡುವವರು: ಜಿ.ಶಾಂತಕುಮಾರ್ ಹಾಗೂ ಸಹನಾ, 6.10 ಸಂವಹನ ಸಮಾಚಾರ–ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಮ್ ಕಂಪನಿ–ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ. ಪ್ರಸ್ತುತಿ: ಎನ್.ಕೇಶವಮೂರ್ತಿ, 8.00 ಹಲೋ ಯುವವಾಣಿ: ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ: ನಿವೇದಿತಾ. ಎಚ್, 8.30 ಹಿಂದಿ ಚಿತ್ರಗೀತೆಗಳು, 10.00 ನಾಟಕ: ಟಾಲ್ಸ್ ಟಾಯ್ ಮಹರ್ಷಿಯ ಬೂರ್ಜ ವ್ಯಕ್ತಗಳು, ಮೂಲಕಥೆ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ರೇಡಿಯೋ ರೂಪಕ ನಾಟಕ: ಆರ್.ಕೆ. ಸೀತಮ್ಮ, 10.30 ಸವಿನೆನಪು

ಬ್ರಾಹ್ಮಣ ಬಾಂಧವರಿಂದ ಸಂಸದ ಯದುವೀರರಿಗೆ ಆತ್ಮೀಯ ಅಭಿನಂದನೆ



ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಬ್ರಾಹ್ಮಣ ಸಂಘ-ಸಂಸ್ಥೆಗಳ ವತಿಯಿಂದ ನೂತನ ಸಂಸದರಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮತ್ತಿತರರಿದ್ದರು.

ಸಮುದಾಯದ ಸಮಸ್ಯೆ ಪರಿಹಾರಕ್ಕೆ ಬದ್ಧ: ಯದುವೀರ್

ಮೈಸೂರಿನ ಮೂಲ ಕಲೆ-ಸಂಸ್ಕೃತಿಗೆ ಆದ್ಯತೆ...

ಆಧುನಿಕತೆಗೆ ಅನುಗುಣವಾಗಿ ಮೈಸೂರಿನ ಮೂಲ ಕಲೆ-ಸಂಸ್ಕೃತಿಯನ್ನು ಉಳಿಸಿಕೊಂಡು ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಈಗಾಗಲೇ ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಪರಿಶೀಲನೆ ನಡೆಸಿದ್ದು, ಅವುಗಳನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಮೈಸೂರಿನ ಸಮಗ್ರ ಅಭಿವೃದ್ಧಿ ಚಿಂತನೆ ನಡೆಸಲಾಗಿದೆ. ಪಾರಂಪರಿಕ ಕಟ್ಟಡ ಉಳಿವು, ಪ್ಲಾಸ್ಟಿಕ್ ಮುಕ್ತ ಮೈಸೂರು, ಮೈಸೂರಿನಲ್ಲಿ ಶಿಕ್ಷಣ, ಸಾಂಸ್ಕೃತಿಕ, ಕಲೆ, ಸಂಗೀತ, ಸಾಹಿತ್ಯ ಉಳಿಸಲು ಶ್ರಮಿಸುತ್ತೇನೆ.

- ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅವರನ್ನು ಶ್ರೀ ರಾಮಸೇನೆ ವತಿಯಿಂದ ಅಭಿನಂದಿಸಲಾಯಿತು. ಶ್ರೀ ರಾಮಸೇನೆಯ ಸಂತೋಷ್ ಶಂಭು, ಮನು ಶೈವ್, ಹೇಮಂತ್, ಪುನೀತ್, ಕಿರಣ್, ಸಂಜಯ್ ಮತ್ತಿತರರಿದ್ದರು.

ಮೈಸೂರು, ಜು.17(ಎಂಕೆ)- ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಮಮಂದಿರದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಬ್ರಾಹ್ಮಣ ಸಂಘ-ಸಂಸ್ಥೆಗಳ ವತಿಯಿಂದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಯದುವೀರ್, ನನ್ನ ಗೆಲುವಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಬ್ರಾಹ್ಮಣ ಸಮುದಾಯದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಸಮುದಾಯದ ಯಾವುದೇ ಸಮಸ್ಯೆಗಳಿದ್ದರೂ ಬಗೆಹರಿಸುವ ಪ್ರಯತ್ನ ಮಾಡುತ್ತೇನೆ. ನನ್ನ ಬಾಲ್ಯ ಕಳೆದ ಲಕ್ಷ್ಮಿಪುರಂ, ಕೃಷ್ಣಮೂರ್ತಿಪುರಂನಲ್ಲಿರುವ ಬ್ರಾಹ್ಮಣ ಸಮುದಾಯದವರ ಸಮಸ್ಯೆ ಎಂದರೆ ಅದು ನಮ್ಮ ಮನೆಯ ಸಮಸ್ಯೆಯೇ. ಹಾಗಾಗಿ ಮೊದಲು ಮನೆಯಲ್ಲಿನ ಸಮಸ್ಯೆಗಳನ್ನು ಬಗೆಹರಿಸುವಂತೆ ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಳೆದ ಒಂಬತ್ತು ವರ್ಷಗಳಿಂದ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ರಾಜಕೀಯದ ಅನುಭವ ಇರಲಿಲ್ಲ. ಲೋಕಸಭಾ ಚುನಾವಣೆ ಅಭ್ಯರ್ಥಿಯಾಗುತ್ತೇನೆ ಎಂಬ ಸುಳಿವು ಸಿಕ್ಕ ಕೂಡಲೇ ಶೃಂಗೇರಿ ಗುರುಗಳ ದರ್ಶನಕ್ಕೆ ತೆರಳಿದೆ. ಅಭ್ಯರ್ಥಿಯಾದ ನಂತರ ನಿಮ್ಮೆಲ್ಲರ ಬೆಂಬಲದಿಂದ ಸಂಸದನಾಗಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಜನರ ಸಮಸ್ಯೆಗಳಿಗೆ ಸ್ಪಂದಿಸಲು ಅರಮನೆಯಲ್ಲೇ ಸಾರ್ವಜನಿಕ ಕಚೇರಿ ತೆರೆಯಲಾಗಿತ್ತು. ಶ್ರೀಕಂಠದತ್ತ ನರಸಿಂಹ ಒಡೆಯರ್ ಅವರು ಸಂಸದರಾಗಿದ್ದಾಗ ಅದೇ ಕಚೇರಿ ಬಳಸುತ್ತಿದ್ದರು. ನಾನು ಸಹ ಅವರ ದಾರಿಯಲ್ಲೇ ಸಾಗಲಿದ್ದೇನೆ. ಸದ್ಯದಲ್ಲಿಯೇ ಕಾಡಾ ಕಚೇರಿಯಲ್ಲಿ ನಮ್ಮ ಕಚೇರಿ ಆರಂಭವಾಗಲಿದ್ದು, ಏನೇ ಸಮಸ್ಯೆಗಳಿದ್ದರೂ ನೇರವಾಗಿ ಬಂದು ಭೇಟಿ ಮಾಡಿ ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಚುನಾವಣೆಯ ಸಂದರ್ಭದಲ್ಲಿ ಯದುವೀರ್ ಅವರನ್ನು ಇದೇ ರಾಮಮಂದಿರಕ್ಕೆ ಆಹ್ವಾನಿಸಿ, ವಿಪ್ರ ಸಮಾಜ ಸಂಪೂರ್ಣ ಬೆಂಬಲ ನೀಡುವುದಾಗಿ ತೆಗೆದುಕೊಂಡ ನಿರ್ಧಾರದಂತೆ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಲಾಗಿದೆ. ಚುನಾವಣೆ ವೇಳೆ ರಾಜವಂಶಸ್ಥರು ಅರಮನೆ ಬಿಟ್ಟು ಸಾರ್ವಜನಿಕರೊಂದಿಗೆ ಬೆರೆಯುತ್ತಾರಾ ಎಂಬಿತ್ಯಾದಿ ಅಪಪ್ರಚಾರ ಮಾಡಲಾಗಿತ್ತು. ಆದರೆ ಎಲ್ಲಾ ಅಪಪ್ರಚಾರಗಳಿಗೂ ಯದುವೀರ್ ಅವರು ತಮ್ಮ ನಡವಳಿಕೆ, ಕಾರ್ಯವೈಖರಿಯಿಂದಲೇ ಉತ್ತರ ನೀಡಿದ್ದಾರೆ.

ನುಡಿದಂತೆ ನಡೆಯುತ್ತಾರೆ: ಮೈಸೂರು ಮಹಾರಾಜರು ನುಡಿದಂತೆ ನಡೆಯುತ್ತಾರೆ ಎಂಬುದನ್ನು ಯದುವೀರ್ ಅವರು ನಿರೂಪಿಸಿದ್ದಾರೆ. ಸಾಮಾಜಿಕ ಕಾರ್ಯಗಳ ಮೂಲಕ ಜನಮುಖಿಯಾಗಿರುವ ಅವರು, ಸಾರ್ವಜನಿಕರ ಮಧ್ಯೆ ಕೆಲಸ ಮಾಡುತ್ತಿರುವುದು ಹೆಮ್ಮೆಯಾಗಿದೆ. ಮೈಸೂರಿಗೆ ಬರುವ ಪ್ರವಾಸಿಗರು, ಮೈಸೂರಿನಲ್ಲಿಯೇ ಉಳಿದು ವ್ಯಾಪಾರಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸರ್ಕಾರಿ ಸವಲತ್ತುಗಳನ್ನು ಕೊಡಿಸಿ: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಬ್ರಾಹ್ಮಣ ಸಮುದಾಯಕ್ಕೆ ನೀಡಿರುವ ಶೇ.10 ಮೀಸಲಾತಿ ಸರಿಯಾಗಿ ಜಾರಿಯಾಗಿಲ್ಲ. ಮೀಸಲಾತಿ ಸೇರಿದಂತೆ ಅನೇಕ ಸಮಸ್ಯೆಗಳನ್ನು ಬ್ರಾಹ್ಮಣ ಸಮುದಾಯ ಎದುರಿಸುತ್ತಿದೆ. ಆದ್ದರಿಂದ ನ್ಯಾಯಯುತವಾಗಿ ಬ್ರಾಹ್ಮಣ ಸಮುದಾಯಕ್ಕೆ ಸರ್ಕಾರದಿಂದ ದೊರೆಯಬೇಕಾದ ಸವಲತ್ತುಗಳನ್ನು ಕೊಡಿಸಿ. ಬ್ರಾಹ್ಮಣ ಯುವ ಸಮುದಾಯಕ್ಕೆ ಬೆಂಬಲ ನೀಡಿ ಎಂದು ಮನವಿ ಮಾಡಿದರು.

ಪೂರ್ಣಕುಂಭ ಸ್ವಾಗತ: ಇದಕ್ಕೂ ಮುನ್ನ ಅಭಿನಂದನಾ ಸಮಾರಂಭಕ್ಕೆ ಆಗಮಿಸಿದ ಸಂಸದ ಯದುವೀರ್ ಅವರಿಗೆ ವೇದಘೋಷ ಹಾಗೂ ನಾದಸ್ವರದೊಂದಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಅಲ್ಲದೆ ವಿದ್ಯಾರಣ್ಯಪುರಂ ಶ್ರೀನಿಧಿ ಭಜನಾ ತಂಡದಿಂದ ಭಜನೆ ನಡೆಸಿಕೊಡಲಾಯಿತು.

ಮೇಲುಕೋಟೆಯ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಬ್ರಾಹ್ಮಣ ಸಂಘದ ಗ್ರಾಮಾಂತರ ಅಧ್ಯಕ್ಷ ಗೋಪಾಲ್ ರಾವ್, ವಿಪ್ರ ಮಹಿಳಾ ಸಂಗಮ ಅಧ್ಯಕ್ಷರಾದ ಡಾ.ಲಕ್ಷ್ಮಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಪುಷ್ಪ ಅಯ್ಯಂಗಾರ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಯುವ ಮುಖಂಡರಾದ ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಹೊಯ್ಸಳ ಕರ್ನಾಟಕದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಸೌಭಾಗ್ಯ ಮೂರ್ತಿ, ಎಂ.ಆರ್.ಬಾಲಕೃಷ್ಣ, ಹರೀಶ್, ಜ್ಯೋತಿ, ಲತಾ ಬಾಲಕೃಷ್ಣ, ನಾಗಶ್ರೀ, ಕಡಕೋಳ ಜಗದೀಶ್ ಮತ್ತಿತರರಿದ್ದರು.

ಮುಡಾ ಹಗರಣ ಮುಚ್ಚಿ ಹಾಕುವ ತಂತ್ರ

- ಶಾಸಕ ಶ್ರೀವತ್ಸ ಅನುಮಾನ
- ಇಲ್ಲಿವರೆಗಿನ ಸರ್ಕಾರದ ನಿರ್ಧಾರದಿಂದ ಜನರಲ್ಲೇ ಸಂಶಯ ಉದ್ಭವ
- ಸದನದಲ್ಲಿ ವಿಷಯ ಪ್ರಸ್ತಾಪ ನಿರ್ಧಾರ



ಶ್ರೀವತ್ಸ

ಮೈಸೂರು, ಜು.17(ಎಂಟಿವೈ)- ಮುಡಾ ಹಗರಣದ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಿ, ಆರು ತಿಂಗಳು ಕಾಲಾವಕಾಶ ನೀಡಿರುವುದನ್ನು ಗಮನಿಸಿದರೆ, ಹಗರಣ ಮುಚ್ಚಿ ಹಾಕುವ ಕುತಂತ್ರ ಅಡಗಿರುವ ಅನುಮಾನ ಬರುತ್ತಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ಆರೋಪಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣ ಕುರಿತಂತೆ ತನಿಖೆಗೆ ಈ ಹಿಂದೆ ಹಿರಿಯ ಐಎಎಸ್ ಅಧಿಕಾರಿಗಳ ತಂಡ ರಚಿಸಲಾಗಿತ್ತು. ಅಲ್ಲದೆ, ಒಂದು ತಿಂಗಳೊಳಗೆ ವರದಿ ನೀಡಲು ಸೂಚಿಸಲಾಗಿತ್ತು. ಇದೀಗ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚನೆ ಮಾಡಿ, ಆರು ತಿಂಗಳ ಕಾಲಾವಕಾಶ ನೀಡಲಾಗಿದೆ. ಇದನ್ನು ಗಮನಿಸಿದರೆ ಪ್ರಕರಣವನ್ನು ಮುಚ್ಚಿ ಹಾಕುವ ತಂತ್ರ ಅಡಗಿದೆ. ವಿಧಾನಸಭೆ ಅಧಿವೇಶನದಲ್ಲಿ ಶುಕ್ರವಾರ ಇಲ್ಲವೇ ಸೋಮವಾರ ಮುಡಾ ಹಗರಣದ ಬಗ್ಗೆ ಚರ್ಚೆ ನಡೆಯಲಿದೆ. ಈ ವೇಳೆ ಅಗತ್ಯ ದಾಖಲೆ ಆಧರಿಸಿ ಮಾತನಾಡುತ್ತೇನೆ. ಮುಡಾ ಹಗರಣ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಾಗಿ ತಿಳಿಸಿದರು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮೊದಲು ಹಗರಣವೇ ನಡೆದಿಲ್ಲ ಎಂದಿದ್ದರು. ಬಳಿಕ ದಿಢೀರ್ ಮುಡಾಗೆ ಭೇಟಿ ನೀಡಿ ಸಭೆ ನಡೆಸಿದರು. ಮುಡಾದಿಂದ ಮಹತ್ವದ ದಾಖಲೆಗಳನ್ನು ಕೊಂಡೊಯ್ದಿದ್ದಾರೆ. ಅವರು ಏನೆಲ್ಲಾ ದಾಖಲೆ ಕೊಂಡೊಯ್ದಿದ್ದಾರೆ ಎಂಬುದಕ್ಕೆ ನಮ್ಮ ಬಳಿಯೂ ದಾಖಲೆ ಇವೆ. ವಿಧಾನಸಭಾ ಅಧಿವೇಶನದಲ್ಲಿ ಆ ಎಲ್ಲಾ ದಾಖಲೆಗಳನ್ನು ಬಹಿರಂಗಪಡಿಸುತ್ತೇವೆ. ಅಕ್ರಮವಾಗಿ ಪರಭಾರೆ ಆಗಿರುವ ಮುಡಾ ಆಸ್ತಿ ವಾಪಸ್ ಪಡೆಯುವುದಾಗಿ ಸಚಿವರು ಪ್ರಕಟಿಸಿದ್ದರು. ಈ ಸಂಬಂಧ ಇನ್ನು ಯಾವುದೇ ಆದೇಶ ಹೊರ ಬಿದ್ದಿಲ್ಲ. ಸರ್ಕಾರವೇ ಇಲ್ಲಿ ಹಗರಣ ನಡೆದಿದೆ ಎಂಬುದನ್ನು ಒಪ್ಪಿಕೊಂಡಿದೆ. ಈ ಕಾರಣಕ್ಕಾಗಿಯೇ ತನಿಖಾ ತಂಡವನ್ನು ರಚನೆ ಮಾಡಿದೆ. ಮುಡಾ ಹಗರಣ ಬೆಳಕಿಗೆ ಬಂದ ನಂತರ ಸಿದ್ದರಾಮಯ್ಯ ಮೌನವಾಗಿದ್ದಾರೆ. ಈಗಿರುವ ಸಿದ್ದರಾಮಯ್ಯ ಮೊದಲಿನಂತೆ ಇಲ್ಲ. ಲೋಪ ಆಗಿರುವುದರಿಂದಲೇ ವಿಚಲಿತರಾಗಿದ್ದಾರೆ. ಈ ಮೊದಲಿನಂತೆ ಮಾತನಾಡುತ್ತಿಲ್ಲ. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಸಿಲುಕಿರುವುದರಿಂದಲೇ ಸುಮ್ಮನಾಗಿದ್ದಾರೆ ಎಂದು ಟೀಕಿಸಿದರು.

ಮುಡಾಗೆ ಯಾವುದೇ ಜನಪ್ರತಿನಿಧಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡಬಾರದು ಎಂಬ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ ನಿರ್ಧಾರಕ್ಕೆ ನನ್ನ ಸಹಮತವಿದೆ. ಮುಡಾ ಕೂಡ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ. ಬೇರೆ ನಿಗಮಗಳಂತೆ ಮುಡಾ ಕೂಡ ಆಗಿದೆ. ಮುಡಾಗೆ ಸದಸ್ಯರನ್ನು ನೇಮಕ ಮಾಡುವ ಅವಶ್ಯಕತೆ ಇಲ್ಲ. ಸರ್ಕಾರದ ನಿಯಮಾನುಸಾರ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದರೆ ಸಾಕು. ಇದರಿಂದ ಜನಪ್ರತಿನಿಧಿಗಳು ಮುಡಾ ಕಾರ್ಯ ವೈಖರಿಯಲ್ಲಿ ಮಧ್ಯ ಪ್ರವೇಶಿಸುವುದು ತಪ್ಪಲಿದೆ. ಮುಡಾಗೆ ಸಮರ್ಥ ಅಧಿಕಾರಿಗಳನ್ನು ನೇಮಕ ಮಾಡಬೇಕಷ್ಟೆ. ಜನಸಾಮಾನ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ಮುಂದುವರೆದ ಮಿಷನ್ ಆಸ್ಪತ್ರೆ ಸಿಬ್ಬಂದಿ ಪ್ರತಿಭಟನೆ

ಮೈಸೂರು,ಜು.17(ಪಿಎಂ)- ಬಾಕಿ ವೇತನ ಪಾವತಿ ಹಾಗೂ ವೇತನ ಪರಿಷ್ಕರಣೆ ಮಾಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಸಿಎಸ್ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆ (ಮಿಷನ್ ಆಸ್ಪತ್ರೆ) ನೌಕರರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ 3ನೇ ದಿನವಾದ ಬುಧವಾರವೂ ನಡೆಯಿತು.

ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಆಸ್ಪತ್ರೆ ಎದುರು ಸಿಎಸ್ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಹಾಸ್ಪಿಟಲ್ ಎಂಪ್ಲಾಯೀಸ್ ಯೂನಿಯನ್ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ಮುಂದುವರೆಸಿದ ನೌಕರರು, ಶೀಘ್ರ ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಆಸ್ಪತ್ರೆಯ ಲಾಂಡ್ರಿ ವಿಭಾಗದ ನೌಕರ ವಿಲ್ಸನ್ ಪ್ರಭಾಕರ್, ಆಸ್ಪತ್ರೆಯ ಕಚೇರಿ ಸಿಬ್ಬಂದಿ, ನರ್ಸಿಂಗ್ ಸಿಬ್ಬಂದಿ, ವಾರ್ಡ್ ಹೆಡ್ ಹಾಗೂ ಡಿ ಗ್ರೂಪ್ ವರ್ಗದವರು ಸೇರಿದಂತೆ 150 ಮಂದಿ ಪ್ರತಿಭಟನೆ ಮಾಡುತ್ತಿದ್ದೇವೆ. ಬೆಳಗ್ಗೆ 7ರಿಂದ ರಾತ್ರಿ 9ರವರೆಗೆ ಕೆಲಸ ಸ್ಥಗಿತಗೊಳಿಸಿ ಹೋರಾಟ ಮಾಡುತ್ತಿದ್ದೇವೆ. ಆದರೆ ವೈದ್ಯಕೀಯ ತುರ್ತು ಸೇವೆಗಳಲ್ಲಿ ಇರುವವರು ಕಾರ್ಯ ನಿರ್ವಹಿಸುತ್ತಿದ್ದಾರೆ. 3ನೇ ದಿನಕ್ಕೆ ಪ್ರತಿಭಟನೆ ಕಾಲಿಟ್ಟರೂ ಆಸ್ಪತ್ರೆ ಆಡಳಿತ ಮಂಡಳಿ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಳೆದ 3 ತಿಂಗಳಿಂದ ನೌಕರರಿಗೆ ವೇತನ ನೀಡಿಲ್ಲ. ಕಳೆದ 7 ವರ್ಷಗಳಿಂದ ವೇತನ ಪರಿಷ್ಕರಣೆ ಮಾಡಿಲ್ಲ. ಅಲ್ಲದೆ, ನಮ್ಮ ವೇತನದಲ್ಲಿ ಇಎಸ್ಐ ಮತ್ತು ಪಿಎಫ್‌ಗಾಗಿ ಹಣ ಕಡಿತ ಮಾಡುತ್ತಿದ್ದು, ಅದನ್ನು ಇಎಸ್ಐ ಮತ್ತು ಪಿಎಫ್ ಖಾತೆಗೆ ಸಂದಾಯ ಮಾಡುತ್ತಿಲ್ಲ ಎಂದು ಆರೋಪಿಸಿದರು. ಪ್ರತಿಭಟನಾನಿರತ ನೌಕರರು ಮಾತನಾಡಿ, ಆಸ್ಪತ್ರೆಗೆ ಭೇಟಿ ನೀಡಿ ನಮ್ಮ ಸಮಸ್ಯೆಗಳನ್ನು ಬಗೆಹರಿಸುವಂತೆ ಆಸ್ಪತ್ರೆ ಅಧ್ಯಕ್ಷರೂ ಆದ ಬಿಷಪ್ ರೆ.ಹೇಮಚಂದ್ರಕುಮಾರ್ ಅವರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಮೂರು ತಿಂಗಳಿಂದ ವೇತನ ಪಾವತಿಸದ ಹಿನ್ನೆಲೆಯಲ್ಲಿ ಕುಟುಂಬ ನಿರ್ವಹಣೆ ಮಾಡಲಾಗದೇ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಷ್ಟೋ ಮಂದಿ ಮನೆ ಬಾಡಿಗೆ ಪಾವತಿಸಲಾಗದ ಪರಿಸ್ಥಿತಿಯಲ್ಲಿದ್ದೇವೆ. ಬ್ಯಾಂಕಿನಲ್ಲಿ ಸಾಲ ಪಡೆದಿರುವ ನೌಕರರು ಕಂತುಗಳನ್ನು ಪಾವತಿ ಮಾಡಲಾಗದೇ ಬಡ್ಡಿ ಮೇಲೆ ಬಡ್ಡಿ ಬೆಳೆಯುವಂತಾಗಿದೆ. ಈ ಹಿಂದೆ ಇದ್ದಂತಹ ನಿರ್ದೇಶಕರು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಪಾವತಿಸಲು ಕ್ರಮ ವಹಿಸಿದ್ದರು. ಇಎಸ್ಐ ಸೌಲಭ್ಯ ಇಲ್ಲದ ನೌಕರರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹಾಗೂ ಔಷಧಗಳನ್ನು ಉಚಿತವಾಗಿ ನೀಡುವಂತಹ ವ್ಯವಸ್ಥೆ ಮಾಡಿದ್ದರು. ಆದರೆ ಈಗ ಆ ಎಲ್ಲವನ್ನೂ ಕೈಬಿಡಲಾಗಿದ್ದು, ಅವ್ಯವಸ್ಥೆ ತಾಂಡವವಾಡುವಂತಾಗಿದೆ ಎಂದು ಕಿಡಿಕಾರಿದರು. ಯೂನಿಯನ್‌ನ ಖಜಾಂಚಿ ಹಾಗೂ ಆಸ್ಪತ್ರೆಯ ಎಸ್‌ಟಿಪಿ ವಿಭಾಗದ ನೌಕರ ಜೋಸೆಫ್ ಮ್ಯಾನುಯೆಲ್ ಸೇರಿದಂತೆ ಆಸ್ಪತ್ರೆ ನೌಕರರು ಭಾಗವಹಿಸಿದ್ದರು.



ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಮಿಷನ್ ಆಸ್ಪತ್ರೆ ಎದುರು ಆಸ್ಪತ್ರೆ ನೌಕರರು ಬುಧವಾರವೂ ಪ್ರತಿಭಟನಾ ಧರಣಿ ನಡೆಸಿದರು.

ಕಡವೆಕಟ್ಟೆ ಹುಂಡಿ, ತಳೂರು ಸುತ್ತಮುತ್ತ 'ಹುಲಿರಾಯ'ನ ಆತಂಕ



ಅರಣ್ಯ ಸಿಬ್ಬಂದಿ ಪರಿಶೀಲನೆ

ಮೈಸೂರು, ಜು.17(ಎಂಟಿವೈ)- ಮೈಸೂರು ತಾಲೂಕಿನ ಕಡವೆಕಟ್ಟೆ ಹುಂಡಿ ಹಾಗೂ ತಳೂರಿನಲ್ಲಿ ಹುಲಿರಾಯ ಸುಳಿದಾಡುತ್ತಿರುವುದಾಗಿ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದು, ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ.

ತಾಲೂಕಿನ ವರಕೋಡು-ಮೂಡಲ ಹುಂಡಿ ಬಳಿ ಕಳೆದ 20 ದಿನದಿಂದ ಅರಣ್ಯ ಪ್ರದೇಶದಲ್ಲಿ ಹುಲಿ ಸಂಚರಿಸುತ್ತಿದೆ ಎಂದು ಹೇಳಲಾಗುತ್ತಿದ್ದು, ಅರಣ್ಯ ಇಲಾಖೆ ಕ್ಯಾಮರಾ ಟ್ರ್ಯಾಪ್ ಕಣ್ಣಿಗೂ ಬಿದ್ದಿಲ್ಲ. ಆದರೆ, ಇಂದು ಸಂಜೆ ಸುತ್ತೂರು ಮುಖ್ಯ ರಸ್ತೆಯ ಕಡವನಕಟ್ಟೆಹುಂಡಿ ಜಮೀನೊಂದರ ಬಳಿ ಹುಲಿ ನೋಡಿರುವುದಾಗಿ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ತಳೂರು ಬಳಿ ರವಿ ಎಂಬುವವರು ಬೈಕ್‌ನಲ್ಲಿ ಹೋಗುವಾಗ ಹುಲಿ ನೋಡಿದ್ದಾಗಿ ಮಾಹಿತಿ ನೀಡಿದ್ದಾರೆ. ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಹುಲಿ, ಬೈಕ್ ಕಂಡು ಪಾಳುಬಿದ್ದ ಜಮೀನಿನತ್ತ ಹೋಯಿತು. ನಾನು ಹುಲಿಯನ್ನು ಸಮೀಪದಿಂದ ನೋಡಿದ್ದಾಗಿ ಅವರು ತಿಳಿಸಿದ್ದಾರೆ. ಎರಡೂ ಸ್ಥಳದಲ್ಲಿ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ.

ಸೆಂಟ್ ಫಿಲೋಮಿನಾ ಕಾಲೇಜಲ್ಲಿ 'ದೀಕ್ಷಾರಂಭ' ಕಾರ್ಯಕ್ರಮ

ಮೈಸೂರು, ಜು.17(ಎಂಕೆ)- ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ನಾಳೆ(ಜು.18)ಯಿಂದ ಜು.20ರವರೆಗೆ ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ 2024-25ನೇ ಶೈಕ್ಷಣಿಕ ವರ್ಷದ ಹೊಸ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು, ಸಂರಕ್ಷಣಾಧಿಕಾರಿಗಳಿಗೆ 'ದೀಕ್ಷಾರಂಭ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವು ಹೊಸ ವಿದ್ಯಾರ್ಥಿಗಳಿಗೆ ಕಾಲೇಜಿನ ವಾತಾವರಣ, ಶೈಕ್ಷಣಿಕ, ಸಂಸ್ಕೃತಿ ಮತ್ತು ಬೆಂಬಲ ಸೇವೆಗಳ ಪರಿಚಯ, ಸ್ವಾಗತ ಭಾಷಣ, ಕ್ಯಾಂಪಸ್ ಪ್ರವಾಸ, ಅಧ್ಯಾಪಕರೊಂದಿಗೆ ಸಂವಾದಾತ್ಮಕ ವಿಷಯ ಮತ್ತು ಪಠ್ಯೇತರ ಚಟುವಟಿಕೆಗಳ ಪರಿಚಯವನ್ನು ಒಳಗೊಂಡಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾಹಿತಿಗಾಗಿ ಸಂಪರ್ಕಿಸಿ: 0821-4140900/4240912

ವೇತನ ಹೆಚ್ಚಳ ಸೇರಿ ಕೆಎಸ್‌ಆರ್‌ಟಿಸಿ ನೌಕರರ ಬೇಡಿಕೆ ಈಡೇರಿಕೆಗೆ ಒತ್ತಾಯ



ಮೈಸೂರಿನಲ್ಲಿ ಕೆಎಸ್‌ಆರ್‌ಟಿಸಿ ನೌಕರರ ಕೂಟದ ಜಿಲ್ಲಾ ಘಟಕದ ಪದಾಧಿಕಾರಿಗಳ ಸಭೆ ನಡೆಯಿತು.

ಮೈಸೂರು, ಜು.17(ಎಸ್‌ಪಿಎನ್)- ನೌಕರರ ವೇತನ ಹೆಚ್ಚಳ, ಹಿಂಬಾಕಿ ವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಕೂಟದ ಗೌರವಾಧ್ಯಕ್ಷ ಡಿ.ಎಸ್.ಸುರೇಶ್ ಒತ್ತಾಯಿಸಿದರು.

ಮೈಸೂರು ಜಲದರ್ಶಿನಿಯಲ್ಲಿ ಕೆಎಸ್‌ಆರ್‌ಟಿಸಿ ನೌಕರರ ಕೂಟದ ಜಿಲ್ಲಾ ಘಟಕದ ಪದಾಧಿಕಾರಿಗಳ ಸಭೆ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, 01.01.2020ರಂದು ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಶೇ.15ರಷ್ಟು ವೇತನವನ್ನು ನೌಕರರ ಒತ್ತಡಕ್ಕೆ ಮಣಿದು ಹೆಚ್ಚಳ ಮಾಡಿತ್ತು. ನಂತರ ಒಂದು ವರ್ಷದ ವೇತನ ಸೇರಿಸಿ ಹಿಂಬಾಕಿ ವೇತನವನ್ನು ನೀಡಿತ್ತು. ಇನ್ನುಳಿದ 39 ತಿಂಗಳ ಹಿಂಬಾಕಿ ವೇತನವನ್ನು ನೌಕರರಿಗೆ ನೀಡದೆ ಬಾಕಿ ಉಳಿಸಿಕೊಂಡಿದೆ. ಈ ಬಾಕಿ ವೇತನವನ್ನು ಸರ್ಕಾರ ಕೂಡಲೇ ನೀಡಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರಿ ನೌಕರರಿಗೆ ಆ.1ರಿಂದ 7ನೇ ವೇತನ ಆಯೋಗ ನೀಡಿರುವ ಶಿಫಾರಸ್ಸುಗಳನ್ನು ಜಾರಿ ಮಾಡಲು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ನೌಕರರಿಗೂ ಇದೀಗ 1.1.2024ರಿಂದ ವೇತನ ಅಗ್ರಿಮೆಂಟ್ ರೂಪದಲ್ಲಿ ವೇತನ ಹೆಚ್ಚು ಮಾಡುವ ಬದಲು ಸರ್ಕಾರಿ ನೌಕರರಿಗೆ ನೀಡುವ ಮಾದರಿಯಲ್ಲಿ ಕೆಎಸ್‌ಆರ್‌ಟಿಸಿ ನೌಕರರಿಗೂ ಸರಿಸಮಾನ ವೇತನ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಕೆಎಸ್‌ಆರ್‌ಟಿಸಿ ನೌಕರರ ಸಂಘಟನೆಗಳಿಗೆ ಚುನಾವಣೆ ನಡೆಸಲು ಸರ್ಕಾರ ಒಪ್ಪಿಗೆ ನೀಡಬೇಕು. ಇದರಿಂದ ನೌಕರರು-ಅಧಿಕಾರಿಗಳ ನಡುವೆ ಸಮನ್ವಯತೆ ಸಾಧಿಸಲು ಅನುಕೂಲವಾಗುತ್ತದೆ. ನಿರ್ದಿಷ್ಟ ಸಂಘಟನೆಗಳು ಇಲ್ಲದಿರುವುದರಿಂದ ಆಡಳಿತ ಮಂಡಳಿ ಏಕಪಕ್ಷೀಯವಾಗಿ ಅಗ್ರಿಮೆಂಟ್ ಮಾಡಿಕೊಂಡು ನೌಕರರ ವೇತನ ತಾರತಮ್ಯ ಹೆಚ್ಚಾಗಲು ಕಾರಣವಾಗಿದೆ ಎಂದು ತಿಳಿಸಿದರು. ಈ ವೇಳೆ ಕೆಎಸ್‌ಆರ್‌ಟಿಸಿ ನೌಕರರ ಕೂಟದ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ತಾಳಶಾಸನ ಮೋಹನ್, ಕಾರ್ಯಾಧ್ಯಕ್ಷ ಸಿ.ಡಿ.ವಿಶ್ವನಾಥ್, ಕಾರ್ಮಿಕ ಮುಖಂಡರಾದ ಪ್ರವೀಣ್ ಕುಮಾರ್, ಮಂಜೇಗೌಡ, ಸಿದ್ದೇಶ, ನಾಗರಾಜು, ರವಿಕುಮಾರ್, ಜಗದೀಶ ಗುಳೇದ, ಎಲ್.ಎಸ್.ವಿಜಯ್ ಸೇರಿದಂತೆ ಮತ್ತಿತರರಿದ್ದರು.

ಕಬ್ಬು ಬೆಳೆಗಾರರ ಸಮಸ್ಯೆ ಇತ್ಯರ್ಥಕ್ಕೆ ಜು.27, ಡಿಸಿ ನೇತೃತ್ವದಲ್ಲಿ ಸಭೆ

ಭರವಸೆ ಹಿನ್ನೆಲೆ ಎರಡು ದಿನಗಳ ಅಹೋರಾತ್ರಿ ಧರಣಿ ಅಂತ್ಯ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಎರಡು ದಿನಗಳಿಂದ ನಡೆಯುತ್ತಿದ್ದ ಕಬ್ಬು ಬೆಳೆಗಾರರ ಅಹೋರಾತ್ರಿ ಧರಣಿ ಸ್ಥಳಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಭೇಟಿ ನೀಡಿ, ರೈತರೊಂದಿಗೆ ಮಾತುಕತೆ ನಡೆಸಿದರು.

ಮೈಸೂರು, ಜು.17(ಎಸ್‌ಪಿಎನ್)- ಮೈಸೂರು -ಚಾಮರಾಜನಗರ ಜಿಲ್ಲೆಗಳ ಕಬ್ಬು ಬೆಳೆಗಾರರ ಸಮಸ್ಯೆ ಆಲಿಸಲು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜು.27 ರಂದು ಬೆಳಗ್ಗೆ ತಮ್ಮ ಕಚೇರಿಯಲ್ಲಿ ಸಭೆ ನಡೆಸಲು ಮೈಸೂರು ಜಿಲ್ಲಾಧಿಕಾರಿಗಳು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಕಬ್ಬು ಬೆಳೆಗಾರರ ಅಹೋರಾತ್ರಿ ಧರಣಿ ಬುಧವಾರ ರಾತ್ರಿ 7.30ಕ್ಕೆ ಅಂತ್ಯವಾಯಿತು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆ ಭಾಗ್ಯರಾಜ್ ನೇತೃತ್ವದಲ್ಲಿ ಎರಡು ದಿನಗಳಿಂದ ನಡೆಯುತ್ತಿದ್ದ ಧರಣಿ ಸ್ಥಳಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಆಗಮಿಸಿ, ಪ್ರತಿಭಟನಾನಿರತ ರೈತ ಮುಖಂಡರನ್ನು ಮನವೊಲಿಸಿದ ಹಿನ್ನೆಲೆಯಲ್ಲಿ ಧರಣಿಯನ್ನು ವಾಪಸ್ ಪಡೆಯಲಾಯಿತು ಎಂದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರ ನಿಗದಿಯಂತೆ 2024-25ನೇ ಸಾಲಿನ ಬಣ್ಣಾರಿ ಅಮ್ಮನ್ ಕಾರ್ಖಾನೆ ಆಡಳಿತ ಮಂಡಳಿ ಪ್ರತಿ ಟನ್ ಕಬ್ಬಿಗೆ 4 ಸಾವಿರ ರೂ. ನಿಗದಿಪಡಿಸಬೇಕು. ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ಆದೇಶಿಸಿದ್ದ ಪ್ರತಿ ಟನ್‌ಗೆ 150 ರೂ.ನಂತೆ 800 ಕೋಟಿ ಬಾಕಿ ಹಣವನ್ನು ಕಾರ್ಖಾನೆಯಿಂದ ವಾಪಸ್ ಕೊಡಿಸಬೇಕು. ರಂಗರಾಜನ್ ವರದಿಯಂತೆ 10.5 ಇಳುವರಿ ನಿಗಧಿಪಡಿಸಿ, 3,400 ರೂ.ಗಳನ್ನು ಪ್ರತಿಟನ್‌ಗೆ ಕೇಂದ್ರ ಸರ್ಕಾರ ನಿಗದಿಗೊಳಿಸಿದೆ. ಇದನ್ನು 8.5 ಇಳುವರಿಗ ತಿದ್ದುಪಡಿ ಮಾಡಿ, ಕಬ್ಬಿನ ದರ ನಿಗದಿಗೊಳಿಸಬೇಕು ಎಂದು ಒತ್ತಾಯಿಸಿದರು. ಕಾವೇರಿ ನದಿ ಪಾತ್ರದಲ್ಲಿ ಕಳೆದೊಂದು ವಾರದಿಂದ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಲೆಗಳಿಗೆ ಕೂಡಲೇ ನೀರು ಹರಿಸಬೇಕು. ನಾಲೆ ಪಾತ್ರ ರೈತರಿಗೆ ಇಂತಹುದೇ ಬೆಳೆ ಬೆಳೆಯುವಂತೆ ಅಧಿಕಾರಿಗಳ ಮೂಲಕ ಸರ್ಕಾರ ರೈತರಿಗೆ ಒತ್ತಡ ಹಾಕಬಾರದು ಮತ್ತು ಕಾವೇರಿ ಪಾತ್ರ ಕೆರೆ ಕಟ್ಟೆಗಳನ್ನು ತುಂಬಿಸಬೇಕು. ಕಾವೇರಿ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳಿಂದ ಸಾಲ ಪಡೆದ ರೈತರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಬೇಕು. ಅಕ್ರಮ-ಸಕ್ರಮ ಯೋಜನೆ ಮರು ಜಾರಿಗೊಳಿಸಬೇಕು. ವೈಜ್ಞಾನಿಕವಾಗಿ ಕಬ್ಬು ತೂಕ ಮಾಡಲು ಜಿಲ್ಲಾಡಳಿತ ಪರ್ಯಾಯ ಮಾರ್ಗ ತೋರಬೇಕು ಎಂದು ಆಗ್ರಹಿಸಿದರು.

ಜು.27ರಂದು ನಡೆಯುವ ಸಭೆಯಲ್ಲಿ ಸಕ್ಕರೆ ಇಲಾಖೆ ಆಯುಕ್ತರು, ವಿವಿಧ ಇಲಾಖೆ ಜಿಲ್ಲಾ ಹಂತ ಅಧಿಕಾರಿಗಳು ಭಾಗಿಯಾಗಿ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಜಿಲ್ಲಾಧಿಕಾರಿಗಳು ಬಗೆಹರಿಸಲು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಧರಣಿ ವಾಪಸ್ ಪಡೆಯಲಾಗಿದೆ. ಆಗೊಂದು ವೇಳೆ ಜಿಲ್ಲಾಡಳಿತ ನಮ್ಮ ಚಳವಳಿಯನ್ನು ಲಘುವಾಗಿ ಪರಿಗಣಿಸಿ, ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಜು.27ರಂದೇ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಕಬ್ಬು ಬೆಳೆಗಾರರ ಅರೆಬೆತ್ತಲೆ ಮೆರವಣಿಗೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಅಂಕನಹಳ್ಳಿ ತಿಮ್ಮಪ್ಪ, ಹತ್ತಳ್ಳಿ ಸೌಮ್ಯರಾಜ್, ಹಾಡ್ಯ ರವಿ, ಹಾಲಿನ ನಾಗರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಅರಳಿಕಟ್ಟೆ ಕುಮಾರ್, ಉಡಿಗಾಲ ರಾಜಶೇಖರಪ್ಪ, ಗುರುವಿನಪುರ ಮೋಹನ್, ಆನಂದ ಮಲೆಮಾದಪ್ಪ, ಕಸುನಹಳ್ಳಿ ಮಂಜೇಶ್, ದೇವನೂರು ನಾಗೇಂದ್ರ, ಹೊಸಪುರ ಮಾದಪ್ಪ, ಜಗದೀಶ್, ಮುದ್ದಳ್ಳಿ ಚಿಕ್ಕಸ್ವಾಮಿ, ರೇವಣ್ಣ, ಕುಮಾರ್, ಒಳಗೆರೆ ಗಣೇಶ, ಸಿದ್ದಲಿಂಗು, ಸುರೇಶ್ ಹುಂಡಿ ಮಹೇಶ್ ಸೇರಿದಂತೆ ಇತರರಿದ್ದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನಿಜವಾದ ಕನ್ನಡಿಗರು ಎಂದರೆ ಯಾರು?
ಗುಂಡ : ಯಾರು ಇಂಗ್ಲೀಷ್‌ನಲ್ಲಿ ಫೇಲ್ ಆಗ್ತಾರೋ ಅವರೇ ನಿಜವಾದ ಕನ್ನಡಿಗರು ಸರ್ !

ಮೈಸೂರು ಮಿತ್ರ

ಗುರುವಾರ, 18 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಂಬಂಧ ಬೇಡವಾದಾಗ ಸಣ್ಣ ತಪ್ಪು ಕೂಡಾ ಒಂದು ದೊಡ್ಡ ಕ್ರೈಂ ತರ ಬಿಂಬಿತವಾಗುತ್ತೆ– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಣ ಮಾತು ಒಣಗಿದ ಹುಲ್ಲು, ಒಳ್ಳೆಯ ಮಾತು ಬೆಳ್ಳಗಿನ ಹಾಲು

ನಿಮ್ಮ ಪತ್ರಗಳು

■ ಗುಂಡಿಮಯವಾಗಿರುವ ಕೂರ್ಗಳ್ಳಿ ರಸ್ತೆ



ಮಾನ್ಯರೆ,

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ, ಎಲ್ ಅಂಡ್ ಟಿ ಫ್ಯಾಕ್ಟರಿ ನಂತರ, ಥಿಯೋರಮ್ ಕಂಪನಿ ಸಮೀಪದ ರಸ್ತೆ ಗುಂಡಿಮಯವಾಗಿದೆ. ಈ ಪ್ರದೇಶದಲ್ಲಿ ನೂರಾರು ಫ್ಯಾಕ್ಟರಿಗಳಿದ್ದು, ಸಾವಿರಾರು ಮಂದಿ ಕಾರ್ಮಿಕರು ಸಂಚರಿಸುತ್ತಾರೆ. ಈ ರಸ್ತೆಯಲ್ಲಿ ವಾಹನ ಚಾಲಕರು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಸಂಚರಿಸಲು ಕಷ್ಟವಾಗುತ್ತಿದೆ. ರಾತ್ರಿ ವೇಳೆಯಂತೂ ವಾಹನ ಚಾಲಕರು ಸಂಚರಿಸಲು ತ್ರಾಸದಾಯಕವಾಗಿದ್ದು, ಹಲವು ಅಪಘಾತಗಳು ಸಂಭವಿಸಿರುವುದುಂಟು. ಮಳೆ ಬಂದ ಸಮಯದಲ್ಲಿ ರಸ್ತೆ ಯಾವುದು, ಗುಂಡಿ ಯಾವುದು ಗೊತ್ತೇ ಆಗುವುದಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

–ಎನ್.ಡಿ. ನಂದಕುಮಾರ್, ಮೈಸೂರು.

■ ರೋಗಗಳ ಉಗಮ ಸ್ಥಾನವಾಗಿರುವ ಕನಕಗಿರಿ



ಮಾನ್ಯರೆ,

ಮೈಸೂರು ಸ್ವಚ್ಛ ನಗರಿ ಎಂಬ ಬಿರುದಿಗೆ ವಿರುದ್ಧವಾಗಿದೆ. ಈ ಬಡಾವಣೆ ಕನಕಗಿರಿ 12ನೇ ರಸ್ತೆ, ಸಿವೇಜ್ ಫಾರಂ, ವಿದ್ಯಾರಣ್ಯಪುರಂ ನಿವಾಸಿಗಳು ಬೆಳಗ್ಗೆ ಎದ್ದರೆ ಹಸುಗಳ ಹಾವಳಿ, ತಿಪ್ಪೆ ಗುಂಡಿಯಿಂದ ಕೂಡಿದ ರಸ್ತೆ ದರ್ಶನವಾಗುತ್ತದೆ. ಇಲ್ಲಿನ ನಿವಾಸಿಗಳು ಈ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡು ತಿರುಗಾಡುವಂತಾಗಿದೆ. ಅಲ್ಲದೆ ದುರ್ವಾಸನೆಯಿಂದ ವಾಸಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಸೊಳ್ಳೆಗಳು, ವಿಷಜಂತುಗಳ ವಾಸಸ್ಥಾನವಾಗಿದೆ. ಸ್ವಚ್ಛತೆ ಇಲ್ಲದೆ ಡೆಂಗ್ಯೂ ಭೀತಿಯಲ್ಲಿ ವಾಸಿಸುವಂತಾಗಿದೆ. ಈ ಪ್ರದೇಶದಲ್ಲಿ ಒಂದು ದಿನ ಅಲ್ಲ ಒಂದು ಕ್ಷಣ ಕೂಡ ಇರಲು ಸಾಧ್ಯವಿಲ್ಲ. ಕೂಡಲೇ ಸಂಬಂಧಪಟ್ಟ ಜನಪ್ರತಿನಿಧಿಗಳು ಇತ್ತ ಗಮನಹರಿಸಬೇಕಾಗಿ ಮನವಿ.

–ಕನಕಗಿರಿ ನಿವಾಸಿಗಳು, ಮೈಸೂರು.

■ ಜನತಾನಗರದಲ್ಲಿ ಯುಜಿಡಿ ಸಮಸ್ಯೆ ಸರಿಪಡಿಸಿ



ಮಾನ್ಯರೇ

ಮೈಸೂರಿನ ಜನತಾ ನಗರ ವಾರ್ಡ್ ನಂಬರ್ 44, 14ನೇ ಕ್ರಾಸ್ ನಿವಾಸಿಗಳು ಎರಡು ವರ್ಷಗಳಿಂದ ಯುಜಿಡಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. 14ನೇ ಕ್ರಾಸ್ ನಿವಾಸಿಗಳು ಜನತಾ ನಗರದ ಯುಜಿಡಿಂಯ ಸ್ವಚ್ಛತೆಯ ಸಮಸ್ಯೆಯಿಂದಾಗಿ ಕಸ ಕಡ್ಡಿಗಳಿಂದ ತುಂಬಿ ಮಳೆಯ ಹೊಡೆತಕ್ಕೆ ಯುಜಿಡಿ ನೀರು ಹಲವಾರು ಮನೆಗಳಿಗೆ ನುಗ್ಗಿ ಹಾಗೂ ರಸ್ತೆಗೆ ಹರಿಯುತ್ತಿದೆ.

ಎಂಎಲ್ಎ ಅನುದಾನ ಹಾಗೂ ಕಾರ್ಪೊರೇಷನ್‌ನಿಂದ ಹಿಂದೆ ಇದ್ದ ಹಳೆಯ ಯುಜಿಡಿ ಲೈನನ್ನು ಅಭಿವೃದ್ಧಿಪಡಿಸಲು ಒಂದು ಕೋಟಿ ವೆಚ್ಚವನ್ನು ಮಾಡಿದರು. ಆದರೂ ಸಮಸ್ಯೆ ಬಗೆಹರಿದಿಲ್ಲ. ಇದರೊಂದಿಗೆ ವಾರ್ಡ್ ನಂಬರ್ 44 ನಿವಾಸಿಗಳಿಗೆ ನೀರಿನ ಸಮಸ್ಯೆ ಬಗೆಹರಿದಿಲ್ಲ. ನಾಲ್ಕೈದು ದಿನಗಳಿಂದ ಮನೆಗಳಿಗೆ ನೀರು ನುಗ್ಗಿ ಹರಿಯುತ್ತಿದ್ದರೂ ಇದಕ್ಕೆ ಸಂಬಂಧಪಟ್ಟ ನಗರಪಾಲಿಕೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇದರ ಬಗ್ಗೆ ಗಮನ ಹರಿಸಿಲ್ಲ.

ವಾರ್ಡ್ ನಂಬರ್ 44, 14ನೇ ಕ್ರಾಸ್ ಜನತಾ ನಗರ ಯುಜಿಡಿ ಅಭಿವೃದ್ಧಿಗೆ ಸರ್ಕಾರ ವೆಚ್ಚ ಮಾಡಿರುವ ಹಣ ನೀರಿನಲ್ಲಿ ಹೋಮ ಮಾಡಿದಂತಾಗಿದೆ.

ಈ ಯುಜಿಡಿ ನೀರಿನ ಕೊಳಚೆಯಿಂದ ಮನೆಗಳು ಹಾಗೂ ರೋಡುಗಳಲ್ಲಿ ನೀರು ತುಂಬಿ ಹರಿಯುತ್ತಿರುವುದರಿಂದ ದುರ್ನಾತ, ಸೊಳ್ಳೆಗಳ ಕಾಟ, ರಸ್ತೆಯಲ್ಲಿ ಬಂದರೆ ಮೂಗು ಮುಚ್ಚಿ ಓಡಾಡುವಂತಾಗಿದೆ. ಈ ಯುಜಿಡಿ ಸಮಸ್ಯೆಯು ನಾಲ್ಕು ವರ್ಷಗಳಾದರೂ ಯಾರೂ ಬಗೆಹರಿಸಿಲ್ಲ ಹಾಗೂ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಇದರಿಂದ ಹಿರಿಯ ನಾಗರಿಕರಿಗೆ, ಮಕ್ಕಳಿಗೆ ತೊಂದರೆ ಆಗುತ್ತಿದೆ. ಆದಷ್ಟು ಬೇಗ ಈ ಸಮಸ್ಯೆಯನ್ನು ಸರಿಪಡಿಸುವಂತೆ ಜನತಾ ನಗರ ನಿವಾಸಿಗಳ ಮನವಿ.

–ಆನಂದ್, ಜನತಾನಗರ ನಿವಾಸಿ, ಮೈಸೂರು.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.


ಜಾಗತಿಕ ಕ್ರೀಡಾ ಉತ್ಸವ ಒಲಿಂಪಿಕ್ಸ್

PARiS 2024



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಪ್ಯಾರಿಸ್–2024ರ ತಂಡ.





ಪೂರ್ಮ ಬ್ಯಾನರ್ಜಿ ನಾರ್ಮನ್ ಪ್ರಿಚಾರ್ಡ್

ನಾಲ್ಕು ವರ್ಷಕ್ಕೊಮ್ಮೆ ಬರುವ ಕ್ರೀಡಾಲೋಕದ ಅತ್ಯಂತ ಪ್ರತಿಷ್ಠಿತ ಕ್ರೀಡಾ ಉತ್ಸವ ಒಲಿಂಪಿಕ್ಸ್‌ಗೆ ಆಗಲೇ ಕ್ಷಣಗಣನೆ ಪ್ರಾರಂಭವಾಗಿದೆ. ಇದೇ ಜುಲೈ 26ರಂದು, ಅಂದರೆ ಬರುವ ಶುಕ್ರವಾರ ಪ್ರಪಂಚದ ಮನಮೋಹಕ ನಗರವೆಂದೇ ಹೆಸರಾಗಿರುವ, ಫ್ಯಾಷನ್ ಜಗತ್ತಿನ ರಾಜಧಾನಿ ಪ್ಯಾರಿಸ್‌ನಲ್ಲಿ ಆರಂಭವಾಗಲಿದೆ. ವರ್ಣರಂಜಿತ ಸಮಾರಂಭದಲ್ಲಿ ಭಾರತದ ತಂಡವನ್ನು ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಹಿರಿಯ ಟೆನ್ನಿಸ್ ಆಟಗಾರ ಖೇಲ್ ರತ್ನ ಪ್ರಶಸ್ತಿ ಪುರಸ್ಕೃತ ಶರತ್ ಕಮಲ್ ಅವರು ಧ್ವಜಧಾರಿಯಾಗಿ ಮುನ್ನಡೆಸಲಿದ್ದಾರೆ. ಮೊದಲ ಬಾರಿ 1900ರಲ್ಲಿ, ಬ್ರಿಟಿಷ್ ಅಧಿಪತ್ಯವಿರುವಾಗ ಭಾರತ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿತ್ತು. ಆಗ, ಕಲ್ಕತ್ತಾದಲ್ಲಿ ಜನಿಸಿದ್ದ ಬ್ರಿಟಿಷ್ ನಾರ್ಮನ್ ಪ್ರಿಚಾರ್ಡ್ ಭಾರತದ ಏಕೈಕ ಸ್ಪರ್ಧಿಯಾಗಿದ್ದರು. ಪ್ರಿಚಾರ್ಡ್ ಎರಡು ರಜತ ಪದಕಗಳನ್ನು ಗಳಿಸಿದ್ದರು. ಇವರು ವೈಯಕ್ತಿಕವಾಗಿ ಪಂದ್ಯದಲ್ಲಿ ಪಾಲ್ಗೊಂಡಿದ್ದರು, ಭಾರತದ ವತಿಯಿಂದಲ್ಲ ಎಂದು ಒಲಿಂಪಿಕ್ಸ್ ಇತಿಹಾಸಕಾರ ಇಯಾನ್ ಬುಕನಾನ್ ಪ್ರತಿಪಾದಿಸಿದರೂ, ಒಲಿಂಪಿಕ್ಸ್ ಸಂಸ್ಥೆ ನಾರ್ಮನ್ ಪ್ರಿಚಾರ್ಡ್‌ನಿಗೇ ಭಾರತಕ್ಕೆ ಮೊದಲ ಪದಕ ತಂದುಕೊಟ್ಟ ಗೌರವಕ್ಕೆ ಪಾತ್ರರಾಗಿದ್ದರು.

ಹೀಗೆ ಪ್ರಾರಂಭವಾದ ಭಾರತದ ಒಲಿಂಪಿಕ್ಸ್ ಓಟ ನಿಧಾನವಾಗಿ ತನ್ನ ಗತಿಯನ್ನು ಸಾಧಿಸಿದೆ. 1920ರಲ್ಲಿ, ಐವರು ಭಾರತೀಯರು ಮಾತ್ರ ಇದ್ದ ಪ್ರಪ್ರಥಮ ತಂಡವನ್ನು ಭಾರತೀಯ ಅಥ್ಲೀಟ್ ಪೂರ್ಮ ಬ್ಯಾನರ್ಜಿ ಧ್ವಜಧಾರಿಯಾಗಿ ಮುನ್ನಡೆಸಿದ ಪ್ರಥಮ ಕ್ರೀಡಾಪಟು ಕೀರ್ತಿಗೆ ಭಾಜನರಾದರು. ಅಂದಿನಿಂದ ಭಾರತದ ಕ್ರೀಡಾಪಟುಗಳು ಪ್ರತಿ ಒಲಿಂಪಿಕ್ಸ್‌ನಲ್ಲೂ ಉತ್ಸಾಹದಿಂದ ಭಾಗವಹಿಸುತ್ತಲೇ ಬಂದಿದ್ದಾರೆ. 1948ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಹಾಕಿಯಲ್ಲಿ ಗೆದ್ದ ಚಿನ್ನ ಸ್ವತಂತ್ರ ಭಾರತದ ಮೊದಲ ಪದಕವೆನಿಸಿಕೊಂಡಿತು. ಹಾಕಿಯಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಿದ್ದ ಭಾರತದ ಒಟ್ಟು 35 ಒಲಿಂಪಿಕ್ಸ್ ಪದಕಗಳಲ್ಲಿ ಹಾಕಿಯಿಂದಾಗಿ ಗಳಿಸಿದ್ದು 11! ಕಳೆದ 2 ಒಲಿಂಪಿಕ್ಸ್‌ಗಳಲ್ಲಿ ಭಾರತದ ಸಾಧನೆ ನಿಜಕ್ಕೂ ಪ್ರಶಂಸನೀಯ. ಖೇಲೋ ಇಂಡಿಯಾ ಮತ್ತು ಫಿಟ್ ಇಂಡಿಯಾದಂತಹ ಅಭಿಯಾನಗಳು ಉತ್ತಮ ಕ್ರೀಡಾಪಟುಗಳನ್ನು ಮುನ್ನೆಲೆಗೆ ತರುವಲ್ಲಿ ಮಹತ್ತರ ಪಾತ್ರ ವಹಿಸಿವೆ. ಇದರಿಂದಾಗಿ ಅರ್ಹ ಕ್ರೀಡಾಳುಗಳು ಭಾಗವಹಿಸುವ ಸಂಭಾವ್ಯತೆ ಗರಿಷ್ಠವಾಗಿದೆ. ಪದಕ ಪಟ್ಟಿಯಲ್ಲಿ ಇನ್ನು ಮುಂದಿನ ದಿನಗಳಲ್ಲಿ ಭಾರತ ಗೌರವಯುತ ಸ್ಥಾನ ಗಳಿಸುವ ದಿನಗಳು ದೂರವಿಲ್ಲ.

ನಾಗರಿಕತೆಯ ಉತ್ಕೃಷ್ಟ ಭೂಮಿಯಾದ ಗ್ರೀಸ್, ಪ್ರಪಂಚಕ್ಕೆ ಸಾಂಸ್ಕೃತಿಕ ದಿಕ್ಸೂಚಿಯಂತಿತ್ತು. ಇಡೀ ಪ್ರಪಂಚವನ್ನು ಒಂದು ಸೂರಿನಡಿಗೆ ತಂದು ಸಂಭ್ರಮಿಸುವಂತಹ ಒಲಿಂಪಿಕ್ಸ್‌ನಂತಹ ಮಹಾ ಕ್ರೀಡಾ ಉತ್ಸವದ ಮೂಲವೂ ಗ್ರೀಸ್! ಇಡೀ ವಿಶ್ವದಲ್ಲಿನ ದೇಶಗಳು ಕಾತುರದಿಂದ ಕಾಯುವ ಒಲಿಂಪಿಕ್ಸ್ ಪಂದ್ಯಾವಳಿ ಗ್ರೀಸಿನ ಕೊಡುಗೆ. ಪ್ರಾಚೀನ ಗ್ರೀಸ್‌ನ ಸಂಸ್ಕೃತಿಯ ಅವಿಭಾಜ್ಯ ಅಂಗ ಒಲಿಂಪಿಕ್ಸ್. ನಾಲ್ಕು ವರ್ಷಕ್ಕೊಮ್ಮೆ ಗ್ರೀಕರು ನಡೆಸುತ್ತಿದ್ದ ಈ ಉತ್ಸವ ಗ್ರೀಕರ ಅಸ್ಮಿತೆಯಂತಿತ್ತು. ಗ್ರೀಕ್ ದೇವತೆ ಝ್ಯೂಸ್‌ನ ಗೌರವಾರ್ಥವಾಗಿ ನಡೆಯುತ್ತಿದ್ದ ಸ್ಪರ್ಧೆಗಳಲ್ಲಿ ಗ್ರೀಕ್ ಯುವಕರು ಭಾಗವಹಿಸುತ್ತಿದ್ದರು. ಕ್ರಿ.ಪೂ. 776ರಿಂದ ನಡೆಯುತ್ತಿದ್ದ ಒಲಿಂಪಿಕ್ಸ್, ರೋಮನ್ನರ ಆಕ್ರಮಣದ ನಂತರವೂ ನಿಂತಿರಲಿಲ್ಲ. ಕ್ರಿ.ಶ.393ರಲ್ಲಿ ಒಂದನೆಯ ಥಿಯೋಡೋಸಿಯಸ್ ಎಂಬ ರೋಮನ್ ದೊರೆಯ ಕಾಲದಲ್ಲಿ, ಜ್ಯೂಸ್‌ನ ದೇವಾಲಯ ಅಗ್ನಿಗೆ ಆಹುತಿಯಾದ್ದರಿಂದ ನಿಂತಿತೆಂಬ ಐತಿಹ್ಯವಿದೆ. ಓಟ, ಕತ್ತಿವರಸೆ, ಡಿಸ್ಕಸ್ ಎಸೆತ, ದೂರ ಜಿಗಿತ, ರಥ ಸಾರಥ್ಯ, ಕುಸ್ತಿಯಂತಹ ಬೆರಳೆಣಿಕೆಯಷ್ಟು ಆಟಗಳು ಮಾತ್ರ ಪ್ರಾಚೀನ ಒಲಿಂಪಿಕ್ಸ್‌ನಲ್ಲಿದ್ದವು. ಪ್ರಾಚೀನ ಒಲಿಂಪಿಕ್ಸ್ ಗ್ರೀಸಿನ ಒಲಿಂಪಿಯಾ ನಗರದಲ್ಲಿ ನಡೆಯುತ್ತಿತ್ತು. ಗೆದ್ದವರಿಗೆ ಆಲಿವ್ ಎಲೆಗಳ ಕಿರೀಟವನ್ನು ತೊಡಿಸಲಾಗುತ್ತಿತ್ತು.

1500 ವರ್ಷಗಳವರೆಗೆ, ಒಲಿಂಪಿಕ್ಸ್ ಕಾಲ ಗರ್ಭದಲ್ಲಿ ವೈಭವೋಪೇತ ದಿನಗಳ ನೆನಪಾಗಿ ಉಳಿದು ಬಿಟ್ಟಿತ್ತು. ಅದನ್ನು ಮತ್ತೆ ಮುನ್ನೆಲೆಗೆ ತಂದು, ಇಡೀ ಪ್ರಪಂಚದಲ್ಲೇ ಒಲಿಂಪಿಕ್ಸ್ ಅನ್ನು ಸಂಭ್ರಮಿಸುವ ಹಾಗೆ ಮಾಡಿದ್ದು, ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಎಂದು ಕರೆಸಿಕೊಳ್ಳುವ **ಪಿಯರ್‌ದ ಕುಬರ್ಟಿನ್**. ಫ್ರೆಂಚ್ ದೈಹಿಕ ಶಿಕ್ಷಣ ತಜ್ಞನಾದ ಈತ, ಕ್ರೀಡೆ ಮಕ್ಕಳ ಶಿಕ್ಷಣದಲ್ಲಿ ಪ್ರಮುಖ ಪಠ್ಯವಾಗಬೇಕು ಎಂದು ವಾದಿಸುತ್ತಿದ್ದವ. ಪ್ರತಿಯೊಬ್ಬ ಗಂಡು ಮತ್ತು ಹೆಣ್ಣಿಗೆ, ಕ್ರೀಡೆ ಸ್ವಮೌಲ್ಯ ಮಾಪನ ಮತ್ತು ವಿಕಸನದ ಹಾದಿಯಾಗಿದೆ ಎನ್ನುತ್ತಿದ್ದವ. 1892ರಲ್ಲಿ ಸೋರ್ಬೋನ್‌ನಲ್ಲಿ ನಡೆದ ಸಭೆಯಲ್ಲಿ ಪ್ರಥಮ ಬಾರಿಗೆ ಒಲಿಂಪಿಕ್ಸ್‌ನ ಮರುಚಾಲನೆಯ ಪ್ರಸ್ತಾವನೆಯನ್ನಿಟ್ಟ, ನಂತರ 1894ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಪ್ರಸ್ತಾಪಿಸಿದ. ಅನೇಕ ಅಡೆತಡೆಗಳನ್ನು ಜಯಿಸಿ, ಅಂತೂ 1896ರಲ್ಲಿ, ಒಲಿಂಪಿಕ್ಸ್‌ನ ಮಾತೃಭೂಮಿ ಗ್ರೀಸಿನ ಅಥೆನ್ಸ್‌ನಲ್ಲಿಯೇ ಪ್ರಥಮ ಆಧುನಿಕ ಒಲಿಂಪಿಕ್ಸ್ ಅನ್ನು ಆಯೋಜಿಸಿಯೇ ಬಿಟ್ಟ. ಗ್ರೀಕರನ್ನು ಬಿಟ್ಟು, ಕೇವಲ 14 ಇತರೆ ದೇಶಗಳ ಸ್ಪರ್ಧಿಗಳನ್ನೊಳಗೊಂಡಿದ್ದ 1896ರ ಒಲಿಂಪಿಕ್ಸ್ ಅಂತಹ ಯಶಸ್ವೀ ಅಲ್ಲದಿದ್ದರೂ, ಕುಬರ್ಟಿನ್‌ನ ಮಹತ್ತರ ಕನಸಿನ ಸಾಕಾರ ರೂಪವಾಗಿತ್ತು. ಸತತ ಸುಧಾರಣೆಗಳು, ಸಹಕಾರಗಳು, ಪ್ರಯತ್ನಗಳು ಅವಿರತ ಪರಿಶ್ರಮದ ನಂತರ, 1924ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಒಲಿಂಪಿಕ್ಸ್‌ನ ಭರ್ಜರಿ ಯಶಸ್ಸು, ಒಲಿಂಪಿಕ್ಸ್‌ಗೆ ಭದ್ರ ನೆಲೆಯನ್ನು ಒದಗಿಸಿಕೊಟ್ಟಿತು. ತಕ್ಷಣವೇ ಕುಬರ್ಟಿನ್ ಒಲಿಂಪಿಕ್ಸ್ ಮಂಡಳಿಗೆ ರಾಜೀನಾಮೆ ಇತ್ತು ತನ್ನ ಕನಸಿನ ಬೆಳವಣಿಗೆಯನ್ನು ದೂರದಿಂದ ನೋಡುವುದನ್ನು ಆಯ್ದುಕೊಂಡ. 1937ರಲ್ಲಿ ನಿಧನರಾದ ಕುಬರ್ಟಿನ್‌ನ ದೇಹವನ್ನು ಸ್ವಿಟ್ಜರ್ಲ್ಯಾಂಡ್‌ನ ಲಾಸಾನ್‌ನಲ್ಲಿ ಹೂಳಲಾಯಿತಾದರೂ, ಅವನ ಬಯಕೆಯಂತೆ ಹೃದಯವನ್ನು ಗ್ರೀಸಿನ ಒಲಂಪಿಯಾದಲ್ಲಿ, ಪ್ರಾಚೀನ ಒಲಿಂಪಿಕ್ಸ್ ನಡೆಯುತ್ತಿದ್ದಲ್ಲಿ ಮಣ್ಣಿಗಿಡಲಾಯಿತು. ಈಗಲೂ ಒಲಿಂಪಿಕ್ಸ್‌ನ ಜ್ಯೋತಿಯನ್ನು ಒಲಿಂಪಿಯಾದಲ್ಲಿ ಹೊತ್ತಿಸಿದ ನಂತರ ಅದನ್ನು ಕುಬರ್ಟಿನ್‌ನ ಹೃದಯ ಹೂಳಲಾಗಿರುವ ಸಮಾಧಿಯ ಬಳಿ ತರಲಾಗುತ್ತದೆ. ಅಲ್ಲಿ ಆ ಜ್ಯೋತಿಯಿಂದ ಸಮಾಧಿಯ ಮುಂದಿರುವ ಜ್ಯೋತಿಯನ್ನು ಬೆಳಗಿಸಿ ಅಥೆನ್ಸ್‌ಗೆ ತರಲಾಗುತ್ತದೆ. ಅಥೆನ್ಸ್‌ನಿಂದ ಆತಿಥ್ಯ ವಹಿಸಿಕೊಂಡಿರುವ ನಗರಕ್ಕೆ ಕಳುಹಿಸಲಾಗುತ್ತದೆ. ಇದು ಕುಬರ್ಟಿನ್‌ಗೆ ಅತ್ಯುನ್ನತ ಗೌರವ.

Games Wide Open ಎಂಬುದು 2024ರ ಘೋಷವಾಕ್ಯವಾದರೆ, ಒಲಿಂಪಿಕ್ಸ್‌ನ ಮೂಲ ಘೋಷವಾಕ್ಯ, Citius-Altius-Fortius ಎಂದು. ಲ್ಯಾಟಿನ್ ಭಾಷೆಯಲ್ಲಿರುವ ಈ ಪದಗಳ ಅರ್ಥ, ವೇಗವಾಗಿ–ಎತ್ತರವಾಗಿ–ಶಕ್ತಿಯುತವಾಗಿ ಎಂದು. ಇದನ್ನು ಹೆನ್ರಿ ಡೈಡನ್ ಎಂಬ ಪಾದ್ರಿ ತನ್ನ ಉಪನ್ಯಾಸದಲ್ಲಿ ಹೇಳಿದ್ದು. ಅಂದು ಅಲ್ಲಿದ್ದ ಕುಬರ್ಟಿನ್ ಇದನ್ನೇ ಒಲಿಂಪಿಕ್ಸ್‌ನ ಘೋಷವಾಕ್ಯವಾಗಿಸಿದ. ಈಗ Comminiter ಎಂಬ ಪದವನ್ನು ಸೇರಿಸಲಾಗಿದೆ, ಒಟ್ಟಾಗಿ ಎಂದು.

ಒಲಿಂಪಿಕ್ಸ್‌ನ ವಿಶೇಷತೆ

● ಇಂದು ಒಲಿಂಪಿಕ್ಸ್‌ನಲ್ಲಿ 206 ದೇಶಗಳ 10714 ಕ್ರೀಡಾಳುಗಳು ಭಾಗವಹಿಸುತ್ತಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 32 ಕ್ರೀಡಾ ವಿಭಾಗದಲ್ಲಿ 329 ಸ್ಪರ್ಧೆಗಳು ನಡೆಯುತ್ತವೆ! ಒಲಿಂಪಿಕ್ಸ್ ಅನ್ನು 4 ವಿಧಗಳಾಗಿ ವಿಂಗಡಿಸಲಾಗಿದೆ. ಬೇಸಿಗೆ ಒಲಿಂಪಿಕ್ಸ್, ಚಳಿಗಾಲದ ಒಲಿಂಪಿಕ್ಸ್, ಯುವಜನರ ಒಲಿಂಪಿಕ್ಸ್ ಮತ್ತು ವಿಶೇಷ ಚೇತನರ ಒಲಿಂಪಿಕ್ಸ್ ಅಥವಾ ಪ್ಯಾರಾ ಒಲಿಂಪಿಕ್ಸ್ ಎಂದು. ಪ್ಯಾರಾ ಒಲಿಂಪಿಕ್ಸ್ ವಿಭಾಗದಲ್ಲಿಯೂ ಭಾರತದ ಕ್ರೀಡಾಳುಗಳ ಸಾಧನೆ ಪ್ರಶಂಸನೀಯ.

● ಇದುವರೆಗೂ 29 ಬೇಸಿಗೆಯ ಒಲಿಂಪಿಕ್ಸ್, 24 ಚಳಿಗಾಲದ ಒಲಿಂಪಿಕ್ಸ್ ಕ್ರಮವಾಗಿ 21 ಮತ್ತು 24 ನಗರಗಳಲ್ಲಿ ನಡೆದಿವೆ. ಆಫ್ರಿಕಾ ಖಂಡವನ್ನು ಹೊರತುಪಡಿಸಿ ವಿಶ್ವದ ಉಳಿದೆಲ್ಲ ಖಂಡಗಳ ಒಂದಿಲ್ಲೊಂದು ನಗರದಲ್ಲಿ ಒಲಿಂಪಿಕ್ಸ್ ಆಯೋಜನೆಯಾಗಿದೆ. ಭಾರತವೂ 2036ರ ಒಲಿಂಪಿಕ್ಸ್ ಉತ್ಸವ ಆಯೋಜಿಸುವ ಕನಸು ಹೊತ್ತಿದೆ. ಲಂಡನ್ 3 ಬಾರಿ ಒಲಿಂಪಿಕ್ಸ್ ಅನ್ನು ಆಯೋಜಿಸಿದೆ. 2024ರ ಒಲಿಂಪಿಕ್ಸ್ ಸೇರಿ ಪ್ಯಾರಿಸ್ ಮತ್ತು 2028ರ ಒಲಿಂಪಿಕ್ಸ್ ಸೇರಿ ಅಮೆರಿಕಾ ತಲಾ 3 ಬಾರಿ ಅಂದರೆ ಅತಿ ಹೆಚ್ಚು ಬಾರಿ ಜಾಗತಿಕ ಕ್ರೀಡಾ ಉತ್ಸವ ಆಯೋಜಿಸಿದವರ ಪಟ್ಟಿಗೆ ಸೇರುತ್ತವೆ.

> “ ಈ ಬಾರಿ ನಮ್ಮ ಭಾರತದ 117 ಆಟಗಾರರು 16 ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಎಲ್ಲರ ಮೇಲೂ ನಿರೀಕ್ಷೆಯ ಭಾರ ಎಷ್ಟಿದೆಯೋ ಅಷ್ಟೇ ಭರವಸೆಯೂ ಇದೆ. ಕಳೆದ ಬಾರಿ 7 ಪದಕಗಳೊಂದಿಗೆ 48ನೇ ಸ್ಥಾನದಲ್ಲಿದ್ದ ಭಾರತ ಪದಕ ಪಟ್ಟಿಯಲ್ಲಿ ಮೇಲೇರಲಿ ಎಂಬುದೇ 140 ಕೋಟಿ ಭಾರತೀಯರ ಆಶಯ.

● ಒಲಿಂಪಿಕ್ಸ್ ಅನ್ನು ಇಲ್ಲಿವರೆಗೂ ಅತೀ ಅನಿವಾರ್ಯ ಸಂದರ್ಭಗಳಲ್ಲಿ 3 ಬಾರಿ ರದ್ದುಪಡಿಸಲಾಗಿದೆ. 1916,1940 ಮತ್ತು 1944ರಲ್ಲಿ ಮೊದಲ ಮತ್ತು ಎರಡನೆಯ ಮಹಾಯುದ್ಧಗಳ ಸಂದರ್ಭಗಳಲ್ಲಿ ನಡೆಸಲಿಲ್ಲ. ಕೋವಿಡ್‌ನಿಂದಾಗಿ, 2020ರಲ್ಲಿ ಟೋಕಿಯೋನಲ್ಲಿ ನಡೆಯಬೇಕಾಗಿದ್ದ ಒಲಿಂಪಿಕ್ಸ್ ಅನ್ನು ಮುಂದೂಡಿ 2021ರಲ್ಲಿ ನಡೆಸಲಾಯಿತು.

● ಒಲಿಂಪಿಕ್ಸ್‌ನಲ್ಲಿ ಯಾವುದಾದರೂ ಆಟ ಆಡಿಸಲು ಆಯ್ಕೆಯಾಗಬೇಕೆಂದರೆ ಅದು ಸುಲಭವಲ್ಲ. ಅದಕ್ಕೆ ನೂರಾರು ನಿಬಂಧನೆಗಳಿವೆ. ಮೊಟ್ಟಮೊದಲಿಗೆ ಆಟದ ಕುರಿತು ಮಾಹಿತಿ ಮತ್ತು ಮನವಿಯನ್ನು ಅಂತರ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗೆ ಸಲ್ಲಿಸಬೇಕು. ಆ ಕ್ರೀಡೆ ಕನಿಷ್ಠ ಒಂದು ಸರ್ಕಾರೇತರ ಅಂತರ ರಾಷ್ಟ್ರೀಯ ಸಂಸ್ಥೆಯಿಂದ ನಿರ್ವಹಣೆಗೆ ಒಳಪಟ್ಟಿರಬೇಕು. ಸಮಿತಿ ಆ ಪ್ರತ್ಯೇಕ ಕ್ರೀಡೆಯನ್ನು ಒಲಿಂಪಿಕ್ಸ್ ಕ್ರೀಡೆಯನ್ನಾಗಿ ಅಂಗೀಕರಿಸಿದ ಮೇಲೆ, ಅಂತರ ರಾಷ್ಟ್ರೀಯ ಸ್ಪೋರ್ಟ್ಸ್ ಫೆಡರೇಶನ್ (IF)ಗೆ ಆ ಅರ್ಜಿ ಶಿಫಾರಸ್ಸಾಗುತ್ತದೆ. ಅಲ್ಲಿ ಕ್ರೀಡೆಯನ್ನು ನಿರ್ವಹಿಸುವ ಅಂತರ ರಾಷ್ಟ್ರೀಯ ಸಂಸ್ಥೆ, ವಿಶ್ವ ಡೋಪಿಂಗ್ ವಿರೋಧಿ ಸಂಹಿತೆಯನ್ನು ಆ ಕ್ರೀಡೆಗೆ ಲಾಗೂ ಮಾಡಬೇಕು. ನಂತರವಷ್ಟೇ ಆ ಪ್ರತ್ಯೇಕ ಆಟ ಒಲಿಂಪಿಕ್ಸ್‌ನಲ್ಲಿ ಆಡಲು ಅರ್ಹತೆ ಪಡೆಯುತ್ತದೆ. ಹಾಗೆಂದ ಮಾತ್ರಕ್ಕೆ IOC ಯಿಂದ ಅಂಗೀಕರಿಸಲ್ಪಟ್ಟ ಆಟಗಳೆಲ್ಲಾ ಒಲಿಂಪಿಕ್ಸ್‌ಗೆ ಆಯ್ಕೆಯಾಗಿ ಬಿಡುತ್ತವೆ ಎಂದಲ್ಲ. ಆಟದ ವಿವಿಧ ಆಯಾಮಗಳನ್ನೂ ಸಮಿತಿ ಗಮನಿಸುತ್ತದೆ. ಸೂಕ್ತ ಕ್ರೀಡಾಂಗಣ, ಜನಪ್ರಿಯತೆ, ಖರ್ಚು–ವೆಚ್ಚಗಳನ್ನು ಪರಿಗಣಿಸುತ್ತದೆ. ಕೊನೆಗೆ ಇಷ್ಟೆಲ್ಲಾ ಆದ ಮೇಲೂ, ಆ ಪ್ರತ್ಯೇಕ ಕ್ರೀಡೆಯನ್ನು, 75 ದೇಶಗಳು, 4 ಖಂಡಗಳಲ್ಲಿ ಪುರುಷರೂ ಮತ್ತು 40 ದೇಶಗಳು ಹಾಗೂ 3 ಖಂಡಗಳಲ್ಲಿ ಮಹಿಳೆಯರು ವ್ಯಾಪಕವಾಗಿ ಅಭ್ಯಾಸ ಮಾಡುತ್ತಿರಬೇಕು. ಅತ್ಯಂತ ಜನಪ್ರಿಯವೆನಿಸಿರುವ ಕ್ರಿಕೆಟ್ ಸೇರ್ಪಡೆಯಾಗಲು ಇದೇ ಅಡ್ಡಿ! ಹೊಸ ಕ್ರೀಡೆಗಳ ಸೇರ್ಪಡೆ ಪ್ರತಿ ಒಲಿಂಪಿಕ್ಸ್‌ನಲ್ಲೂ ಆಗುತ್ತಿರುತ್ತದೆಯಾದರೂ, ಒಂದು ಕ್ರೀಡೆಯನ್ನು ಕಡಿತಗೊಳಿಸಿ ಇನ್ನೊಂದಕ್ಕೆ ಅವಕಾಶ ನೀಡಲಾಗುತ್ತದೆ. ಈ ಬಾರಿ, ಬೇಸ್ ಬಾಲ್ ಮತ್ತು ಸಾಫ್ಟ್ ಬಾಲ್‌ಗಳ ಬದಲಿಗೆ ಬ್ರೇಕ್ ಡ್ಯಾನ್ಸ್ ಅನ್ನು ಪರಿಚಯಿಸಲಾಗುತ್ತಿದೆ!

● ಒಲಿಂಪಿಕ್ಸ್ ಬಗ್ಗೆ ಮಾತನಾಡುವಾಗ ಪದಕಗಳ ಬಗ್ಗೆ ಮಾತನಾಡದಿದ್ದರೆ ಆದೀತೆ! 1896ರಿಂದ ದೇಶಗಳು ಗಳಿಸಿರುವ ಪದಕಗಳ ಪಟ್ಟಿ ಗಮನಿಸಿದರೆ, ವಿಶ್ವದ ದೊಡ್ಡಣ್ಣ ಅಮೆರಿಕಾ ಇಲ್ಲೂ ಅಗ್ರಸ್ಥಾನದಲ್ಲಿದೆ. ಒಟ್ಟು 2,629 ಪದಕಗಳಲ್ಲಿ ಚಿನ್ನದ ಪದಕಗಳೇ 1,061. ರಷ್ಯಾ ಒಟ್ಟು 1,624 ಮತ್ತು ಜರ್ಮನಿ 1,386 ಪದಕಗಳನ್ನು ಗಳಿಸಿ 2 ಮತ್ತು 3ನೇ ಸ್ಥಾನಗಳಲ್ಲಿವೆ.

● ಅಮೆರಿಕಾಗೆ ಅಷ್ಟು ಚಿನ್ನದ ಪದಕಗಳು ಅಂದಾಕ್ಷಣ ಕೆಜಿಗಟ್ಟಲೆ ಚಿನ್ನ ಅವರಿಗೆ ಸೇರಿತಲ್ಲಪ್ಪಾ ಅಂದುಕೊಂಡಿರಾ! ವಾಸ್ತವವಾಗಿ, ಚಿನ್ನ ಮತ್ತು ಬೆಳ್ಳಿಯ ಪದಕಗಳೆರಡೂ ಬೆಳ್ಳಿಯವೇ! 210 ಗ್ರಾಮ್ ತೂಗುವ ಪದಕಕ್ಕೆ 6 ಗ್ರಾಮ್‌ನ ಚಿನ್ನದ ಲೇಪನ ಮಾಡಿದರೆ ಅದೇ ಒಲಿಂಪಿಕ್ಸ್‌ನ ಚಿನ್ನದ ಪದಕ. ಲೇಪನ ಮಾಡದಿದ್ದರೆ ರಜತ ಪದಕ! ಕಂಚಿನ ಪದಕದಲ್ಲಿ ತಾಮ್ರ, ಝಿಂಕ್, ಟಿನ್ ಮತ್ತು ಸ್ವಲ್ಪ ಬೆಳ್ಳಿಯೂ ಇರುತ್ತದೆ.

● ಕೊನೆಯದಾಗಿ ರೆಪೆಶಾರ್ಝ್, Repêchage, ಬಗ್ಗೆ ಹೇಳಲೇಬೇಕು. ರೆಪೆಶಾರ್ಝ್ ಎಂದರೆ, ಪ್ರಾಥಮಿಕ ಸುತ್ತುಗಳಲ್ಲಿ ಸಣ್ಣ ಅಂತರದಲ್ಲಿ ಸೋಲನ್ನು ಅನುಭವಿಸಿದ ಅರ್ಹ ಕ್ರೀಡಾಪಟುಗಳಿಗೆ ನೀಡುವ ಮತ್ತೊಂದು ಸುವರ್ಣಾವಕಾಶ. ಉದಾಹರಣೆಗೆ ಕುಸ್ತಿಯಲ್ಲಿ 8 ಜನ ಸ್ಪರ್ಧಾಳುಗಳಿದ್ದು 8 ಮತ್ತು 7ನೇ ಕ್ರಮಾಂಕದವರು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದರೆ,3, 4, 5, 6ನೇ ಕ್ರಮಾಂಕದವರು ಸಣ್ಣ ಅಂತರದಲ್ಲಿ ಸೆಮಿಫೈನಲ್ ಹಂತವನ್ನು ತಪ್ಪಿಸಿಕೊಂಡು ಪದಕ ವಂಚಿತರಾಗಿರುತ್ತಾರೆ. ರೆಪೆಶಾರ್ಝ್ ನಿಯಮದ ಪ್ರಕಾರ ಇವರ ಮಧ್ಯೆ ಸ್ಪರ್ಧೆ ಏರ್ಪಟ್ಟು ಗೆದ್ದವರು ಅಂತಿಮ ಸುತ್ತಿನ ಸ್ಪರ್ಧಿಗಳ ಜೊತೆ ಸೆಣಸಿ ಕಂಚಿನ ಪದಕ ಗಳಿಸಲು ಅರ್ಹರಾಗುತ್ತಾರೆ. ನಮ್ಮ ಭಾರತದ ಒಲಿಂಪಿಕ್ ಪದಕಿಗಳಾದ ಸುಶೀಲ್‌ಕುಮಾರ್, ಯೋಗೇಶ್ವರ್ ದತ್, ಸಾಕ್ಷಿ ಮಲಿಕ್ ಮತ್ತು ಭಜರಂಗ್ ಪೂನಿಯಾ ಅವರಿಗೆಲ್ಲಾ ರೆಪೆಶಾರ್ಝ್ ನಿಯಮವೇ ಪದಕವನ್ನು ಗೆಲ್ಲಿಸಿಕೊಟ್ಟಿದ್ದು. ಮುಂಚೆ ಕುಸ್ತಿ, ಬೋಟ್ ರೇಸ್ ನಂತಹ ಕೆಲವು ಪಂದ್ಯಗಳಿಗಿದ್ದ ರೆಪೆಶಾರ್ಝ್ ಅನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 100ಮೀ ಬಿಟ್ಟು ಬೇರೆ ಓಟದ ಸ್ಪರ್ಧೆಗಳಲ್ಲಿ ಜಾರಿ ಮಾಡಿರುವುದು ವಿಶೇಷ. ಇದು ಪ್ರತಿ ಕ್ರೀಡಾಳುವನ್ನು ಪದಕಕ್ಕೆ ಸನಿಹವಾಗಿಸುತ್ತದೆ.

ಹೇಳುತ್ತಾ ಹೋದರೆ ಒಲಿಂಪಿಕ್ಸ್‌ನ ಗಾಥೆ ನಿಲ್ಲುವುದಲ್ಲ. 1936ರ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಜೆಸ್ಸಿ ಓವೆನ್ಸ್, ಲಝ್ ಲಾಂಗ್‌ನ ಬಗ್ಗೆ ಹೇಳುವ ಹೃದಯಸ್ಪರ್ಶಿ ಅನುಭವದ ಕತೆ ನಿಮ್ಮನ್ನು ಹನಿಗಣ್ಣಾಗಿಸಬಲ್ಲದು. ಮ್ಯಾರಥಾನ್ ಹುಟ್ಟಿದ ಬಗೆ ಅಚ್ಚರಿಗೊಳಿಸಬಲ್ಲದು! ಒಲಿಂಪಿಕ್ಸ್‌ನ ಧ್ವಜದ ಹಿಂದಿನ ಕಥೆ ನಿಮ್ಮ ಆಸಕ್ತಿ ಕೆರಳಿಸಬಲ್ಲದು. ಜಗತ್ತಿಗೆ ಶಾಂತಿ ಸೌಹಾರ್ದದ ಪಾಠವನ್ನು ಒಲಿಂಪಿಕ್ಸ್, ಕ್ರೀಡೆಯ ಮೂಲಕ ಹೇಳುತ್ತದೆ.

ಈ ಬಾರಿ ನಮ್ಮ ಭಾರತದ 117 ಆಟಗಾರರು 16 ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಎಲ್ಲರ ಮೇಲೂ ನಿರೀಕ್ಷೆಯ ಭಾರ ಎಷ್ಟಿದೆಯೋ ಅಷ್ಟೇ ಭರವಸೆಯೂ ಇದೆ. ಕಳೆದ ಬಾರಿ 7 ಪದಕಗಳೊಂದಿಗೆ 48ನೇ ಸ್ಥಾನದಲ್ಲಿದ್ದ ಭಾರತ ಪದಕ ಪಟ್ಟಿಯಲ್ಲಿ ಮೇಲೇರಲಿ ಎಂಬುದೇ 140 ಕೋಟಿ ಭಾರತೀಯರ ಆಶಯ. ಪ್ಯಾರಿಸ್ಸಿನ ಹವಾಮಾನಕ್ಕೆ ಹೊಂದಿಕೊಳ್ಳಲೆಂದು ಕೊಂಚ ಮುಂದಾಗಿಯೇ ಪ್ಯಾರಿಸ್ಸಿಗೆ ತೆರಳಿದ ಕ್ರೀಡಾಪಟುಗಳಿಗೆ ಶುಭ ಹಾರೈಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿರುವ ಮಾತುಗಳು ಸ್ಪರ್ಧಿಗಳ ಉತ್ಸಾಹ ಮತ್ತು ಜವಾಬ್ದಾರಿಗಳನ್ನು ಇಮ್ಮಡಿಗೊಳಿಸಿರುವುದರಲ್ಲಿ ಸಂದೇಹವೇ ಇಲ್ಲ. ಪ್ರಧಾನಿ ಮೋದಿ ಹೇಳುತ್ತಾರೆ, “ಪದಕ ಬರುತ್ತದೋ ಬಿಡುತ್ತದೋ, ಅದರ ಬಗೆಗಿನ ಚಿಂತೆ ನಿಮಗೆ ಬೇಡ. ನಿಮ್ಮ ಅತ್ಯುತ್ತಮ ಆಟವನ್ನು ಅಲ್ಲಿ ಆಡಿ. ಸಾಕು. ಪದಕ ತಾನಾಗಿಯೇ ಬರುತ್ತದೆ.” ನಿಜ ಅಲ್ಲವೇ?

ಮಹಿಳೆಯರಿಗೆ ಫ್ರೀ ಬಸ್: ಕರ್ನಾಟಕ ಅನುಸರಿಸಿದ ಆಂಧ್ರ

ಅಮರಾವತಿ: ಕರ್ನಾಟಕ ಹಾಗೂ ತೆಲಂಗಾಣ ಬೆನ್ನಲ್ಲೇ ಆಂಧ್ರಪ್ರದೇಶ ಸರ್ಕಾರ ಕೂಡ ಫ್ರೀ ಬಸ್ ಯೋಜನೆ ಜಾರಿ ಮಾಡುವುದಾಗಿ ತಿಳಿಸಿದೆ.



ಜೂನ್ 12ರಂದು ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದರೂ, ಮಹಿಳೆಯರಿಗೆ ಉಚಿತ ಬಸ್ ಯೋಜನೆಯನ್ನು ಜಾರಿಗೆ ತಂದಿರಲಿಲ್ಲ. ಇದೀಗ ಆಗಸ್ಟ್ 15ರಂದು ಇದನ್ನು ಜಾರಿಗೆ ತರಲಾಗುವುದು ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಿದೆ. ಆಂಧ್ರಪ್ರದೇಶ ಸರ್ಕಾರ ಕ್ಯಾಬಿನೆಟ್ ಸಭೆಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಬಗ್ಗೆ ಚರ್ಚಿಸಿದೆ. ಯೋಜನೆಯ ಅನುಷ್ಠಾನದ ದಿನಾಂಕವನ್ನು ನಿಗದಿಪಡಿಸಲಾಗಿದೆ. ಆದರೆ ಮಾರ್ಗಸೂಚಿಗಳನ್ನು ಇನ್ನೂ ಅಧಿಕೃತವಾಗಿ ಬಿಡುಗಡೆ ಮಾಡಿಲ್ಲ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಮಹಿಳೆಯರು ಬಸ್ ಹತ್ತುವಾಗ ಆಧಾರ್ ಕಾರ್ಡ್ ತೋರಿಸಲಾಗುತ್ತದೆ. ಆಗ ಕಂಡಕ್ಟರ್ ಶೂನ್ಯ ಟಿಕೆಟ್ ನೀಡುತ್ತಾರೆ. ಅದು ಉಚಿತ ಟಿಕೆಟ್. ಆ ಟಿಕೆಟ್ ಪಡೆದ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ.

ಮುಡಾ ಹಗರಣ: 2000ನೇ ಇಸವಿಯಿಂದ ತನಿಖೆ ನಡೆಸಿದರೆ ಸತ್ಯಾಂಶ ಹೊರಬರಲಿದೆ

ಮೈಸೂರು, ಜು.17(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ 50:50 ಅನುಪಾತದ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಖಂಡನೀಯ ಎಂದ ವಕೀಲ ಎಂ.ಎ.ಪುಟ್ಟಸಿದ್ದೇಗೌಡ, ಮುಡಾದಲ್ಲಿ 2000ನೇ ಇಸವಿಯಿಂದ ಇಲ್ಲಿಯವರೆಗೂ ನಡೆದಿರುವ ಕುರಿತು ತನಿಖೆ ನಡೆಸಿದರೆ ಸತ್ಯಾಂಶ ಹೊರಬರಲಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಏಳಿಗೆ ಸಹಿಸದವರು ಯಾವುದೇ ದಾಖಲಾತಿ ಇಲ್ಲದಿದ್ದರೂ ಆರೋಪ ಮಾಡುತ್ತಿದ್ದಾರೆ ಎಂದರು.



ಸಿಎಂ ಪತ್ನಿ ಪಾರ್ವತಿ ಅವರು ಅಕ್ರಮವಾಗಿ 14 ನಿವೇಶನ ಪಡೆದಿದ್ದಾರೆ ಎಂಬ ಆರೋಪ ಆಧಾರರಹಿತವಾಗಿದ್ದು, ಯಾರೇ ಒಬ್ಬ ವ್ಯಕ್ತಿಯ ಒಡೆತನದ ಅಥವಾ ಮಾಲೀಕತ್ವಕ್ಕೆ ಒಳಪಟ್ಟ ಜಮೀನನ್ನು ಸಾರ್ವಜನಿಕ ಹಿತಾಸಕ್ತಿಯಿಂದ ವಶ ಪಡಿಸಿಕೊಂಡಾಗ ಅವರು ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ಮುಡಾ ಸಹಾ ಪಾರ್ವತಿ ಅವರ ಜಮೀನು ಪಡೆದಿರುವ ಕಾರಣ ಬದಲಿಯಾಗಿ ನಿವೇಶನ ನೀಡಿದೆ ಎಂದು ವಿವರಿಸಿದರು. ಸಿದ್ದರಾಮಯ್ಯ ಅವರು ಕಳೆದ ನಾಲ್ಕೈದು ದಶಕಗಳಿಂದ ಸಾರ್ವಜನಿಕ ಬದುಕಿನಲ್ಲಿ ಇದ್ದು, ರಾಜಕೀಯ ಜೀವನದುದ್ದಕ್ಕೂ ಪರಿಶುದ್ಧತೆ ಮತ್ತು ಪ್ರಾಮಾಣಿಕತೆ ಉಳಿಸಿಕೊಂಡಿದ್ದಾರೆ. ಹೀಗಾಗಿ ಇವರ ಹೆಸರಿಗೆ ಕಳಂಕ ತರಲೆಂದು ಸುಳ್ಳು ಆರೋಪ ಮಾಡಲಾಗುತ್ತಿದೆ ಎಂದ ಅವರು, ಮುಡಾದಲ್ಲಿನ ಅವ್ಯವಹಾರ ಕುರಿತಂತೆ ಕಳೆದ 2000 ದಿಂದಲೂ ತನಿಖೆ ನಡೆದಲ್ಲಿ ಸತ್ಯಾಂಶ ಹೊರಗೆ ಬರುತ್ತದೆ. ಆದ್ದರಿಂದ ಮುಡಾದ ಒಟ್ಟಾರೆ ವ್ಯವಹಾರ ಕುರಿತು ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಎನ್.ಲೋಕೇಶ್, ಜೆ.ಎನ್. ಲಕ್ಷ್ಮಣ್, ಕೆ.ಎಸ್.ಅಂದಾನಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅನಾಥ ಮಕ್ಕಳಿಗೆ ಪ್ರೀತಿ ತೋರಿಸುವುದು ಉತ್ಕೃಷ್ಟ ಮಾನವೀಯ ಸೇವೆ

ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯ



ಮೈಸೂರು ಜಯನಗರದ ಭಾಯಾದೇವಿ ಅನಾಥಾಶ್ರಮದ ಮಕ್ಕಳಿಗೆ ಹೊದಿಕೆ ಇತ್ಯಾದಿ ದೈನಂದಿನ ಅಗತ್ಯ ಪರಿಕರಗಳನ್ನು ವಿತರಿಸಲಾಯಿತು.

ಮೈಸೂರು, ಜು.17– ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ನರ್ಸಿಂಗ್ ಕಾಲೇಜು ಸಂಯುಕ್ತಾಶ್ರಯದಲ್ಲಿ ಜಯನಗರದ ಭಾಯಾದೇವಿ ಅನಾಥಾಶ್ರಮದ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಹೊದಿಕೆ ಇತ್ಯಾದಿ ದೈನಂದಿನ ಅಗತ್ಯ ಪರಿಕರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ಭಾಯಾದೇವಿ ಅನಾಥಾಶ್ರಮದವರು ಅನಾಥ ಮಕ್ಕಳನ್ನು ಸಾಕಿ-ಸಲಹಿ ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ರೂಪಿಸುತ್ತಿರುವುದು ಶ್ಲಾಘನೀಯ ಎಂದರು.

ತಂದೆ-ತಾಯಿ ಇರುವ ಮಕ್ಕಳಿಗೆ ಕುಟುಂಬದಲ್ಲಿ ಪ್ರೀತಿ ಹಂಚುವುದಿದ್ದು, ಈ ಅನಾಥ ಮಕ್ಕಳಿಗೆ ಪ್ರೀತಿ ಹಂಚುವ ಕೆಲಸ ಮಾನವೀಯತೆಯ ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಮನುಷ್ಯ ಸಂಘಜೀವಿಯಾಗಿದ್ದು, ಅವನಿಗೆ ಆದರೂ ಮಕ್ಕಳು ಮರೋಭಿವೃದ್ಧಿಗೆ ಪ್ರೀತಿ ವಾತ್ಸಲ್ಯಗಳು ಅತ್ಯವಶ್ಯಕ ಎಂದರು. ಸುಯೋಗ್ ಆಸ್ಪತ್ರೆಯು ಈ ಎಲ್ಲ ಮಕ್ಕಳಿಗೂ ಉಚಿತವಾಗಿ ಆರೋಗ್ಯಸೇವೆ ಒದಗಿಸುವುದರೊಂದಿಗೆ ಅವರಿಗೆ ಬೇಕಾದ ನೆರವು ನೀಡಿದ ಅವರು, ಇನ್ನು ಮುಂದೆ ಮಕ್ಕಳ ತಜ್ಞರು ಆಶ್ರಮಕ್ಕೆ ಬಂದು ಮಕ್ಕಳ ತಪಾಸಣೆ ಮಾಡಿ ಸೂಕ್ತ ಔಷಧಗಳನ್ನು ನೀಡುವರು ಎಂದರು.

ಇದೇ ವೇಳೆ ಡಾ.ಯೋಗಣ್ಣನವರು, ಎಲ್ಲ ಮಕ್ಕಳ ಆರೋಗ್ಯ ತಪಾಸಣೆ ಮಾಡಿದರು. ಕಾರ್ಯಕ್ರಮದಲ್ಲಿ ಭಾಯಾದೇವಿ ಅನಾಥಾಶ್ರಮದ ಅಧ್ಯಕ್ಷ ಭಾನುಪ್ರಕಾಶ್, ಸುಯೋಗ್ ಆಸ್ಪತ್ರೆಯ ನಿರ್ದೇಶಕಿ ಶ್ರೀಮತಿ ಸುಧಾ ಯೋಗಣ್ಣ, ಕಾಲೇಜಿನ ವ್ಯವಸ್ಥಾಪಕ ನಿರ್ದೇಶಕ ಡಾ.ಆರ್. ರಾಜೇಂದ್ರಪ್ರಸಾದ್, ಸುಯೋಗ್ ನರ್ಸಿಂಗ್ ಕಾಲೇಜಿನ ಉಪಾಧ್ಯಕ್ಷ ಡಾ. ಸೀಮಾ ಯೋಗಣ್ಣ ಸುಯೋಗ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ನಾಗಮಣಿ ಇತರರು ಉಪಸ್ಥಿತರಿದ್ದರು.

ಮಸ್ಕತ್ ಶಿಯಾ ಮಸೀದಿ ಬಳಿ ಉಗ್ರರ ದಾಳಿ: ಭಾರತೀಯ ಪ್ರಜೆ ಸೇರಿ 6 ಮಂದಿ ಸಾವು

ದುಬೈ/ಮಸ್ಕತ್: ಒಮನ್ ರಾಜಧಾನಿ ಮಸ್ಕತ್‌ನಲ್ಲಿರುವ ಶಿಯಾ ಮುಸ್ಲಿಂ ಮಸೀದಿ ಬಳಿ ಸೋಮವಾರ ರಾತ್ರಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಒಬ್ಬ ಭಾರತೀಯ ಸೇರಿ ಆರು ಮಂದಿ ಮೃತಪಟ್ಟಿದ್ದಾರೆ.

ಈ ಘಟನೆಯಲ್ಲಿ ಒಬ್ಬ ಪೊಲೀಸ್ ಹಾಗೂ ಪಾಕಿಸ್ತಾನದ ನಾಲ್ವರು ಮೃತಪಟ್ಟಿದ್ದು, 28 ಮಂದಿ ಗಾಯಗೊಂಡಿದ್ದಾರೆ. ಈ ವೇಳೆ ಪ್ರತಿದಾಳಿ ನಡೆಸಿದ ಭದ್ರತಾ ಪಡೆಗಳು ಮೂವರು ಉಗ್ರರನ್ನು ಸದೆಬಡಿದಿವೆ ಎಂದು ತಿಳಿದುಬಂದಿದೆ.

ಈ ಕುರಿತು ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯವು, 'ಉಗ್ರರ ದಾಳಿಯಲ್ಲಿ ಭಾರತದ ಒಬ್ಬ ಪ್ರಜೆ ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ. ಮೃತನ ಕುಟುಂಬಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡಲಾಗುವುದು' ಎಂದು ತಿಳಿಸಿದೆ.

ಪಾಕಿಸ್ತಾನ, ಇರಾಕ್, ಅಫ್ಘಾನಿಸ್ತಾನ ಸೇರಿದಂತೆ ಇತರ ದೇಶಗಳಲ್ಲಿರುವ ಶಿಯಾ ಮಸೀದಿಗಳು, ಸಮಾವೇಶ, ಮೆರವಣಿಗೆ ಮತ್ತು ಭಕ್ತರನ್ನು ಗುರಿಯಾಗಿಸಿ ಐಎಸ್ ಉಗ್ರರು ನಿರಂತರವಾಗಿ ದಾಳಿ ನಡೆಸುತ್ತಿದ್ದಾರೆ. ಶಿಯಾ ಸಮುದಾಯ ಅಲ್ಪಸಂಖ್ಯಾತರಾಗಿರುವ ಒಮನ್‌ನಲ್ಲಿ ಐಎಸ್ ಉಗ್ರರು ಇದೇ ಮೊದಲ ಬಾರಿಗೆ ದಾಳಿ ಎಸಗಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

ಬೇಕಾಗಿದ್ದಾರೆ
ಚಾಮರಾಜನಗರ ಡೀವೀಯೇಷನ್‌ನಲ್ಲಿರುವ ಮಳಿಗೆಯನ್ನು ನೋಡಿಕೊಳ್ಳಲು ಮಹಿಳೆಯರು / ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9448022967

ಬೇಕಾಗಿದ್ದಾರೆ
ಗುಂಡ್ಲುಪೇಟೆ ಟೌನ್‌ನ ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಬೆಳಿಗ್ಗೆಯಿಂದ ಸಂಜೆವರೆಗೆ. ಸಂಪರ್ಕಿಸಿ:
Mob: 9448022967

WE ARE HIRING
Accountant (M/F)
Experience - 2 to 3 Years Wellknown Tally ERP-9. Salary : 18000 above
Contact:
Century Mattress Distriutor
Near Preeti Granite, Hebbal, Mysore
0821-4286890
8217411158

RECEPTIONIST REQUIRED
Female- Basic Computer Skills
Dattagalli, Mysuru
7760098181
9900349888

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಅನುಭವಿಗಳಿಗೆ ಮೊದಲ ಆದ್ಯತೆ. ಶ್ರೀ ಸರ್ವಿಸ್ ಸ್ಟೇಷನ್, ಸರಸ್ವತಿಪುರಂ, ಮೈಸೂರು. ಸಂಪರ್ಕಿಸಿ: ಪ್ರಶಾಂತ್
9880567272

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SUNZONE SOLAR SYSTEM


Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

WANTED SITE
30X40, North or East
Vijayanagar 3rd, 4th Stage, Bogadhi
Niveditanagar
CFTRI Surroundings
Owners Pls Contact
8217478082

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ADMISSION OPEN
Govt.of Karnataka Dept. of Tourism
FOOD CRAFT INSTITUTE-MYSURU
EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

ಟೀಚರ್ಸ್ ಟ್ರೇನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ?
SSLC ಪಾಸ್ PUC,
Degree ಪಾಸ್/ಫೇಲ್ !
NURSERY TEACHERS TRAINING
ಟ್ರೈನಿಂಗ್ ನಂತರ ತಕ್ಷಣ ಕೆಲಸ
ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ
I PUC ಓದುತ್ತಿರುವವರು ಸಹ ಸೇರಬಹುದು
ವಿವರಗಳಿಗೆ Watsapp/Call
9113980741

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

Alpha School of Fashion Design


NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE
ADMISSION OPEN
*HOSTEL AND PG AVAILABLE
Alpha School of Fashion Design
782 993 7469

SITES FOR SALE
ಬನ್ನೂರು ರಸ್ತೆ, ದೇವೇಗೌಡ ಸರ್ಕಲ್ ಹತ್ತಿರ,
30x40 & 30x50
ನಿವೇಶನಗಳು ಲಭ್ಯವಿದೆ.
9448447035

Document Lost
Arulappan D., St. Philomena, #39, Boys Home, FTS Circle, N.R. Mohalla, Mysore-570 007, lost site sale deed Document No. 998 / Survey No. 417.
Finders please contact:
Mob: 9710815559

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

WANTED
A reputed CBSE school in Hebbal requires Hindi Teacher with D.Ed. / B.Ed. / MA in Hindi. Contact:
0821-2402929, 9481123959
Send resume to:
career@kncinnovativeglobalschool.com

WANTED
Sales Executive for marketing.
Experience: 2-3 years.
8152027860, 9620052257

Vacancy at reputed Hotel in Mysore
1) Receptionist post (shift wise) (Male candidate only. Fresher or 1-2 years experience). *Contact:*
Mob: 8217737552

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ, ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Change of Name
I, Raghu M, residing at No. 311, 18th Cross, Sri Chamundeshwari Railway Layout, Mysuru-570 016, declare that my name is Raghu M. The same name is mentioned in all documents, includes Aadhaar Card. But my name is mentioned Raghu in my Passport bearing No. M5735976 issued by Govt. of India. Henceforth I changed my name as Raghu Mahendra on my own free will, in front of Notary S.N. Hemalatha on 12-7-2024.
Sd/- Raghu Mahendra

Mata Brijeshwari Ayurveda WANTED
Telecallers: 3 (Work from home)
Office Assistant: 1
System Operator: 1
Vijayanagar 2nd Stage, Mysore.
9740975974, 9886872757

ಸೈಟುಗಳು ಮಾರಾಟಕ್ಕಿವೆ
ಭೋಗಾದಿ ಮುಖ್ಯ ರಸ್ತೆಗೆ ಹತ್ತಿರವಾದಂತೆ ಮನೆ ಕಟ್ಟಲು ಸಿದ್ಧವಿರುವ 30x40, 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9019562901, 8217596732

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 15,000/–
7899754149

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಕನ್ನಡ ಮಾತನಾಡಬಲ್ಲವರು)
ಟೀಮ್ ಲೀಡರ್ ಬೇಕಾಗಿದ್ದಾರೆ
(ಸಂಬಳ: 12000)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 10,000
DRA Certificate ಇದ್ದರೆ 12,000
8150005111

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

WANTED
ACCOUNTANT (Female)
for reputed Hardware shop in Dattagali, Mysuru
Qualification B.Com, BBM
(Tally Must)
Work timing : 9.30 to 5.30 pm
Call: 9480223300

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
Eureka Forbes Authorised Service Centre ನಲ್ಲಿ ಫೀಲ್ಡ್ ಸರ್ವೀಸ್ ಟೆಕ್ನಿಷಿಯನ್ ಬೇಕಾಗಿದ್ದಾರೆ
(Two wheeler must)
9900598587, 9902943204

For Clearance Sale
ಪಾರ್ಲರ್ / ಚೇರ್ / ಸೋಫಾ / ಮಸಾಜ್ ಬೆಡ್ / Plywood / Rack, ಇತರ ವಸ್ತುಗಳು (For Sale) 2 Nos. / Cutting Chair / Massage bed / ಇತರೆ Electrical Items.
Call: 9972837203

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಅಕೌಂಟೆಂಟ್ ಬೇಕಾಗಿದ್ದಾರೆ. ಮಹಿಳೆಯರಿಗೆ ಮಾತ್ರ ಆದ್ಯತೆ. ಆಕರ್ಷಕ ವೇತನ ದೊರೆಯುತ್ತದೆ.
9902754149

ಪ್ರವೇಶ ತೆರೆದಿದೆ
DMLT, OT, IT, FOR SSLC/ PUC PASS/ FAIL STUDENTS B.VOC (BACHELOR OF VOCATION) ALL PROGRAMS AVAILABLE M. VOC LAB (LIMIT SEATS)
8073195952

ಬೇಕಾಗಿದ್ದಾರೆ
ನುಡಿ ಟೈಪ್ ಮಾಡಲು ಬೇಕಾಗಿದ್ದಾರೆ
ಸಂಬಳ 15000/-
Ph.7406 369 369
ಶಿವರಾಂಪೇಟೆ, ಮೈಸೂರು

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು, ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

100% NEEM WOOD PLYWOOD & DOORS
@ FACTORY DEPOT RATES
Neem Bond Platinum™ 10yrs WARRANTY
CALL 99012 91267
98454 26862

ಉದ್ಯೋಗ ಅವಕಾಶಗಳು
18 ವರ್ಷ ಮೇಲ್ಪಟ್ಟ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 9000 ರಿಂದ 15000 ನೇರ ಸಂದರ್ಶನ ಸಂಪರ್ಕಿಸಿ ಆಲನಹಳ್ಳಿ ಬಸ್ ಸ್ಟಾಪ್ ಹತ್ತಿರ, ಮೈಸೂರು
8296917369

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ "A" ಬ್ಲಾಕ್ 60 ಅಡಿ ರಸ್ತೆಗೆ ಒಂದೇ ಸೈಟಿನಲ್ಲಿ 30x40, 30x24 ಹಾಗೂ 10x10.5 ಅಂಗಡಿ ಮಳಿಗೆಗೆ ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿದೆ. ಒಟ್ಟು ವಿಸ್ತೀರ್ಣ 2900 ಸ್ಕ್ವೈರ್‌ಫೀಟ್, ಚ.ಅ.ಗೆ 1850
8618644886
9880280299

FOR SALE
1. 20x30, 30x40, Sites @ Bogadi, Rainbow School
2. 20x30 @ SBM Bogadi Attach
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram
6. 20x30, Sites For Sale At Yelwala 30x40 Sites attached to Brahmins Lyt
PRAKRUTHI PROPERTIES
95386 90359, 90359 90359

Yesh Mega City
G Block , No. 38, East Facing, 30x40 dimension, DTCP Approved, 9/11 A Katha, Manuganahalli Panchayat, Attached to Ankanahalli, Hunsur Registration. 5 kms from Yelwala towards Hunsur
Rs.1250/sqft.
9900952577

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ Office Showroom & Company ಗಳಿಗೆ 7th, 10th, PUC, Degree, ITI, Diploma, Pass / Fail ಆದ ಯುವಕ/ ಯುವತಿಯರು Packing, Helper, Telecalling, Data Entry, Receptionist, Line Incharge, Billing, ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 14500/– 39000/– (ESI+PF OT) ಸೇರಿ
9740468212,6364103418

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
7411273440,9632831680

ಮ್ಯಾನೇಜರ್ ಬೇಕಾಗಿದ್ದಾರೆ
ಕನ್ನಡ, ಇಂಗ್ಲಿಷ್, ಹಿಂದಿ ಭಾಷೆ ಜ್ಞಾನ ಗೊತ್ತಿರಬೇಕು ಜೊತೆಗೆ ಕಂಪ್ಯೂಟರ್ ಬಗ್ಗೆ ತಿಳಿದಿರಬೇಕು. ಪದವಿ ಮಾಡಿರಬೇಕು. ಸ್ವಂತ ವಾಹನ ಇರಬೇಕು. ಬೆಳವಾಡಿ, ಮೈಸೂರು
9686489917
9844430224

ಬೇಕಾಗಿದ್ದಾರೆ
ನಂಜನಗೂಡಿನ ಏರಿಯಾದ ಇಮ್ಮಾವು ಏರಿಯಾ ಮತ್ತು ಬೇಗೂರು ರಸ್ತೆಯ ತೊಂಡವಾಡಿ ಸಿಂಧುವಳ್ಳಿಪುರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಬಳ: 20,000/-
ವಿದ್ಯಾರ್ಹತೆ: SSLC ಮೇಲ್ಪಟ್ಟು
ESI & PF ಊಟ ತಿಂಡಿ ಸೌಲಭ್ಯ ಇರುತ್ತದೆ.
9620667819
9620777819

ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗುತ್ತಿರುವ ಡ್ರೈವಿಂಗ್‌ಸ್ಕೂಲ್‌ಗೆ ನುರಿತ ಪುರುಷ ಮತ್ತು ಮಹಿಳಾ ಚಾಲಕರು ಬೇಕಾಗಿದ್ದಾರೆ.
(ಆಕರ್ಷಕ ಸಂಬಳ)
9901080314

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ/ವಯಸ್ಸು 29, PUC /ವಯಸ್ಸು 33, SSLC/ವಯಸ್ಸು 40, PUC ಕಲಿತಿರುವ ವಧುವಿಗೆ ಆದಾಯವಿರುವ ವರ ಬೇಕಾಗಿದೆ. ಬ್ರಾಹ್ಮಣ ವಧುವವರಿಗಾಗಿ ಸಂಪರ್ಕಿಸಿ:
9880685177

SITE FOR SALE
(20X30) Dattagalli
(30x40) Kuvempunagar
(40x60) K.C.Layout
S.S. Property Services
(Opp. Kuvempu School)
SS Puram
93421-25252

WANTED
Star Bajaj
(Authorised Dealer for Bajaj Two Wheeler) Vontikoppal-Mysore
1. Service Manager(with Experience in Similar Industry)
2. Trainee Service Manager (Fresher-Preferably BE in Mechanical or Automobile Engg.)
Mail to-vijoysankar@gmail.com
9739549252

DOCUMENTS LOST
I, Lourd Mary, have lost my Original Sale Deed and Connected documents in respect of my Site Situated at Survey No.448 of Kesare Grama registered under Doucment No.106/08-09 on 13-04-1992
Finders may please contact :
9945615139

ಮನೆ ಕಟ್ಟುತ್ತಿದ್ದೀರಾ?
ಹಾಗಾದರೆ ಮನೆಗೆ ಸಿಮೆಂಟ್, ಎಂ.ಸ್ಯಾಂಡ್, ಜೆಲ್ಲಿ, ಕಬ್ಬಿಣ ಏಕೆ? ಈ ಎಲ್ಲಾ ವಸ್ತುಗಳು ಇಲ್ಲದೆಯೇ ಮನೆ ಕಟ್ಟಬಹುದು. ಮನೆ ಕಟ್ಟುವ ಖರ್ಚಿನಲ್ಲಿ 35% ರಿಂದ 45% ಉಳಿತಾಯ ಮಾಡಬಹುದು. ಇದಕ್ಕೆಲ್ಲ ಒಂದೇ ದಾರಿ ಮಣ್ಣು ಮತ್ತು ಸಿಮೆಂಟಿನ ಇಂಟರ್ ಲಾಕ್ ಇಟ್ಟಿಗೆಗಳು. ಕಬ್ಬಿಣದ ಪಿಲ್ಲರ್ ಇಲ್ಲದೆಯೇ ಡ್ಯೂಪ್ಲೆಕ್ಸ್ ಮನೆಯನ್ನು ಈ ಇಟ್ಟಿಗೆಯನ್ನು ಉಪಯೋಗಿಸಿ ಮನೆಯನ್ನು ಕಟ್ಟಬಹುದು.
(ಆರ್.ಸಿ.ಸಿ.ಗೆ ಹೊರತುಪಡಿಸಿ)
ಶ್ರೀ ಭಾಗ್ಯಲಕ್ಷ್ಮೀ ಇಂಟರ್‌ಲಾಕ್ ಇಟ್ಟಿಗೆಗಳು
9964088915

ಬೇಕಾಗಿದ್ದಾರೆ
Event Management 3 ವರ್ಷ ಅನುಭವವುಳ್ಳ Executive: Male or Female ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
9901080314

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರೀಯಲ್ ಏರಿಯಾ ರಾಣಿಮದ್ರಾಸ್ ಕಾರ್ಖಾನೆಗೆ ಹತ್ತಿರವಿರುವ ಕಾರ್ಖಾನೆಗೆ 12 ಗಂಟೆ ಹಗಲು/ರಾತ್ರಿ ಕೆಲಸ ಮಾಡುವ SSLC ಓದಿರುವ ಸೆಕ್ಯೂರಿಟಿ ಅನುಭವವಿರುವ 50 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 15000/–ರೂಗಳು ESI, PF ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ
9731976148

WANTED SITES
@ Dattagalli, Vijayanagara Srirampura, Yelwala Mysore-Bannur- T.N.Pura Road & Mysore surrounding
Quick Regn.
95388-39926

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಶಾಖೆಗಳಲ್ಲಿ ವಯಸ್ಸಾದ ಹಿರಿಯ ನಾಗರೀಕರನ್ನು 24 ಘಂಟೆ ಮನೆಯಲ್ಲೇ ಉಳಿದುಕೊಂಡು ನೋಡಿಕೊಳ್ಳಲು ಹೋಂ ನರ್ಸ್ ಗಳು ಬೇಕಾಗಿದ್ದಾರೆ, ಅನುಭವದ ಅವಶ್ಯಕತೆ ಇರುವುದಿಲ್ಲ ಸಾಯಿ ಸೇವಾ ಟ್ರಸ್ಟ್ ಅಗ್ರಹಾರ
9035113222

ಬೇಕಾಗಿದ್ದಾರೆ
ಭದ್ರತೆ ಸಿಬ್ಬಂದಿಗಳಾಗಿ ಕೆಲಸ ಮಾಡಲು ತುರ್ತಾಗಿ ಬೇಕಾಗಿದ್ದಾರೆ. ಮೈಸೂರಿನ ದೊಡ್ಡಗಡಿಯಾರ, ಇಟ್ಟಿಗೆಗೂಡು ರಾಮಸ್ವಾಮಿ ಸರ್ಕಲ್ ಈ ಭಾಗದ ಪ್ರದೇಶಗಳಲ್ಲಿ ಭದ್ರತೆ ಕೆಲಸಕ್ಕೆ ತುರ್ತಾಗಿ ಬೇಕಾಗಿದ್ದಾರೆ. ಆಕರ್ಷಕ ವೇತನ ESI ಹಾಗೂ PF ಸೌಲಭ್ಯ ಇದೆ. ಸ್ಥಳ: ಭಾರತ ಸೆಕ್ಯೂರಿಟಿ ಅಂಡ್ ಹೌಸ್ ಕೀಪಿಂಗ್ ಸರ್ವಿಸ್ 914/2, T.N ಪುರ ರಸ್ತೆ, ಆಲನಹಳ್ಳಿ, ಬಸ್ ಸ್ಟಾಪ್ ಮುಂಭಾಗ, ಆಲನಹಳ್ಳಿ, ಮೈಸೂರು–28
8861721926

ಬೇಕಾಗಿದ್ದಾರೆ
ಆಫೀಸ್‌ನಲ್ಲಿ ಕೆಲಸ ಮಾಡಲು 30 ರಿಂದ 35 ವರ್ಷ ವಯಸ್ಸುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಸ್ಥಳ: ಅಗ್ರಹಾರ, ಮೈಸೂರು
9731891409

ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ಗೋಪಾಲಗೌಡ ನಗರ ಲಲಿತಾದ್ರಿನಗರ ಹಾಗೂ ಸಪ್ತಮಾತೃಕ ಲೇಔಟ್‌ಗಳಲ್ಲಿ ಸೈಟುಗಳು ಬೇಕಾಗಿವೆ.
20x30, 30x40
9900125239

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂ ನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಜೋಳದ ರೋಟಿ , ಚಪಾತಿ ಮಾಡುವ (2) ಅಸಿಸ್ಟೆಂಟ್ ಕುಕ್ (Assistant Cook) Cutting , Grinding (3) ಕೌಂಟರ್ ಪಾರ್ಸೆಲ್ Counter Parcel (4) Cashier 5) South Cook (ಸೌತ್ ಅಡುಗೆ ಭಟ್ರು) (6) Supplier with ಟೀ ಕಾಫೀ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ:
9019916266

MUDA APPROVED SITE
Sapthamatruka
30x40
20 Lakhs
8884138884

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ.
5 ಕಿ.ಮೀ ವರೆಗೂ ಉಚಿತ ಡೆಲಿವರಿ ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್ಸ್,
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
9845460211
7022293342

ಹೋಂ ನರ್ಸ್ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಬೇಕಾಗಿದ್ದಾರೆ.
12 ಗಂಟೆ ಅಥವಾ 24 ಗಂಟೆ ಸೇವೆ ಮಾಡುವವರು ಸಂಪರ್ಕಿಸಿ
8123252840

ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ
ಚಾಮರಾಜನಗರ ಮುಖ್ಯ ರಸ್ತೆ, ಬದನವಾಳು ಗ್ರಾಮದ ಬಳಿಯಿರುವ ಫಾಸ್ಟ್ ಫುಡ್ ಗಾಡಿಗೆ ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ.
8971991263

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಂಸ್ಥೆಗೆ ಆಫೀಸ್ ಕೆಲಸ ಮಾಡಲು 20 ಯುವತಿಯರು ತಕ್ಷಣ ಬೇಕಾಗಿದ್ದಾರೆ.
ಊಟ, ವಸತಿಯೊಂದಿಗೆ
ಸಂಬಳ 7000/– 15000/–
ಪ್ರಿಯ:
9008357980
9108276593

SITE FOR SALE
40X40 CORNER
Vishwamanava Enclave
Vijaya Nagara 4th Stage
8050821108

ಲಾಡ್ಜ್ ಬಾಡಿಗೆಗಿದೆ
12 ರೂಮ್ಸ್ – ಬೆಡ್, ಚೇರ್ಸ್, ಟೇಬಲ್ ಮತ್ತು ಗೀಸರ್ ಸೌಕರ್ಯಗಳುಳ್ಳ ಲಾಡ್ಜ್ ಹಾಗೂ 3 ಮಳಿಗೆ (ಪ್ರತಿ ಮಳಿಗೆ: 300 sq ft) ಮತ್ತು ಹಾಲ್ (900 sq ft) ಬಾಡಿಗೆಗಿದೆ. ರಿಂಗ್ ರೋಡ್, ಆನಂದನಗರ, ಬೋಗಾದಿ, ಮೈಸೂರು.
9741881037

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಎಗರಾಡುವುದನ್ನು ಬಿಟ್ಟು ಜನರ ಸೇವೆ ಮಾಡಿ

ಉಸ್ತುವಾರಿ ಸಚಿವ ಚಲುವರಾಯಸ್ವಾಮಿಗೆ ಮಾಜಿ ಸಚಿವ ಪುಟ್ಟರಾಜು ಸಲಹೆ

ಮಂಡ್ಯ,ಜು.17– ಜಿಲ್ಲಾ ಉಸ್ತುವಾರಿ ಮಂತ್ರಿ ಎನಿಸಿಕೊಂಡಿರುವ ಚಲುವರಾಯಸ್ವಾಮಿ ಬಹುಶಃ ತಮ್ಮನ್ನು ಮೇಲುಕೋಟೆ ಚಲುವನಾರಾಯಣಸ್ವಾಮಿ ಅಂದುಕೊಂಡಿದ್ದು, ಬರೀ ಕೂಗಾಡುವುದು, ಎಗರಾಡುವುದನ್ನು ಬಿಟ್ಟು ಜಿಲ್ಲಾ ಉಸ್ತುವಾರಿ ಸಚಿವ ಹುದ್ದೆಯ ಮಹತ್ವವನ್ನೇ ತಿಳಿದುಕೊಂಡಿಲ್ಲ. ಅವರು ಎಗರಾಡುವುದನ್ನು ಬಿಟ್ಟು ಜನರ ಸೇವೆ ಮಾಡಿ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಕಿಡಿಕಾರಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಂಡ್ಯ ಜಿಲ್ಲೆಯ ಸಮಸ್ಯೆ, ಕಾವೇರಿ ಸಮಸ್ಯೆ ಬಂದಾಗ ಧ್ವನಿ ಎತ್ತುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಈಗಾಗಲೇ ಕೆಆರ್‌ಎಸ್ ಡ್ಯಾಂ ನೀರು ಇದ್ದರೂ ರೈತರಿಗೆ ನೀರು ಕೊಡದೆ ರಾಜಕಾರಣ ಮಾಡುತ್ತಿರುವ ರಾಜ್ಯ ಸರ್ಕಾರ, ಈಗ ಮಳೆ ಆರಂಭವಾಗಿದೆ. ತಮಿಳುನಾಡಿಗೆ ನೀರು



ಹರಿಸುವ ವಿಚಾರವಾಗಿ ಎಚ್ಚರಿಕೆ ವಹಿಸದೇ ರೈತರ ಬದುಕಿನ ಬಗ್ಗೆ ಗಮನವಿಟ್ಟುಕೊಳ್ಳದೇ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಸರ್ಕಾರ ಮತ್ತು ಸಚಿವ ಚಲುವರಾಯಸ್ವಾಮಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಂಡ್ಯ ಜಿಲ್ಲೆಗೆ ನೀವು ಮಾಡಿರುವ ಅನ್ಯಾಯದಲ್ಲಿ ಜನ ನಿಮ್ಮನ್ನು ಓಡಾಡಲು ಬಿಟ್ಟಿರುವುದೇ ಹೆಚ್ಚು. ನನ್ನನ್ನ "ಅವನ್ಯಾರೀ ಪುಟ್ಟರಾಜು" ಎಂದು ಚಲುವರಾಯಸ್ವಾಮಿ ಸಂಬೋಧಿಸಿದ್ದಾರೆ. ಅವರು ಸ್ವಲ್ಪ ಹಿಂದಿರುಗಿ ನೋಡಬೇಕು. ಜಿಲ್ಲಾ ಪಂಚಾಯಿತಿ ಸದಸ್ಯ ಆಗುವಾಗಲಿಂದಲೂ ನಿಮ್ಮನ್ನ ಉಪಾಧ್ಯಕ್ಷನ್ನಾಗಿ ಮಾಡುವಾಗಲೂ ಜೊತೆಗೆ ಇದ್ದವನು ನಾನು. ನಿಮ್ಮ ತರಹ ನಾನು 3 ಸಲ ಎಂಎಲ್‌ಎ, ಎಂಪಿ, ಜಿಲ್ಲಾ ಉಸ್ತುವಾರಿ ಎಲ್ಲಾ ಹುದ್ದೆಯನ್ನು ನೋಡಿದ್ದೇನೆ. ಸ್ವಂತ ದುಡಿಮೆಯಿಂದ ಬದುಕು ಕಟ್ಟಿದ್ದೇನೆ. ಜನಸೇವೆ ಮಾಡಲು ಬಂದಿರುವ ರಾಜಕಾರಣಿ ನಾನು ಎಂದು ಹೇಳಿದ್ದಾರೆ.

ನಿಮ್ಮ ತರ ನಂಬಿಸಿ ಕತ್ತು ಕುಯ್ಯುವವನಲ್ಲ ನಾನು. ಮಿತ್ರ ದ್ರೋಹ, ಮೈತ್ರಿ ಧರ್ಮ ದ್ರೋಹ ನನಗೆ ಗೊತ್ತಿಲ್ಲ. ಗಣಿಗ ರವಿಗೆ ಉತ್ತರ ಕೊಡು ಸಾಕು ಅಂತ ನನಗೆ ಹೇಳಿದ್ದೀರಿ. ಅವರೇನು ಶಾಸಕರು ಅಲ್ವಾ ಅವರಿಗೆ ಗೌರವ ಇಲ್ವ. ನಿಮ್ಮಂತೆಯೇ ಅವರೂ ಸಹ ಶಾಸಕರು. ನೀವು ಮಂತ್ರಿ ಅಷ್ಟೆ, ದುರಹಂಕಾರ ಒಳ್ಳೆದಲ್ಲ ಎಂದು ಕಿಡಿಕಾರಿದ್ದಾರೆ.

ಎಗರಾಡುವುದನ್ನ ಬಿಟ್ಟು ಜಿಲ್ಲೆಯ ಜನರ ಸೇವೆ ಮಾಡಿ. ಕೇಂದ್ರದ ಮಂತ್ರಿಗಳ ಜನ ಸಂಪರ್ಕ ಸಭೆಗೆ ಅಧಿಕಾರಿಗಳು ಹೋಗುವುದು ಬೇಡ ಎಂದು ಆದೇಶ ಹೊರಡಿಸುತ್ತೀರಿ. ಕಾವೇರಿ ಸಮಸ್ಯೆ ಬಂದಾಗ 'ಕುಮಾರಣ್ಣ ಬಾ' ಅಂತ ಮನವಿ ಮಾಡುತ್ತೀರಿ. ಒಕ್ಕೂಟದ ವ್ಯವಸ್ಥೆಯಲ್ಲಿ ಕೆಲಸ ಮಾಡುವುದನ್ನೆ ಕಲಿಯಿರಿ. ಸಂವಿಧಾನ ಪುಸ್ತಕ ಹಿಡಿದುಕೊಂಡು ಓಡಾಡಿದರೆ ಆಗುವುದಿಲ್ಲ. ಸಂವಿಧಾನ ಓದಿ ಒಕ್ಕೂಟದ ವ್ಯವಸ್ಥೆ ಅಂದರೆ ಏನು ಅಂತ ತಿಳಿದುಕೊಳ್ಳಿ ಎಂದು ಸಲಹೆ ನೀಡಿದ್ದಾರೆ.

ಕುಮಾರಸ್ವಾಮಿರವರು ಮಂತ್ರಿಯಾಗಿ ಕೇವಲ 1 ತಿಂಗಳು ಆಗಿದೆ. ನಿಮ್ಮ ಕೆಲಸ ನೀವು ಮಾಡಿ. ಜಿಲ್ಲೆಯ ಸಮಸ್ಯೆ ಬಗ್ಗೆ ಅವರಿಗೆ ಗೊತ್ತಿದೆ. ಅವರ ಕೆಲಸ ಅವರು ಮಾಡುತ್ತಾರೆ. ಈಗಾಗಲೇ ನಿಮಗೆ ಜಿಲ್ಲೆಯ ಪ್ರಜ್ಞಾವಂತ ಜನರೇ ಬುದ್ಧಿ ಕಲಿಸಿದ್ದಾರೆ. ಇನ್ನಾದರೂ ಸ್ವಲ್ಪ ಜಿಲ್ಲೆಯ ಸಮಸ್ಯೆಗಳ ಮಧ್ಯೆ ನಿಂತು ಮಾತನಾಡಿ. ಬೇರೆ ನಾಯಕರುಗಳ ಬಗ್ಗೆ ಮಾತನಾಡುವಾಗ ಸ್ವಲ್ಪ ಗೌರವವಿರಲಿ. ನನಗೂ ಏಕವಚನ, ಬಹುವಚನ ನಿಮಗಿಂತ ಚೆನ್ನಾಗಿ ಬರುತ್ತೆ ಎಂದು ತಿಳಿಸಿದ್ದಾರೆ.

ದೊಡ್ಡಕ್ಯಾತನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಚುನಾವಣೆ

ಜೆಡಿಎಸ್ ಬೆಂಬಲಿತ 10 ನಿರ್ದೇಶಕರ ಭರ್ಜರಿ ಗೆಲುವು



ದೊಡ್ಡಕ್ಯಾತನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಆಯ್ಕೆಯಾದ ಜೆಡಿಎಸ್ ಬೆಂಬಲಿತ ನಿರ್ದೇಶಕರು.

ಕೆಆರ್.ಪೇಟೆ,ಜು.17– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ದೊಡ್ಡಕ್ಯಾತನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ 11 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 10 ಮಂದಿ ಜೆಡಿಎಸ್ ಬೆಂಬಲಿತ ನಿರ್ದೇಶಕರು ಗೆಲುವು ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದ ರೇಣುಕಾ ದಶರಥ, ಅಮ್ಮಯಮ್ಮ ನಾಗರಾಜು, ಆಶಾ ಕುಚೇಲ ಕುಮಾರ್, ನೀತಾ ಮಂಜೇಶ್, ಪದ್ಮಮ್ಮ ರಂಗೇಗೌಡ, ಕುಮಾರಿ ದೇವರಾಜು, ಜಯಲಕ್ಷ್ಮಿ ಮಹಾದೇವರಾಜು, ಜಯಲಕ್ಷ್ಮಿ ಪರಮೇಶ್, ಶಶಿಕಲಾಕುಮಾರ್, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಗೌರಮ್ಮ ರಾಮಯ್ಯ ಅವರು ಅತ್ಯಧಿಕ ಮತಗಳಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿಯಾಗಿ ಪಾಂಡವಪುರ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯ ಸಹಕಾರ ಅಧಿಕಾರಿ ಹೇಮಾ ಕಾರ್ಯ ನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ರಮ್ಯ ಕಾರ್ಯನಿರ್ವಹಣೆ ಮಾಡಿದರು.

ಇದೇ ಸಂದರ್ಭದಲ್ಲಿ ನೂತನ ನಿರ್ದೇಶಕರುಗಳನ್ನು ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ.ಲೋಕೇಶ್, ಸಂತೇ ಬಾಚಹಳ್ಳಿ ಹೋಬಳಿ ಘಟಕದ ಜೆಡಿಎಸ್ ಅಧ್ಯಕ್ಷ ಸಾಮಿಲ್ ರವಿಕುಮಾರ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ಮುಖಂಡರಾದ ಉದಯ ಕುಮಾರ್, ಗ್ರಾಪಂ. ಮಾಜಿ ಸದಸ್ಯ ಪುಟ್ಟ ರಾಜು, ದಶರಥ, ನಾಗರಾಜು, ಕುಚೇಲ ಕುಮಾರ್, ಮಂಜೇಶ್, ರಂಗೇಗೌಡ, ದೇವರಾಜು, ರಮೇಶ್, ಯೋಗೇಶ್, ಡಿ.ಎನ್. ಕುಮಾರ್, ಡಿ.ಎಸ್.ಕುಮಾರ್, ಪ್ರಮೋದ್, ಜಗದೀಶ್, ಶಶಿಧರ್, ಅಶೋಕ್, ಯೋಗಣ್ಣ ಅಶೋಕ್, ಸತೀಶ್, ನಾಗರಾಜು ಸೇರಿದಂತೆ ಹಲವು ಮುಖಂಡರು ಅಭಿನಂದಿಸಿದರು.

ವೀರಶೈವ ಮಹಾಸಭಾ ಚುನಾವಣೆ: ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಮತ ಯಾಚನೆ



ಚಿನಕುರಳಿ: ವೀರಶೈವ ಲಿಂಗಾಯಿತ ಸಮಾಜದ ಅಭಿವೃದ್ಧಿ ಮತ್ತು ತಾಲೂಕಿನ ಆಯಾಕಟ್ಟಿನ ಸ್ಥಳಗಳಲ್ಲಿ ಬಸವಣ್ಣನ ಪ್ರತಿಮೆ ಸ್ಥಾಪನೆ ಹಾಗೂ ಬಸವ ಭವನ ನಿರ್ಮಾಣಕ್ಕಾಗಿ ತಮ್ಮನ್ನು ಬೆಂಬಲಿಸುವಂತೆ ತಾಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕಾಳೇಗೌಡನ ಕೊಪ್ಪಲು ಶಿವಕುಮಾರ್ ಮನವಿ ಮಾಡಿದರು.

ಇಲ್ಲಿಗೆ ಸಮೀಪದ ಬೇಬಿ ಗ್ರಾಮದಲ್ಲಿ ಮಂಗಳವಾರ ತಮ್ಮ ತಂಡದ ಸದಸ್ಯರ ಪರವಾಗಿ ಮತ ಯಾಚನೆ ನಡೆಸಿದ ಬಳಿಕ ಅವರು ಮಾತನಾಡಿದರು. ವೀರಶೈವ ಲಿಂಗಾಯಿತ ಸಮಾಜ ಮೇಲ್ನೋಟಕ್ಕೆ ಮುಂದುವರೆದ ಜನಾಂಗವಾಗಿ ಕಾಣಿಸುತ್ತದೆ. ಆದರೆ ಸಮಾಜ ಈಗಲೂ ಕೂಡ ತುಂಬಾ ಹಿಂದುಳಿದಿದೆ. ಸಮಾಜದ ಆರ್ಥಿಕ, ಶೈಕ್ಷಣಿಕ ಪ್ರಗತಿಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಮಾಜ ನಮ್ಮನ್ನು ಬೆಂಬಲಿಸಿದರೆ ಅಗತ್ಯವಿರುವ ಎಲ್ಲಾ ಸೌಕರ್ಯಗಳಿಗಾಗಿ ನಿರಂತರ ಹೋರಾಟ ಮಾಡಲಾಗುವುದು ಎಂದರು.

ಗಾಯಿತ್ರಿ ನಿಧನ

ಕೆಆರ್.ಪೇಟೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಗಿಡದ ಬೊಪ್ಪನಹಳ್ಳಿ ಗ್ರಾಮದ



ಅಂಗನವಾಡಿ ಶಿಕ್ಷಕಿ ಗಾಯಿತ್ರಿ(50)ಅವರು ಬುಧವಾರ ರಾತ್ರಿ ನಿಧನ ಹೊಂದಿದರು. ಮೃತರು ಪತಿ ಆನಂದಸ್ವಾಮಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಜುಲೈ 18ರಂದು ಸ್ವಗ್ರಾಮ ಗಿಡದಬೊಪ್ಪನಹಳ್ಳಿ ಗ್ರಾಮದಲ್ಲಿ ಬೆಳಿಗ್ಗೆ 11.30ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಅಖಿಲ ಭಾರತ ವೀರಶೈವ ಮಹಾಸಭಾ ಚುನಾವಣೆ

ಆನಂದ್, ಧನಂಜಯ್ ಕುಮಾರ್ ಭರ್ಜರಿ ಪ್ರಚಾರ



ಅಭ್ಯರ್ಥಿಗಳು ತಾಲೂಕಿನ ಅಂಚನಹಳ್ಳಿ ಗ್ರಾಮದಲ್ಲಿ ಬಿರುಸಿನ ಮತ ಪ್ರಚಾರ ನಡೆಸಿದರು.

ಕೆ.ಆರ್.ಪೇಟೆ,ಜು.17–ಅಖಿಲ ಭಾರತ ವೀರಶೈವ ಮಹಾಸಭಾ ಮಂಡ್ಯ ಜಿಲ್ಲಾ ಘಟಕಕ್ಕೆ ಸ್ಪರ್ಧೆ ಮಾಡಿರುವ ಎಸ್.ಆನಂದ್ ತಾಳಶಾಸನ ಮತ್ತು ಕೆ.ಆರ್.ಪೇಟೆ ತಾಲೂಕು ಘಟಕಕ್ಕೆ ಸ್ಪರ್ಧೆ ಮಾಡಿರುವ ವಿ.ಎಸ್. ಧನಂಜಯ್‌ಕುಮಾರ್ ಅವರ ತಂಡಕ್ಕೆ ಭರ್ಜರಿ ಗೆಲುವು ತಂದು ಕೊಡಬೇಕು ಎಂದು ಎಸ್.ಆನಂದ್ ಮತ್ತು ವಿ.ಎಸ್.ಧನಂಜಯಕುಮಾರ್ ಅವರು ಜಿಲ್ಲೆಯ ವೀರಶೈವ–ಲಿಂಗಾಯಿತ ಮತದಾರ ಬಂಧುಗಳಲ್ಲಿ ಮನವಿ ಮಾಡಿದರು.

ತಾಲೂಕಿನ ಮೋದೂರು, ಚೋಕನಹಳ್ಳಿ, ನಾಡಬೋಗನಹಳ್ಳಿ, ಅಂಚನಹಳ್ಳಿ, ಬೊಮ್ಮಲಾಪುರ, ಅಗಸರಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಜಿಲ್ಲಾ ಘಟಕಕ್ಕೆ ಹಾಗೂ ತಾಲೂಕು ಘಟಕಕ್ಕೆ ಸ್ಪರ್ಧೆ ಮಾಡಿರುವ ಅಭ್ಯರ್ಥಿಗಳು ಹಾಗೂ ಮುಖಂಡರೊಂದಿಗೆ ಬಿರುಸಿನ ಮತಯಾಚನೆ ಮಾಡಿ ಮಾತನಾಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿ ಎಸ್.ಆನಂದ್ ತಾಳಶಾಸನ ಅವರು ಜಿಲ್ಲಾ ಎಲ್ಲಾ ತಾಲೂಕುಗಳಲ್ಲಿ ಎಸ್.ಆನಂದ್ ಆದ ನನಗೆ ಮತ್ತು ನನ್ನ ತಂಡಕ್ಕೆ ಉತ್ತಮ ಪ್ರತಿಕ್ರಿಯೆ ಕಂಡು ಬರುತ್ತಿದೆ. ಅದೇ ರೀತಿ ಕೆ.ಆರ್.ಪೇಟೆ ತಾಲೂಕು ಘಟಕಕ್ಕೆ ಸ್ಪರ್ಧೆ ಮಾಡಿರುವ ಲಾಯರ್ ಧನಂಜಯಕುಮಾರ್ ಅವರು 5ವರ್ಷಗಳ ಕಾಲ ಅಧ್ಯಕ್ಷರಾಗಿ ವೀರಶೈವ ಸಮುದಾಯದ ಬಂಧುಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಇದರಿಂದಾಗಿ ಎರಡನೇ ಭಾರಿಗೆ ಗೆಲ್ಲುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ತಾಲೂಕು ಘಟಕದ ಅಭ್ಯರ್ಥಿ ವಿ.ಎಸ್. ಧನಂಜಯಕುಮಾರ್ ಮಾತನಾಡಿ ಮಂಡ್ಯ ಜಿಲ್ಲಾ ಘಟಕಕ್ಕೆ ಸ್ಪರ್ಧೆ ಮಾಡಿರುವ ಎಸ್. ಆನಂದ್.ತಾಳಶಾಸನ ಅವರಿಗೆ ಹಾಗೂ ಅವರೊಂದಿಗೆ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧೆ ಮಾಡಿರುವ ಯಗಚಗುಪ್ಪೆ ಎಲ್ಐಸಿ ಶಿವಪ್ಪ, ನಾಡಬೋಗನಹಳ್ಳಿ ದಿನೇಶ್, ಸಾಸಲು ಇಂದ್ರಮ್ಮ, ಸೋಮನಾಥಪುರ ಚಂದ್ರಶೇಖರ್, ಕಟ್ಟಹಳ್ಳಿ ಗಂಗಾಧರ್ ಸೇರಿದಂತೆ 25 ಮಂದಿ ಅಭ್ಯರ್ಥಿಗಳಿಗೆ ಹಾಗೂ ಕೆ.ಆರ್.ಪೇಟೆ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ವಿ.ಎಸ್.ಧನಂಜಯ್ ಕುಮಾರ್ ಆದ ನನಗೆ ಹಾಗೂ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸಿರುವ ನನ್ನ ತಂಡದ 20 ಅಭ್ಯರ್ಥಿಗಳಿಗೆ ಇದೇ ಜುಲೈ 21ರಂದು ನಡೆಯುವ ಚುನಾವಣೆಯಲ್ಲಿ ತಾಲೂಕಿನ ವೀರಶೈವ ಲಿಂಗಾಯಿತ ಸಮಾಜದ ಬಂಧುಗಳು ತಮ್ಮ ಅಮೂಲ್ಯವಾದ ಮತವನ್ನು ನೀಡುವ ಮೂಲಕ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹದೇಶ್, ಗಿರೀಶ್, ಡಿಶ್‌ಗುಂಡ, ಕಲ್ಪನಾ ಮಹದೇವಸ್ವಾಮಿ, ಈರಣ್ಣ ಸೇರಿದಂತೆ ಮೋದೂರು, ಚೋಕನಹಳ್ಳಿ, ನಾಡಬೋಗನಹಳ್ಳಿ, ಅಂಚನಹಳ್ಳಿ, ಬೊಮ್ಮಲಾಪುರ, ಅಗಸರಹಳ್ಳಿ ಗ್ರಾಮಗಳ ಸ್ಥಳೀಯ ವೀರಶೈವ ಸಮುದಾಯದ ಮುಖಂಡರು ಹಾಗೂ ಜಿಲ್ಲಾ ಘಟಕ ಮತ್ತು ತಾಲ್ಲೂಕು ಘಟಕಕ್ಕೆ ಸ್ಪರ್ಧೆ ಮಾಡಿರುವ ಅಭ್ಯರ್ಥಿಗಳು ಉಪಸ್ಥಿತರಿದ್ದರು.

ಸುಧಾರಿತ ಕಬ್ಬು ಬೆಳೆದು ಕಾರ್ಖಾನೆ ಅಭಿವೃದ್ಧಿಪಡಿಸಿ

ಕೋರಮಂಡಲ್ ಸಕ್ಕರೆ ಕಾರ್ಖಾನೆಯಲ್ಲಿ ಕೇನ್ ಟ್ರೇಲರ್‌ಗೆ ಅಗ್ರಪೂಜೆ



ಕಿಕ್ಕೇರಿ, ಜು.17– ಸಮೀಪದ ಕೋರಮಂಡಲ್ ಸಕ್ಕರೆ ಕಾರ್ಖಾನೆಯ ಪ್ರಸಕ್ತ ಸಾಲಿನ ಕಬ್ಬು ನುರಿಯುವಿಕೆಗೆ ಶುಭ ದಿನವಾಗಿ ಬುಧವಾರ ಶೃಂಗೇರಿ ಶಾರದಾ ಪೀಠದ ವಿದ್ಯಾಶಂಕರ ಶರ್ಮ ನೇತೃತ್ವದಲ್ಲಿ ದುರ್ಗಾ ಹೋಮ, ಗಣಹೋಮ ನಡೆಸಿ ಕಾರ್ಖಾನೆ ಹಿರಿಯ ಉಪಾಧ್ಯಕ್ಷ ವಿ.ಜೆ.ರವಿ ದಂಪತಿ ಕೇನ್ ಟ್ರೇಲರ್‌ಗೆ ಅಗ್ರಪೂಜೆ ಸಲ್ಲಿಸಿದರು.

ಕಾರ್ಖಾನೆ ಹಿರಿಯ ಉಪಾಧ್ಯಕ್ಷ ವಿ.ಜೆ. ರವಿ ಮಾತನಾಡಿ, ಶುಭದಿನವಾದ ಇಂದು ಕೇನ್ ಟೇಲರ್‌ಗೆ ಪೂಜೆ ಸಲ್ಲಿಸಲಾಗಿದೆ. ಕಳೆದ ವಾರ ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡಲಾಗಿದ್ದು, ಜು.31ರ ನಂತರ ವಿಧ್ಯುಕ್ತವಾಗಿ ಕಬ್ಬು ಅರೆಯಲು ಸಕಲ ಸಿದ್ಧತೆ ಮಾಡಿಕೊಂಡಿದೆ. 5ಕೋಟಿ ರೂ. ಮುಂಗಡವಾಗಿ 250 ಟನ್ ಕಬ್ಬು ಕಟಾವು ಕಾರ್ಮಿಕ ತಂಡಕ್ಕೆ ನೀಡಿದ್ದು, ಜು.27ರ ನಂತರ ಕರೆತರಲಾಗುವುದು. ಪ್ರಸಕ್ತವಾಗಿ 8ಲಕ್ಷ ಟನ್ ಕಬ್ಬು ಅರೆಯುವ ಗುರಿ ಇದೆ. ಕೇವಲ 4.5ಲಕ್ಷ ಟನ್ ಕಬ್ಬು ಮಾತ್ರ ಲಭ್ಯವಿದೆ. ಕಬ್ಬಿನ ಕೊರತೆ ನೀಗಿಸಲು ಮತ್ತಷ್ಟು ರೈತರು ಕಬ್ಬು ಬೆಳೆ ಬೆಳೆಯುವ ಜತೆಗೆ ಇರುವಷ್ಟು ಪ್ರದೇಶದಲ್ಲಿ ಹೆಚ್ಚು ಕಬ್ಬಿನ ಇಳುವರಿ ಪಡೆಯಲು ಉತ್ತಮ ತಳಿಯ ಬಿತ್ತನೆ ಬೀಜದೊಂದಿಗೆ ಸುಧಾರಿತ ವೈಜ್ಞಾನಿಕ ಪದ್ಧತಿ ಬೇಸಾಯಕ್ಕೆ ಮುಂದಾಗಿ. ಕಾರ್ಖಾನೆ ಸಿಓ517ಬೀಜ ನೀಡುತ್ತಿದೆ ಎಂದರು.

ಕಬ್ಬು ವಿಭಾಗದ ಹಿರಿಯ ವ್ಯವಸ್ಥಾಪಕ ಕೆ.ಬಾಬುರಾಜ್ ಮಾತನಾಡಿ, ಶುಂಠಿ ಬೇಸಾಯದಂತೆ ಕಬ್ಬು ಬೆಳೆಯಿರಿ. ತಾಲೂಕಿನ 106 ಕೇಂದ್ರಗಳಲ್ಲಿ ವೈಜ್ಞಾನಿಕ, ಹನಿನೀರಾವರಿ ಪದ್ಧತಿಯಲ್ಲಿ ಬೇಸಾಯ ಮಾಡಲು ಕಬ್ಬಿನ ತಾಕು ನಿರ್ಮಿಸಿದೆ. ರೈತರಿಗೆ ಅನುಕೂಲವಾಗಲು 5 ಆಧುನಿಕ ಸುಧಾರಿತ ತಳಿಗಾಗಿ ವಿವಿಧ ಕೃಷಿ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಕಾರ್ಖಾನೆ ನಿಗದಿಪಡಿಸುವ ದರದಂತೆ ಕಬ್ಬು ಕಟಾವುದಾರರಿಗೆ ಹಣ ನೀಡಿ. ಹೆಚ್ಚು ಹಣ ನೀಡಿದರೆ ಉಳಿಕೆ ರೈತರಿಗೆ ತೊಂದರೆಯಾಗಲಿದೆ ಎಂದು ಹೇಳಿದರು.

ಕಾನೂನು ಸಲಹೆಗಾರ ವಕೀಲ ರವಿಶಂಕರ್, ಕಾರ್ಖಾನೆಯ ಅಧಿಕಾರಿಗಳಾದ ಪಿ.ಎಸ್. ಮೇಯನ್, ಕೆಬಾಬುರಾಜ್, ಅಶೋಕ್ ಕುಮಾರ್, ಕೆ.ಜಿ.ಮೋಹನ್, ಆರ್.ಇ.ಕುಮಾರ್, ನವೀನ್, ರವಿಚಂದ್ರ್, ರೈತ ಮುಖಂಡರಾದ ಕುಮಾರ್, ಕಾಯಿ ಮಂಜೇಗೌಡ, ವಡಕಹಳ್ಳಿ ಮಂಜೇಗೌಡ, ರಾಮೇಗೌಡ, ಕೃಷ್ಣೇಗೌಡ, ಕಬ್ಬು ಬೆಳೆಗಾರ ಸಂಘ ಸದಸ್ಯರು, ಲಾರಿ, ಟ್ರಾಕ್ಟರ್ ಮಾಲೀಕ ಸಂಘ, ಕಾರ್ಮಿಕ ಸಿಬ್ಬಂದಿ ಇದ್ದರು.

ಒಂದನೇ ಪುಟದಿಂದ

ರಾಜಕೀಯಕ್ಕೆ ಗುಡ್‌ಬೈ

ಮಾತನಾಡುವ ಮೂಲಕ ಜಿಲ್ಲೆಯ ಜನರಿಗೆ ಅಗೌರವವನ್ನು ತಂದಿದ್ದಾರೆ. ಜೊತೆಗೆ ಗೋಡಂಬಿ, ದ್ರಾಕ್ಷಿ ತಿನ್ನಲು ಸಭೆಗೆ ಹೋಗಬೇಕಿತ್ತಾ ಎಂದು ಲಘುವಾಗಿ ಮಾತನಾಡಿರುವುದು ಸಭ್ಯತೆಯಲ್ಲ ಎಂದು ಕಿಡಿಕಾರಿದರು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ಇವರೂ ಕೂಡ ಸರ್ವಪಕ್ಷ ಸಭೆ ಕರೆದಿದ್ದರು. ಆ ಸಮಯದಲ್ಲಿ ಯಾರೂ ಕೂಡ ಈ ರೀತಿಯ ವರ್ತನೆ ಮತ್ತು ಬೇಜವಾಬ್ದಾರಿತನದ ಹೇಳಿಕೆಯನ್ನು ನೀಡಿರಲಿಲ್ಲ. ಜಿಲ್ಲೆಯ ಸಂಸದರಾಗಿರುವ ಅವರಿಗೆ ಅವರ ಜವಾಬ್ದಾರಿಯನ್ನು ನೆನಪಿಸುವ ಪ್ರಯತ್ನ ಮಾಡುತ್ತಿದ್ದೇವೆ. ಕಾವೇರಿ ಸಮಸ್ಯೆಗೆ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿರುವ ಅವರು, ಸರ್ವಪಕ್ಷ ಸಭೆಯಲ್ಲಿ ಪಾಲ್ಗೊಂಡು ಸಲಹೆ–ಸೂಚನೆಗಳನ್ನು ನೀಡುವುದರೊಂದಿಗೆ ಕೇಂದ್ರದ ಮಟ್ಟದಲ್ಲಿ ನೀರಿನ ಸಮಸ್ಯೆ ವಿಚಾರದಲ್ಲಿ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರೆ, ಸಮಸ್ಯೆ ಬಗ್ಗೆ ಇವರಿಗೆ ಇರುವ ಆಸಕ್ತಿಯನ್ನು ತೋರ್ಪಡಿಸುತ್ತಿತ್ತು ಎಂದು ತಿಳಿಸಿದರು.

ಸಂಸದರಾಗಿ ಒಂದೇ ತಿಂಗಳಲ್ಲಿ ಸಮಸ್ಯೆ ಬಗೆಹರಿಸಬೇಕೆಂದು ನಾವ್ಯಾರೂ ಒತ್ತಾಯಿಸಿಲ್ಲ. ಸರ್ವಪಕ್ಷ ಸಭೆಗೆ ಬಂದು ತಮ್ಮ ಜವಾಬ್ದಾರಿಯನ್ನು ಪ್ರದರ್ಶಿಸಬೇಕೆಂಬುದಷ್ಟೇ ನಮ್ಮ ಕಳಕಳಿಯಾಗಿತ್ತು. ಅದನ್ನು ಬಿಟ್ಟು ಒಂದು ಗಂಭೀರ ವಿಷಯದ ಬಗ್ಗೆ ಉದ್ಧಟತನದ ಮಾತುಗಳನ್ನಾಡುವುದು ಮುಖ್ಯಮಂತ್ರಿಯಾದವರಿಗೆ ಶೋಭೆ ತರುವುದಿಲ್ಲ ಎಂದು ಕುಟುಕಿದರು.

ಬಾಡೂಟವೇ ಮುಖ್ಯವಾಗಿತ್ತು: ಅಭಿನಂದನಾ ಸಮಾರಂಭ, ಬಾಡೂಟ ಇನ್ನೊಂದು ದಿನ ಮಾಡುವುದಕ್ಕೂ ಅವಕಾಶವಿತ್ತು. ಸರ್ವಪಕ್ಷ ಸಭೆ ಯಾವಾಗಲೂ ನಡೆಯುವುದಿಲ್ಲ. ಮಾಜಿ ಮುಖ್ಯಮಂತ್ರಿ ಸದಾನಂದಗೌಡರಂತಹ ಹಿರಿಯ ನಾಯಕರು ಸಭೆಗೆ ಆಗಮಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದರು. ರಾಜಕೀಯವಾಗಿ ಆ ಪ್ರಬುದ್ಧತೆಯನ್ನು ಪ್ರದರ್ಶಿಸಬೇಕಿತ್ತು. ನನ್ನಿಂದ ಈ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ. ರಾಜಕೀಯ ಕಾರಣದಿಂದ ಆ ಮಾತನ್ನು ಹೇಳಬೇಕಾಯಿತು ಎಂದು ಹೇಳಿ ಬಿಡಲಿ. ಮುಂದೆ ಯಾವತ್ತೂ ಕೂಡ ಅವರನ್ನು ಈ ವಿಚಾರವಾಗಿ ಪ್ರಶ್ನಿಸುವುದೇ ಇಲ್ಲ. ನಮ್ಮ ಪಾಡಿಗೆ ನಾವು ಅಭಿವೃದ್ಧಿ ಕೆಲಸ ಮಾಡಿಕೊಂಡು ಹೋಗುತ್ತೇವೆ. ಸಂಸದರಾಗಿ ಅವರ ಜವಾಬ್ದಾರಿ ನಿರ್ವಹಿಸಲಿ ಎಂದು ಹೇಳಿದರು. ಕುಮಾರಸ್ವಾಮಿ ಅವರು ಮೊದಲು ತಮ್ಮ ಹಿಂಬಾಲಕರ ಬಾಯಿಯನ್ನು ಮುಚ್ಚಲಿ. ಅವರಿಂದಲೇ ಹಾಳಾಗುತ್ತಿದ್ದಾರೆ. ಸ್ವಂತ ವಿವೇಚನೆಯಿಂದ ಕಾರ್ಯನಿರ್ವಹಿಸುವುದು ಅವರ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು ಎಂದು ಸಲಹೆ ನೀಡಿದರು.

ಐದು ತಾಸು ಗಸ್ತು ತಿರುಗಿ

ಕ್ಲಬ್‌ಗಳು, ಜೂಜು, ಮಟ್ಕಾ ಸೇರಿದಂತೆ ಎಲ್ಲ ಸಂಘಟಿತ ಅಪರಾಧಗಳನ್ನು ತಕ್ಷಣವೇ ನಿಲ್ಲಿಸಬೇಕು. ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶಿಸಿದ್ದಾರೆ.

ಡ್ರಗ್ಸ್ ಹಾಗೂ ಮಾದಕ ದ್ರವ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಶಾಲಾ–ಕಾಲೇಜುಗಳಿಗೆ ಭೇಟಿ ನೀಡಬೇಕು. ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ 'ಇ–ಬೀಟ್' ಅಪ್ಲಿಕೇಶನ್ ಸಂಪೂರ್ಣ ನಿರ್ವಹಣೆ ಅರಿತಿರಬೇಕು. ಇ–ಬೀಟ್ ಸೇವೆ ಅನುಷ್ಠಾನಕ್ಕೆ ತರಬೇಕು ಎಂದು ಸೂಚಿಸಿದ್ದಾರೆ.

ಹೆದ್ದಾರಿಗಳಲ್ಲಿ ಗಸ್ತು ತಿರುಗುವ ವಾಹನಗಳ ಸಂಖ್ಯೆ ಹೆಚ್ಚಿಸಬೇಕು. ಸಾಮಾಜಿಕ ಮಾಧ್ಯಮದಲ್ಲಿ ನಕಲಿ ಸುದ್ದಿಗಳ ವಿರುದ್ಧ ಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅಗತ್ಯವಿದ್ದರೆ ಸ್ವಯಂ ಪ್ರೇರಿತ ದೂರು ದಾಖಲಿಸಬೇಕು. ಜಿಲ್ಲಾ ಹಾಗೂ ನಗರಮಟ್ಟದ ಪೊಲೀಸ್ ಠಾಣೆಗಳಲ್ಲಿ ನಿಯಮಿತವಾಗಿ ಶಾಂತಿಸಭೆ ಹಾಗೂ ಜನಸ್ಪಂದನಾ ಸಭೆ ಆಯೋಜಿಸಬೇಕು. ಎಲ್ಲ ಸಮುದಾಯದ ಜತೆಗೆ ಉತ್ತಮ ಬಾಂಧವ್ಯ ಕಾಪಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾಣೆಯಾದ ಹೆಣ್ಣುಮಕ್ಕಳ ಹಾಗೂ ಮಹಿಳೆಯರ ಪತ್ತೆ ಕಾರ್ಯಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆ ಕಾರ್ಯ ಚುರುಕುಗೊಳಿಸಬೇಕು. ಕಾರಾಗೃಹಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸೂಚಿಸಿದ್ದಾರೆ.

ದ್ವೇಷ ಭಾಷಣ ಹಾಗೂ ಪ್ರಚೋದನಕಾರಿ ಘೋಷಣೆ ಕೂಗುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಶಾಲಾ–ಕಾಲೇಜುಗಳ ಎದುರು ಭದ್ರತೆ ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಅಲೋಕ್ ಮೋಹನ್ ಅವರು ಈ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಶ್ರೀಲಂಕಾದ ಮಾಜಿ U-19 ಕ್ರಿಕೆಟ್ ಕ್ಯಾಪ್ಟನ್‌ಗೆ ಗುಂಡಿಕ್ಕಿ ಹತ್ಯೆ

ಕೊಲಂಬೊ: ಶ್ರೀಲಂಕಾದ ಅಂಡರ್–19 ಕ್ರಿಕೆಟ್ ತಂಡದ ಮಾಜಿ ನಾಯಕ ಧಮ್ಮಿಕಾ ನಿರೋಶನಾ ಅವರನ್ನು ಮಂಗಳವಾರ ರಾತ್ರಿ ಗುಂಡಿಕ್ಕಿ ಕೊಲ್ಲಲಾಗಿದೆ. 2002ರಲ್ಲಿ ಶ್ರೀಲಂಕಾ ಅಂಡರ್–19 ತಂಡವನ್ನು ಮುನ್ನಡೆಸಿದ್ದ ವೇಗದ ಬೌಲರ್ ನಿರೋಶನಾ ಅವರನ್ನು ಅಂಬಲಂಗೋಡದಲ್ಲಿರುವ ಅವರ ನಿವಾಸದ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಗುಂಡಿಕ್ಕಿ ಕೊಂದಿದ್ದಾನೆ.

ಭೂಗತ ಗ್ಯಾಂಗ್‌ಗಳ ಮಧ್ಯದ ವೈಷಮ್ಯದ ಕಾರಣದಿಂದ ಈ ಹತ್ಯೆ ನಡೆದಿರಬಹುದು ಎಂದು ಶ್ರೀಲಂಕಾ ಪೊಲೀಸರು ಶಂಕಿಸಿದ್ದಾರೆ. 41 ವರ್ಷದ ಮಾಜಿ ಕ್ರಿಕೆಟಿಗ ಧಮ್ಮಿಕಾ ನಿರೋಶನಾರ ಮೇಲೆ 12 ಬೋರ್ ಬಂದೂಕಿನಿಂದ ಗುಂಡು ಹಾರಿಸಲಾಗಿದೆ. ಆರೋಪಿ ಹಂತಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸ್ ಮಾಧ್ಯಮ ವಕ್ತಾರ ನಿಹಾಲ್ ತಲ್ದುವಾ ತಿಳಿಸಿದ್ದಾರೆ.

ಗ್ಯಾಂಗ್ ವೈಷಮ್ಯದ ಪರಿಣಾಮವಾಗಿ ನಡೆದ ಗುಂಡಿನ ದಾಳಿಯಲ್ಲಿ ಭಾಗಿಯಾಗಿರುವ ಶಂಕಿತನನ್ನು ಬಂಧಿಸಲು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆ ಅಂಬಲಂಗೋಡ ಪ್ರದೇಶದಲ್ಲಿ ಇವರ ಆಪ್ತ ಸ್ನೇಹಿತ ದಾಸುನ್ ಮನಾಡು ಎಂಬುವರು ಕೂಡ ಹತ್ಯೆಗೀಡಾಗಿದ್ದರು. ಹೀಗಾಗಿ ತನಗೂ ಅಪಾಯವಿದೆ ಎಂದರಿತ ನಿರೋಶನಾ ದೇಶದಿಂದ ಪಲಾಯನ ಮಾಡಿದ್ದರು. ಮೂರು ತಿಂಗಳ ಹಿಂದೆಯಷ್ಟೇ ಮರಳಿ ಶ್ರೀಲಂಕಾಗೆ ಬಂದಿದ್ದರು.

ನಿರೋಶನ್ ಹತ್ಯೆ ಮತ್ತು ಪ್ರಥಮ ದರ್ಜೆ ಕ್ರಿಕೆಟಿಗ ಮತ್ತು ದಕ್ಷಿಣ ವಲಯದ ಮಾಜಿ ಕ್ರಿಕೆಟ್ ಆಡಳಿತಾಧಿಕಾರಿ ಎಚ್.ಪ್ರೇಮಸಿರಿ ಅವರ ಹತ್ಯೆಯ ಮಧ್ಯೆ ಏನಾದರೂ ಸಂಬಂಧವಿದೆಯೇ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಆಗಸ್ಟ್ 12, 2016ರಂದು ಗಾಲೆ ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಪ್ರೇಮಸಿರಿ ಅವರನ್ನು ಅವರ ನಿವಾಸದ ಬಳಿ ಅಪರಿಚಿತ ಬಂದೂಕುಧಾರಿಯೊಬ್ಬ ಗುಂಡಿಕ್ಕಿ ಕೊಂದು ಹಾಕಿದ್ದ. ಪ್ರೇಮಸಿರಿ ಅವರ ಹತ್ಯೆಯು ಗಾಲೆ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳ ಅಂತಾರಾಷ್ಟ್ರೀಯ ಮ್ಯಾಚ್ ಫಿಕ್ಸಿಂಗ್ ದಂಧೆಗೆ ಸಂಬಂಧಿಸಿದೆ ಎಂದು ಶಂಕಿಸಲಾಗಿದೆ. ಗಾಲೆ ಇದು ಭೂಗತ ಚಟುವಟಿಕೆಗಳು ಮತ್ತು ಕ್ರಿಕೆಟ್‌ಗೆ ಸಂಬಂಧಿಸಿದ ಗ್ಯಾಂಗ್ ಹತ್ಯೆಗಳಿಗೆ ಕುಖ್ಯಾತವಾಗಿದೆ.

ನಿರೋಶನಾ 2000ನೇ ಇಸವಿಯಲ್ಲಿ ಸಿಂಗಾಪುರ ವಿರುದ್ಧ ಶ್ರೀಲಂಕಾ ಅಂಡರ್–19 ತಂಡಕ್ಕೆ ಪದಾರ್ಪಣೆ ಮಾಡಿದ್ದರು. ವೇಗದ ಬೌಲರ್ ಆಗಿದ್ದ ನಿರೋಶನಾ ಪ್ರಥಮ ದರ್ಜೆ, ಲಿಸ್ಟ್ ಎ ಮತ್ತು ಅಂಡರ್–19 ಕ್ರಿಕೆಟ್‌ನಲ್ಲಿ 30ಕ್ಕಿಂತ ಕಡಿಮೆ ಬೌಲಿಂಗ್ ಸರಾಸರಿ ಹೊಂದಿದ್ದಾರೆ. ಅವರು ಎಂದಿಗೂ ಹಿರಿಯರ ತಂಡದಲ್ಲಿ ಸ್ಥಾನ ಪಡೆಯದಿದ್ದರೂ, ಏಂಜೆಲೊ ಮ್ಯಾಥ್ಯೂಸ್, ಉಪುಲ್ ತರಂಗ ಮತ್ತು ಫರ್ವೀಜ್ ಮಹರೂಫ್ ಸೇರಿದಂತೆ ಹಲವಾರು ಭವಿಷ್ಯದ ಕ್ರಿಕೆಟರುಗಳೊಂದಿಗೆ ಅಂಡರ್–19 ಮಟ್ಟದಲ್ಲಿ ಆಡಿದ್ದರು.

ಪಂಚೆಯಲ್ಲಿ ಬಂದಾಗ ಪ್ರವೇಶ ನಿರಾಕರಿಸಿದ್ದ ಅದೇ ಮಾಲ್‌ನಲ್ಲಿ ರೈತನಿಗೆ ಸನ್ಮಾನ

ಮೈಸೂರು/ಬೆಂಗಳೂರು: ಪಂಚೆ ಧರಿಸಿ ಬಂದಿದ್ದಕ್ಕೆ ರೈತನನ್ನು ಜಿಟಿ ಮಾಲ್ ಒಳಗೆ ಬಿಡದೇ ಸಿಬ್ಬಂದಿ ದರ್ಪ ತೋರಿದ ಘಟನೆ ಮಂಗಳವಾರ ನಡೆದಿತ್ತು. ಘಟನೆ ಬೆಳಕಿಗೆ ಬರುತ್ತಿದ್ದಂತೆ, ಮಾಲ್ ಸಿಬ್ಬಂದಿ, ಆಡಳಿತದ ಮಂಡಳಿ ವಿರುದ್ಧ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

ಮಾಲ್ ಮಾಲೀಕರು ರೈತನಿಗೆ ಕ್ಷಮೆಯಾಚಿಸಬೇಕು ಎಂಬ ಆಗ್ರಹವೂ ಕೇಳಿ ಬಂದಿತ್ತು ಅದಲ್ಲದೇ ಘಟನೆಯನ್ನು ಖಂಡಿಸಿ, ಇಂದು ಕನ್ನಡಪರ ಹೋರಾಟಗಾರರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ಮಾಲ್ ಸಿಬ್ಬಂದಿ ಕ್ಷಮೆಯಾಚಿಸಿದ ಬಳಿಕ ಚಂದ್ರಶೇಖರ್ ಪ್ರತಿಭಟನೆ ಹಿಂಪಡೆದಿದ್ದಾರೆ.

ರೈತನಿಗೆ ಸನ್ಮಾನ: ಪ್ರತಿಭಟನೆ ಬೆನ್ನಲ್ಲೇ ಮಾಲ್ ಸಿಬ್ಬಂದಿ, ತಾವು ಮಾಡಿದ್ದು ತಪ್ಪು ಎಂದು ಒಪ್ಪಿಕೊಂಡು, ಪಂಚೆಯಲ್ಲೇ ಬಂದ ರೈತ ಫಕೀರಪ್ಪ ಅವರಿಗೆ ಆಡಳಿತಾಧಿಕಾರಿಗಳು ಒಳಗಡೆ ಕರೆಯಿಸಿ ಸನ್ಮಾನಿಸಿ, ಕ್ಷಮೆಯಾಚಿಸಿದ್ದಾರೆ. ಪ್ರತಿಭಟನೆ ಸಂದರ್ಭದಲ್ಲಿ ಲುಂಗಿಯುಟ್ಟ ವೃದ್ಧರೊಬ್ಬರು ಮಾಲ್ ಒಳಗೆ ಹೋಗಿದ್ದು, ಸಿಬ್ಬಂದಿಯು ಅವರಿಗೆ ಕೈಮುಗಿದು, ಸೆಕ್ಯೂರಿಟಿ ಚೆಕ್ ಕೂಡ ಮಾಡದೇ ಒಳಬಿಟ್ಟಿದ್ದಾರೆ.

ಕ್ಷಮೆ ಕೇಳಿದ ಸಿಬ್ಬಂದಿ



ರೈತ ಫಕೀರಪ್ಪ ಅವರನ್ನು ಸನ್ಮಾನಿಸುತ್ತಿರುವ ಮಾಲ್ ಆಡಳಿತ ಮಂಡಳಿ.

ಕ್ಷಮೆ ಕೇಳಿದ ಸೆಕ್ಯೂರಿಟಿ: ರೈತನನ್ನು ತಡೆದ ಸೆಕ್ಯೂರಿಟಿ ಸಿಬ್ಬಂದಿ ಕೂಡ ಕ್ಷಮೆಯಾಚಿಸಿದ್ದಾರೆ. ನಿನ್ನೆ ಮಧ್ಯಾಹ್ನ ವ್ಯಕ್ತಿಯೊಬ್ಬರು ಪಂಚೆಯಲ್ಲಿ ಮಾಲ್‌ಗೆ ಬಂದಿದ್ದರು. ಪಂಚೆಯನ್ನು ಮೊಣಕಾಲಿನ ತನಕ ಧರಿಸಿ ನಿಂತಿದ್ದರು. ಕೆಳಗಿನ ಮಹಡಿಯಲ್ಲಿ ಹುಟ್ಟುಹಬ್ಬದ ಕಾರ್ಯಕ್ರಮ ನಡೆಯುತ್ತಿತ್ತು. ವಿಚಾರವನ್ನು ಮ್ಯಾನೇಜ್‌ಮೆಂಟ್ ಗಮನಕ್ಕೆ ತರಲಾಗಿತ್ತು. ಸಂಜೆ ಮತ್ತೆ ರೈತರೊಬ್ಬರು ಪಂಚೆ ಧರಿಸಿ ಬಂದಿದ್ದರು. ಈ ಸಮಯದಲ್ಲಿ ನಾವು ತಡೆದು, ಮ್ಯಾನೇಜ್‌ಮೆಂಟ್ ಗಮನಕ್ಕೆ ತಂದಿದ್ದೆವು. ಆದರೆ, ಉದ್ದೇಶಪೂರ್ವಕವಾಗಿ ತಡೆದಿಲ್ಲ. ಮ್ಯಾನೇಜ್‌ಮೆಂಟ್‌ನಿಂದ ಉತ್ತರ ಬರುವ ತನಕ ಕಾಯಿಸಿದ್ದೆವಷ್ಟೇ ಎಂದು ಸೆಕ್ಯೂರಿಟಿ ಅರುಣ್ ಸ್ಪಷ್ಟನೆ ನೀಡಿದ್ದಾರೆ.

ಘಟನೆಯ ವಿವರ: ಹಾವೇರಿ ಮೂಲದ ನಾಗರಾಜ್ ಎಂಬುವರು ಜುಲೈ 16ರಂದು ತಮ್ಮ ತಂದೆ–ತಾಯಿಗೆ ಸಿನಿಮಾ ತೋರಿಸಲು ಬೆಂಗಳೂರಿನ ಮಾಗಡಿ ರಸ್ತೆ ಜಿಟಿ ಮಾಲ್ ಕರೆದೊಯ್ದಿದ್ದಾರೆ. ಆದರೆ, ನಾಗರಾಜ್ ತಂದೆ ಪಂಚೆ ಹಾಕಿಕೊಂಡು ತಲೆಗೆ ಪಟಗ ಸುತ್ತಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಅವರನ್ನು ಮಾಲ್ ಒಳಗೆ ಪ್ರವೇಶಿಸಲು ನಿರಾಕರಿಸಿದ್ದರು. ಒಳಗೆ ಬಿಡಿ ಎಂದು ಪುತ್ರ ನಾಗರಾಜ್ ಎಷ್ಟು ಬಾರಿ ಕೇಳಿದರೂ, ಪಂಚೆ ಹಾಕೊಂಡಿದ್ದಾರೆ, ಮಾಲ್‌ನಲ್ಲಿ ಪಂಚೆ ಹಾಕಿದವರನ್ನು ಬಿಡುವುದಿಲ್ಲ ಎಂದು ಸಿಬ್ಬಂದಿ ನಿರಾಕರಿಸಿದ್ದರು. ಇದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಅಸಮಾಧಾನಕ್ಕೆ ಕಾರಣವಾಗಿತ್ತು.

ದಕ್ಷಿಣ ಭಾರತದ ಮೊದಲ ರೋಡ್–ಕಮ್–ರೈಲು ಮೇಲ್ಸೇತುವೆ ಲೋಕಾರ್ಪಣೆ: ಪ್ರಾಯೋಗಿಕ ಸಂಚಾರಕ್ಕೆ ಡಿಕೆಶಿ ಚಾಲನೆ!

ಬೆಂಗಳೂರು: ರಾಗಿಗುಡ್ಡದಲ್ಲಿ ದಕ್ಷಿಣ



ಭಾರತದ ಅತೀ ಎತ್ತರದ ರೋಡ್–ಕಮ್–ರೈಲು ಮೇಲ್ಸೇತುವೆ ಬುಧವಾರ (ಜು.17) ಲೋಕಾರ್ಪಣೆಗೊಂಡಿದ್ದು, ಪ್ರಾಯೋಗಿಕ ವಾಹನ ಸಂಚಾರಕ್ಕೆ ಚಾಲನೆ ನೀಡಲಾಗಿದೆ.

449 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ 3.36 ಕಿಮೀ ಉದ್ದದ ಡಬ್ಬಲ್ ಡೆಕ್ಕರ್ ಫ್ಲೈ ಓವರ್ ಅನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಲೋಕಾರ್ಪಣೆಗೊಳಿಸಿದರು. ಬಳಿಕ ಖುದ್ದು ಡಿಕೆ ಶಿವಕುಮಾರ್ ಅವರೇ ಫ್ಲೈಓವರ್ ರಸ್ತೆಯಲ್ಲಿ ಕಾರು ಓಡಿಸುವ ಮೂಲಕ ಪ್ರಾಯೋಗಿಕ ವಾಹನ ಸಂಚಾರಕ್ಕೆ ಚಾಲನೆ ನೀಡಿದರು. ಕಾರಿನಲ್ಲಿ ಡಿಕೆಶಿ ಜೊತೆಗೆ ಸಚಿವ ರಾಮಲಿಂಗಾ ರೆಡ್ಡಿ ಅವರೂ ಕುಳಿತಿದ್ದರು.

ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್‌ವರೆಗೆ ನಿರ್ಮಾಣವಾಗಿರುವ ಡಬ್ಬಲ್ ಡೆಕ್ಕರ್ ಫ್ಲೈ ಓವರ್ ಎರಡೂ ಬದಿಗಳಲ್ಲಿ ಎರಡು ರಸ್ತೆ ಮಾರ್ಗ ನಿರ್ಮಿಸಲಾಗಿದ್ದು, ಇಲ್ಲಿ ಬಸ್ಸು, ಕಾರು ಸೇರಿ ಎಲ್ಲಾ ರೀತಿಯ ವಾಹನಗಳು ಸಂಚರಿಸಲಿವೆ. 2ನೇ ಹಂತದ ಮಾರ್ಗದಲ್ಲಿ ಮೆಟ್ರೋ ರೈಲು ಸಂಚರಿಸಲಿದೆ. ಮೆಟ್ರೋ ಕಂಬಕ್ಕೆ ಎರಡೂ ಬದಿಯಲ್ಲಿ ರೆಕ್ಕೆಗಳ ರೀತಿಯಲ್ಲಿ ಈ ಸೇತುವೆ ನಿರ್ಮಾಣ ಮಾಡಲಾಗಿದೆ.

ಲಾಭ ಏನು: ಮೇಲ್ಸೇತುವೆಯಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಆಗುತ್ತಿದ್ದ ದಟ್ಟಣೆ ಕಡಿಮೆಯಾಗಲಿದೆ. ಎಲೆಕ್ಟ್ರಾನಿಕ್ಸ್ ಸಿಟಿಯ ಉದ್ಯೋಗಿಗಳು ಟ್ರಾಫಿಕ್ ಜಾಮ್‌ನಿಂದ ಮುಕ್ತಿ ಪಡೆಯಲಿದ್ದಾರೆ. 3.3 ಕಿಮೀವರೆಗೆ ತಡೆರಹಿತ ಸಂಚಾರವಿರಲಿದೆ. ಹೀಗಾಗಿ ಒಮ್ಮೆ ಫ್ಲೈ ಓವರ್ ಹತ್ತಿದರೆ 3.3 ಕಿಮೀವರೆಗೆ ಎಲ್ಲಿಯೂ ಇಳಿಯಲು ಅವಕಾಶವಿಲ್ಲ. ಎರಡು ಕಡೆ ಯೂ ಟರ್ನ್ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಮಾರೇನಹಳ್ಳಿ ರಸ್ತೆಯಲ್ಲಿ 31 ಮೀಟರ್ ಎತ್ತರದಲ್ಲಿ ಮೇಲ್ಸೇತುವೆಯನ್ನು ನಿರ್ಮಿಸಿದ್ದು, ಆರ್‌ವಿ ರಸ್ತೆ–ಬೊಮ್ಮಸಂದ್ರ ಮೆಟ್ರೋ ಮಾರ್ಗವನ್ನು ಎರಡನೇ ಹಂತದಲ್ಲಿ ಹಾಕಲಾಗಿದೆ. ಎಲಿವೇಟೆಡ್ ರಸ್ತೆಯ ಮೇಲೆ ಮೆಟ್ರೋ ಮಾರ್ಗವನ್ನು ಹೊಂದಿರುವ ದಕ್ಷಿಣ ಭಾರತದಲ್ಲಿ ಇದು ಮೊದಲ ಫ್ಲೈಓವರ್ ಆಗಿದೆ.

ರಾಗಿಗುಡ್ಡದಿಂದ ಸಿಎಸ್‌ಬಿ ಜಂಕ್ಷನ್‌ವರೆಗೆ ಹಳದಿ ಮಾರ್ಗದ ಮೆಟ್ರೋಗಾಗಿ ರಸ್ತೆ ಮೇಲ್ಸೇತುವೆಯ ಮೊದಲ ಹಂತವನ್ನು ಈಗಾಗಲೇ ನಿರ್ಮಿಸಲಾಗಿದೆ. BMRCL ಪ್ರಕಾರ, A, B ಮತ್ತು C ರ‍್ಯಾಂಪ್‌ಗಳು ಮೇ 2024ರೊಳಗೆ ಪೂರ್ಣಗೊಂಡು ಕಾರ್ಯಾರಂಭಿಸಬೇಕಿತ್ತು. D ಮತ್ತು E ರ‍್ಯಾಂಪ್ ಗಳನ್ನು ಡಿಸೆಂಬರ್ 2024ರೊಳಗೆ ಕಾರ್ಯಾರಂಭ ಮಾಡಲಾಗುತ್ತದೆ.



ಡಿಟಿಪಿ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಜು. 17– ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗದ ವತಿಯಿಂದ ಡಿಟಿಪಿ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ಫಲಾನುಭವಿಗಳು ನುರಿತ ಅಧ್ಯಾಪಕರಿಂದ ಕಂಪ್ಯೂಟರ್ ಫಂಡಮೆಂಟಲ್ಸ್, ಟೈಪಿಂಗ್‌ಸ್ಕಿಲ್ಸ್, ಕನ್ನಡ ನುಡಿ, ಟ್ಯಾಲಿ ಪ್ರೈಮ್, ಡಿಟಿಪಿ ಮುಂತಾದ ವಿಷಯಗಳ ಕುರಿತು ಪ್ರಾಯೋಗಿಕ ತರಗತಿಗಳನ್ನು ನೀಡಲಾಗುವುದು. ವಿದ್ಯಾರ್ಥಿಗಳು, ಪೋಷಕರು, ಗೃಹಿಣಿಯರು, ಹಿರಿಯ ನಾಗರಿಕರು ಈ ತರಬೇತಿಯ ಲಾಭವನ್ನು ಪಡೆಯಬಹುದಾಗಿದೆ.

ಅರ್ಜಿಗಳು ಇದೇ ಜುಲೈ 22ರಿಂದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜು ಆವರಣ, ರಾಮಕೃಷ್ಣನಗರ ಇಲ್ಲಿ ದೊರೆಯಲಿದೆ. ನೋಂದಣಿ ಹಾಗೂ ಪ್ರವೇಶಾತಿಗಳ ಕುರಿತ ಹೆಚ್ಚಿನ ಮಾಹಿತಿಗಾಗಿ 8310306882, 9964790442 ಸಂಪರ್ಕಿಸಬಹುದು.

ದೇವಸ್ಥಾನದಲ್ಲಿ ಜಾರಿಬಿದ್ದ ಮಾಜಿ ಸಚಿವ ಹೆಚ್.ಡಿ.ರೇವಣ್ಣ: ಐಸಿಯುನಲ್ಲಿ ಚಿಕಿತ್ಸೆ

ಹಾಸನ: ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ದೇವಸ್ಥಾನದಲ್ಲಿ ಕಾಲು ಜಾರಿ



ಬಿದ್ದಿದ್ದು, ಪಕ್ಕೆಲುಬಿಗೆ ಪೆಟ್ಟಾದ ಹಿನ್ನೆಲೆಯಲ್ಲಿ ಹೊಳೆನರಸೀಪುರದ ಸರ್ಕಾರಿ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಏಕಾದಶಿ ಪ್ರಯುಕ್ತ ಉಪವಾಸವಿದ್ದ ರೇವಣ್ಣ ಹೊಳೆನರಸೀಪುರ ತಾಲೂಕಿನ ಹರದನಹಳ್ಳಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದರು. ಬಳಿಕ ಹರದನಹಳ್ಳಿಯಿಂದ ಹೊಳೆನರಸೀಪುರದ ಶ್ರೀಲಕ್ಷ್ಮೀನರಸಿಂಹ ದೇವಾಲಯಕ್ಕೆ ಹೊರಟಿದ್ದರು. ಅಲ್ಲಿ ಅವರು ಕಾಲು ಜಾರಿ ಬಿದ್ದಿದ್ದು, ಪಕ್ಕೆಲುಬಿಗೆ ತೀವ್ರವಾದ ನೋವಾಗಿದೆ. ಪಕ್ಕೆಲುಬಿಗೆ ಪೆಟ್ಟಾದ ಕಾರಣ ಅವರು ಹೊಳೆನರಸೀಪುರದ ತಾಲೂಕು ಆಸ್ಪತ್ರೆಯ ಐಸಿಯುನಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದೇಶ - ವಿದೇಶ

ಒಮನ್‌ನಲ್ಲಿ ತೈಲ ಟ್ಯಾಂಕರ್ ಉರುಳಿ ಬಿದ್ದು 13 ಭಾರತೀಯರು ಸೇರಿ 16 ಮಂದಿ ನಾಪತ್ತೆ

ಮಸ್ಕತ್: ಒಮನ್ ಕರಾವಳಿಯಲ್ಲಿ 117 ಮೀಟರ್ ಉದ್ದದ ತೈಲ ಟ್ಯಾಂಕರ್ ಉರುಳಿ ಬಿದ್ದ ಪರಿಣಾಮ 13 ಮಂದಿ ಭಾರತೀಯರು ಸೇರಿ 16 ಮಂದಿ ನಾಪತ್ತೆಯಾಗಿದ್ದಾರೆ. ಕಾಣೆಯಾದವರ ಪತ್ತೆಹಚ್ಚಲು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ಮುಂದುವರೆದಿವೆ.



ಆದರೆ, ಇಲ್ಲಿವರೆಗೆ ಅವರಲ್ಲಿ ಯಾರೊಬ್ಬರ ಕುರುಹು ಪತ್ತೆಯಾಗಿಲ್ಲ. ಕೊಮೊರೊಸ್ ಧ್ವಜದ ತೈಲ ಟ್ಯಾಂಕರ್ 'ಪ್ರೆಸ್ಟೀಜ್ ಫಾಲ್ಕನ್' ನಲ್ಲಿ 13 ಭಾರತೀಯರು ಮತ್ತು ಮೂವರು ಶ್ರೀಲಂಕಾದವರು ಇದ್ದರು ಎಂದು ಕಡಲ ಭದ್ರತಾ ಕೇಂದ್ರವು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಮಾಹಿತಿ ನೀಡಿದೆ. ಒಮಾನಿ ಬಂದರಿನ ಡುಕ್ಮ್ ಬಳಿ ರಾಸ್ ಮದ್ರಕಾದಿಂದ ಆಗ್ನೇಯಕ್ಕೆ 25 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ ಹಡಗು ಮುಳುಗಿದೆ ಎಂದು ತಿಳಿಸಿದೆ.

ಸಾರ್ವಜನಿಕವಾಗಿ ಪತಿಗೆ ವಿಚ್ಛೇದನ ನೀಡಿದ ದುಬೈ ರಾಜಕುಮಾರಿ!

ದುಬೈ: ದುಬೈ ಆಡಳಿತಗಾರ ಹಾಗೂ ಪ್ರಧಾನಿಯ ಮಗಳು ರಾಜಕುಮಾರಿ ಶೇಖಾ ಮಹ್ರಾ ಬಿಂಟ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಅವರು ಪತಿಗೆ ಸಾರ್ವಜನಿಕವಾಗಿ 'ವಿಚ್ಛೇದನ' ಘೋಷಿಸಿದ್ದಾರೆ. ಪತಿ ಶೇಖ್ ಮಾನಾ ಬಿನ್ ಮೊಹಮ್ಮದ್ ಬಿನ್ ರಶೀದ್ ಬಿನ್ ಮಾನಾ ಅಲ್ ಮಕ್ತೌಮ್ ಅವರಿಗೆ ಇನ್‌ಸ್ಟಾಗ್ರಾಂನಲ್ಲಿ ವಿಚ್ಛೇದನ ನೀಡಿರುವುದು ಸಂಚಲನ ಮೂಡಿಸಿದೆ.



ಈ ದಂಪತಿ ತಮ್ಮ ಮೊದಲ ಮಗುವನ್ನು ಸ್ವಾಗತಿಸಿದ ಎರಡನೇ ತಿಂಗಳಲ್ಲಿ ವಿಚ್ಛೇದನದ ಪ್ರಕಟಣೆ ಹೊರಬಂದಿದೆ. 'ಪ್ರಿಯ ಪತಿ, ನೀವು ಇತರೆ ಸಂಗಾತಿಗಳ ಜತೆ ತೊಡಗಿರುವ ಕಾರಣದಿಂದ, ನಾನು ನಮ್ಮ ವಿಚ್ಛೇದನವನ್ನು ಘೋಷಿಸುತ್ತಿದ್ದೇನೆ. ಐ ಡಿವೋರ್ಸ್ ಯು, ಐ ಡಿವೋರ್ಸ್ ಯು, ಅಂಡ್ ಐ ಡಿವೋರ್ಸ್ ಯು. ಟೇಕ್ ಕೇರ್. ನಿಮ್ಮ ಮಾಜಿ ಪತ್ನಿ' ಎಂದು ಶೇಖಾ ಮಹ್ರಾ ಅವರು ಇನ್‌ಸ್ಟಾಗ್ರಾಂನಲ್ಲಿ ಬರೆದಿದ್ದಾರೆ. ಶೇಖಾ ಮಹ್ರಾ ಮತ್ತು ಉದ್ಯಮಿ ಶೇಖ್ ಮಾನಾ ಅವರು ಕಳೆದ ವರ್ಷ ಮೇ ತಿಂಗಳಲ್ಲಿ ಮದುವೆಯಾಗಿದ್ದರು. 12 ತಿಂಗಳ ಬಳಿಕ ಅವರಿಗೆ ಮೊದಲ ಮಗಳು ಜನಿಸಿದ್ದಳು. ಜನ್ಮ ನೀಡುವ ಅತ್ಯಂತ ಸ್ಮರಣೀಯ ಅನುಭವದ ಬಗ್ಗೆ ಶೇಖಾ ಮಹ್ರಾ ಹಂಚಿಕೊಂಡಿದ್ದರು. ತನ್ನ ಆರೈಕೆ ಮಾಡಿದ ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದ್ದರು. ಅವರು ಪೋಸ್ಟ್ ಮಾಡಿದ್ದ ಫೋಟೋಗಳ ಪೈಕಿ, ಪತಿ ಶೇಖ್ ಮಾನಾ ಅವರು ಪುಟಾಣಿ ಮಗುವನ್ನು ತೋಳುಗಳಲ್ಲಿ ಇರಿಸಿಕೊಂಡ ಚಿತ್ರವೂ ಇತ್ತು. ಮಗುವಿನ ಲಿಂಗ ಬಹಿರಂಗಪಡಿಸಲೆಂದೇ ಈ ದಂಪತಿ ಫೆಬ್ರವರಿಯಲ್ಲಿ ಪಾರ್ಟಿ ಆಯೋಜಿಸಿದ್ದರು.

ಕೆಲವು ದಿನಗಳ ಹಿಂದಷ್ಟೇ, ಮಗುವನ್ನು ಎದೆಗೆ ಆನಿಸಿಕೊಂಡಿರುವ ಗೂಢಾರ್ಥದ ಪೋಸ್ಟ್‌ಅನ್ನು ಶೇಖಾ ಮಹ್ರಾ ಹಂಚಿಕೊಂಡಿದ್ದರು. ಅದರಲ್ಲಿ ಅವರು 'ಕೇವಲ ನಾವಿಬ್ಬರು' ಎಂದು ಬರೆದುಕೊಳ್ಳುವ ಮೂಲಕ ಪತಿ ಜತೆಗಿನ ಸಂಬಂಧ ಹದಗೆಟ್ಟಿದೆ ಎಂಬುದರ ಸುಳಿವು ನೀಡಿದ್ದರು ಎಂದು ಈಗ ವಿಶ್ಲೇಷಿಸಲಾಗುತ್ತಿದೆ.

ಪಕ್ಷದ ಯುವ ಅಧ್ಯಕ್ಷನಿಗೆ ಕಪಾಳಕ್ಕೆ ಹೊಡೆದ ಟಿಎಂಸಿ ಮಹಿಳಾ ಕೌನ್ಸಿಲರ್

ಕೋಲ್ಕತ್ತಾ: ತೃಣಮೂಲ ಕಾಂಗ್ರೆಸ್ ಕೋಲ್ಕತ್ತಾ ಮುನ್ಸಿಪಲ್ ಕಾರ್ಪೊರೇಷನ್ ಕೌನ್ಸಿಲರ್ ತಮ್ಮ ಪಕ್ಷದ ಯುವ ನಾಯಕನನ್ನು ಥಳಿಸುವ ದೃಶ್ಯ ಅಂತರ್ಜಾಲದಲ್ಲಿ ಹರಿದಾಡುತ್ತಿದ್ದಂತೆಯೇ ವಿವಾದ ಸೃಷ್ಟಿಯಾಗಿದೆ.



ವಿಡಿಯೋದಲ್ಲಿ ವಾರ್ಡ್ ನಂ.18ರ ಮಹಿಳಾ ಕೌನ್ಸಿಲರ್ ಸುನಂದಾ ಸರ್ಕಾರ್ ಅವರು ವಾರ್ಡ್‌ನ ಟಿಎಂಸಿ ಯುವ ಅಧ್ಯಕ್ಷ ಕೇದಾರ್ ದಾಸ್ ಅವರಿಗೆ ಕಪಾಳಮೋಕ್ಷ ಮಾಡುತ್ತಿರುವುದು ಕಂಡುಬಂದಿದೆ. ವರದಿಗಳ ಪ್ರಕಾರ, ಸುನಂದಾ ಸರ್ಕಾರ್ ಅವರು ಕೇದಾರ್ ದಾಸ್ ಅವರನ್ನು ಥಳಿಸಿದ್ದಾರೆ. ಏಕೆಂದರೆ ಆತ ಹಲವು ಸುಲಿಗೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ ಎಂದು ತಿಳಿಯುತ್ತಿದ್ದಂತೆ ಕೋಪಗೊಂಡ ಸುನಂದಾ ಏಕಾಏಕಿ ಕಪಾಳಮೋಕ್ಷ ಮಾಡಿದ್ದಾರೆ. ಈ ಕುರಿತು ಟಿಎಂಸಿ ವಕ್ತಾರ ಕುನಾಲ್ ಘೋಷ್ ಪ್ರತಿಕ್ರಿಯಿಸಿದ್ದಾರೆ. ಇದು ದುರದೃಷ್ಟಕರ ಸಂಗತಿ. ಹಿರಿಯ ಮುಖಂಡರು ಹಾಗೂ ಜನಪ್ರತಿನಿಧಿಗಳು ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದರು. ಇಂತಹ ಘಟನೆ ನಡೆಯುತ್ತಿರುವುದು ಹಾಸ್ಯಾಸ್ಪದ ಎಂದು ಹೇಳಿದ್ದಾರೆ.

ಭಾರತದ ಹವಾಯಿ ಚಪ್ಪಲಿಗೆ ಸೌದಿಯಲ್ಲಿ ಬರೋಬ್ಬರಿ 1 ಲಕ್ಷ ರೂ

ದುಬೈ: ದಶಕಗಳ ಹಿಂದೆ ಬೈಕಾಫ್ ಚಪ್ಪಲಿಗಳು ಭಾರಿ ಜನಪ್ರಿಯವಾಗಿದ್ದವು. 40, 80 ರೂಪಾಯಿ ಒಳಗೆ ನೀಲಿ ಹಾಗೂ ಬಿಳಿ ಬಣ್ಣದ ಈ ಸ್ಯಾಂಡಲ್ಸ್ ದೊರೆಯುತ್ತಿತ್ತು. ಇದೀಗ ಹಳೇ ಕಾಲದ ಸ್ಯಾಂಡಲ್ಸ್ ಬದಲು ಹೆಚ್ಚು ಸ್ಟೈಲೀಶ್ ಚಪ್ಪಲಿಗಳು 100ರಿಂದ 150 ರೂಪಾಯಿಯಲ್ಲಿ ಭಾರತದಲ್ಲಿ ಲಭ್ಯವಿದೆ. ಶೌಚಾಲಯದ ಬಾಗಿಲ ಬಳಿ ಹೆಚ್ಚಾಗಿ ಕಾಣಸಿಗುವ ಈ ನೀಲಿ ಹಾಗೂ ಬಿಳಿ ಬಣ್ಣದ ಹವಾಯಿ ಚಪ್ಪಲಿ ಸೌದಿ ಅರೇಬಿಯಾದಲ್ಲಿ ಬರೋಬ್ಬರಿ 1 ಲಕ್ಷ ರೂ. ಮಾರಾಟ ಮಾಡಲಾಗುತ್ತಿದೆ ಈ ಚಪ್ಪಲಿ ಅಂಗಡಿಯ ವಿಡಿಯೋ ಭಾರಿ ವೈರಲ್ ಆಗಿದೆ.



ಸೌದಿ ಅರೇಬಿಯಾ ಚಪ್ಪಲಿ ಅಂಗಡಿಯ ವಿಡಿಯೋ ಆರಂಭದಲ್ಲೇ ಅಚ್ಚರಿ ನೀಡಲಿದೆ. ನೀಲಿ ಬಣ್ಣದ ಹವಾಯಿ ಚಪ್ಪಲಿ ಸೇರಿದಂತೆ ಇತರ ಚಪ್ಪಲಿಗಳನ್ನು ಜ್ಯುವೆಲ್ಲರಿ ಶೋ ರೂಂನಲ್ಲಿ ಚಿನ್ನ ಇಟ್ಟಂತೆ ಗಾಜಿನೊಳಗೆ ಇಡಲಾಗಿದೆ. ಫಳಫಳ ಹೊಳೆಯುತ್ತಿರುವ ಗಾಜಿನ ಒಳಗಿಂದ ಈ ನೀಲಿ ಬಣ್ಣದ ಹವಾಯಿ ಚಪ್ಪಲಿ ತೆಗೆದ ಸಿಬ್ಬಂದಿ, ಗ್ರಾಹಕರಿಗೆ ತೋರಿಸಿದ್ದಾರೆ. ಈ ಚಪ್ಪಲಿ ಉತ್ತಮ ಬಾಳಿಕೆ ಬರಲಿದೆ. ಪಾದಕ್ಕೆ ಹಿತ ನೀಡಲಿದೆ. ಬಾಳಿಕೆ ಹೆಚ್ಚಿದೆ ಎಂದು ಗಟ್ಟಿಯಾಗಿಲ್ಲ. ಸಾಫ್ಟ್ ಆಗಿ ಹೆಚ್ಚು ಸುರಕ್ಷತೆ ನೀಡುತ್ತದೆ. ಇನ್ನು ಚಪ್ಪಲಿಯನ್ನು ಯಾವುದೇ ರೀತಿ ಬೆಂಡ್ ಮಾಡಿದರೂ ಸಮಸ್ಯೆ ಇಲ್ಲ ಎಂದು ಸಿಬ್ಬಂದಿ ಹವಾಯಿ ಚಪ್ಪಲಿ ಗುಣಗಾನ ಮಾಡಿದ್ದಾರೆ.

ಬ್ಯಾಂಕಾಕ್ ಐಷಾರಾಮಿ ಹೋಟೆಲ್‌ನಲ್ಲಿ ಆರು ವಿದೇಶಿಗರ ನಿಗೂಢ ಸಾವು

ಬ್ಯಾಂಕಾಕ್: ಥಾಯ್ಲೆಂಡ್‌ನ ರಾಜಧಾನಿ ಬ್ಯಾಂಕಾಕ್‌ನ ಐಷಾರಾಮಿ ಹೋಟೆಲ್ ಒಂದರಲ್ಲಿ ಏಕಕಾಲದಲ್ಲಿ ಸಂಭವಿಸಿದ್ದ ಆರು ವಿದೇಶಿಯರ ನಿಗೂಢ ಸಾವಿನ ಪ್ರಕರಣಕ್ಕೆ ಥಾಯ್ ಪೊಲೀಸರು ಪ್ರಾಥಮಿಕ ತನಿಖೆಯಲ್ಲಿ ಕಾರಣ ಕಂಡುಕೊಂಡಿದ್ದಾರೆ.



ಸೆಂಟ್ರಲ್ ಬ್ಯಾಂಕಾಕ್‌ನ ಐಷಾರಾಮಿ ಹೋಟೆಲ್ 'ದಿ ಗ್ರ್ಯಾಂಡ್ ಹಯಾತ್'ನ ಕೋಣೆಯೊಂದರಲ್ಲಿ ನಾಲ್ಕು ಜನ ವಿಯೆಟ್ನಾಂ ಹಾಗೂ ಇಬ್ಬರು ಅಮೆರಿಕ ಪ್ರಜೆಗಳ ಮೃತದೇಹಗಳು ಪತ್ತೆಯಾಗಿದ್ದವು. ಆರಂಭದಲ್ಲಿ ಶೂಟೌಟ್‌ನಿಂದ ಈ ಹತ್ಯೆಗಳು ನಡೆದಿದ್ದವು ಎಂದು ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಇದರಿಂದ ಪ್ರವಾಸಿಗರು ಬೆಚ್ಚಿಬಿದ್ದಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ಥಾಯ್ ಪೊಲೀಸರಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ಪ್ರಾಥಮಿಕ ವರದಿಗಳು ಸಿಕ್ಕಿದ್ದು ಸೈನೈಡ್ ಸೇವನೆಯಿಂದ ಈ ಸಾವುಗಳು ಸಂಭವಿಸಿವೆ. ಮೃತರು ಕುಡಿದಿದ್ದ ಟೀ ಕಪ್ ಹಾಗೂ ಮೃತದೇಹಗಳಲ್ಲಿ ಸೈನೈಡ್ ಅಂಶ ಇರುವುದು ಕಂಡು ಬಂದಿದೆ ಎಂದು ಥಾಯ್ ಪೊಲೀಸ್ ಪಡೆಗಳ ಮುಖ್ಯಸ್ಥ ಜನರಲ್ ಟ್ರಯರೋಂಗ್ ಪಿಪ್‌ವಾನ್ ತಿಳಿಸಿದ್ದಾರೆ. ಮೃತರಲ್ಲಿ ಮೂವರು ಪುರುಷರು ಹಾಗೂ ಮೂವರು ಮಹಿಳೆಯರಿದ್ದಾರೆ. ಇವರೆಲ್ಲ ದಂಪತಿಗಳಾಗಿದ್ದರು. ಅಮೆರಿಕ ದಂಪತಿ ವಿಯೆಟ್ನಾಂ ದಂಪತಿಗಳ ಜೊತೆ ಸೋಮವಾರ ಹೋಟೆಲ್‌ಗೆ ಬಂದು ತಂಗಿದ್ದರು ಎಂದು ತಿಳಿಸಿದ್ದಾರೆ.

ಬಸವಣ್ಣನವರ ವಚನಗಳ ಜೀವನದಲ್ಲಿ ಅಳವಡಿಸಿಕೊಂಡರೆ ಭೂಮಿ ಸ್ವರ್ಗದಂತೆ

ಬಸವ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಸದ ಯದುವೀರ್ ಅಭಿಮತ

ಮೈಸೂರು,ಜು.17(ಎಂಟಿವೈ)– ಎಲ್ಲರೂ ತಮ್ಮ ಜೀವನದಲ್ಲಿ ವಿಶ್ವಗುರು ಬಸವಣ್ಣನ ವಚನಗಳನ್ನು ಅಳವಡಿಸಿಕೊಂಡರೆ ಭೂಮಿ ಸ್ವರ್ಗದಂತಾಗುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಶರಣ ಮಂಡಲಿಯು ಮೈಸೂರಿನ ನಟರಾಜ ಸಭಾಭವನದಲ್ಲಿ ಬುಧವಾರ ಆಯೋಜಿಸಿದ್ದ ಬಸವ ಜಯಂತಿ, ಬಸವರತ್ನ ಪ್ರಶಸ್ತಿ ಪ್ರದಾನ ಹಾಗೂ ವಾಟಾಳು ಶ್ರೀಗಳಿಗೆ ಗುರುವಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಣ್ಣನವರು ರಚಿಸಿದ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಭಾರತೀಯ ಪರಂಪರೆಯಲ್ಲಿ, ತತ್ವಶಾಸ್ತ್ರದಲ್ಲಿ ಇರುವ ವಿಷಯಗಳನ್ನು ಸಾಮಾನ್ಯರಿಗೂ ತಿಳಿಯುವಂತೆ ಸರಳ ಭಾಷೆಯಲ್ಲಿ ವಚನಗಳನ್ನು ಬರೆದಿದ್ದಾರೆ. ದೇವಲೋಕ, ಮರ್ತ್ಯಲೋಕ ಎಂಬುವು ಇಲ್ಲ. 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಸರಳವಾಗಿ ಎರಡು ಸಾಲಿನಲ್ಲಿ ಜೀವನವನ್ನು ತಿಳಿಸಿದ್ದಾರೆ. ಜೀವನದಲ್ಲಿ ಯಾವ ಕೆಲಸವನ್ನಾದರೂ ಪ್ರಾಮಾಣಿಕತೆಯಿಂದ, ಶುದ್ಧತೆಯಿಂದ ಮಾಡಿದರೆ ನರಕ ಎನ್ನುವುದು ಹತ್ತಿರಕ್ಕೂ ಬರುವುದಿಲ್ಲ. ಆದರೆ ಸ್ವರ್ಗ ಎನ್ನುವುದು ನಮ್ಮ ಮುಂದೆ ಬರುತ್ತದೆ. ಆದ್ದರಿಂದ ಶರಣರ ವಚನಗಳ ಬೋಧನೆಗಳನ್ನು ಅರಿತುಕೊಂಡರೆ ಭೂಮಿ ಸ್ವರ್ಗವಾಗುತ್ತದೆ ಎಂದು ತಿಳಿಸಿದರು.



ಮೈಸೂರು ಶರಣ ಮಂಡಲಿಯು ನಟರಾಜ ಸಭಾಭವನದಲ್ಲಿ ಆಯೋಜಿಸಿದ್ದ ಬಸವ ಜಯಂತಿ, ಬಸವರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಾಟಾಳು ಶ್ರೀಗಳಿಗೆ ಗುರುವಂದನೆ ಸಲ್ಲಿಸಿ, ವಿವಿಧ ಕ್ಷೇತ್ರದ ಸಾಧಕರಿಗೆ ಬಸವರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಟರಾಜ ಶಿಕ್ಷಣ ಸಂಸ್ಥೆಯ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ ಪ್ರಧಾನ ಭಾಷಣ ಮಾಡಿ, ಆಧ್ಯಾತ್ಮದ ಮೂಲಕ ಸರ್ವರಲ್ಲೂ ಸಮಾನತೆ, ಶಾಂತಿಯನ್ನು ಬೋಧಿಸಬೇಕಾಗಿರುವ ದೇವಾಲಯಗಳು ವ್ಯಾಪಾರಿ ಕೇಂದ್ರಗಳಾಗಿ ಮಾರ್ಪಟ್ಟಿವೆ. ಸಂಪಾದನೆಯ ಪೈಪೋಟಿಯಲ್ಲಿ ಸಾಮಾಜಿಕ ಕೆಲಸವನ್ನೇ ಮರೆತಿವೆ. ಹಿರಿಯರು, ಆಳುವವರೂ ಸ್ವಾರ್ಥಕ್ಕಾಗಿ ಪರಿವರ್ತನೆಯಾಗಿರುವುದು ದುರ್ದೈವದ ಸಂಗತಿ. ಬಸವಾದಿ ಶರಣರ ಒಂದೊಂದು ವಚನಗಳು ಬದುಕಿಗೆ ದೀವಟಿಗೆ ಇದ್ದಂತೆ. ಇಂದಿನ ದಿನಮಾನದಲ್ಲಿ ವಚನಗಳನ್ನು ಪಾಲಿಸುತ್ತಿಲ್ಲ. ಯುವ ಜನರು ಮೋಸ, ಕಪಟ, ವಂಚನೆಗೆ ಒಳಗಾಗುತ್ತಿದ್ದಾರೆ. ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಿದೆ. ಇವುಗಳು ಸಮಾಜಕ್ಕೆ ಯಾವ ಸಂದೇಶವನ್ನು ಬೀರುತ್ತದೆ ಎನ್ನುವುದನ್ನು ಆತ್ಮಾವಲೋಕನ ಮಾಡಿಕೊಂಡು ಬಸವಣ್ಣನವರ ಸಮಾನತೆ, ಕಾಯಕ ತತ್ವಗಳನ್ನು ಅನುಸರಣೆ ಮಾಡಿದರೆ ಕಲ್ಯಾಣಕಾರಕ ಸಮಾಜ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಕಾರ್ಯಕ್ರಮದ ಅಂಗವಾಗಿ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರಿಗೆ 'ಬಸವರತ್ನ' ಪ್ರಶಸ್ತಿ ಪ್ರದಾನ ಮಾಡಿ, ಗುರುವಂದನೆ ಸಲ್ಲಿಸಲಾಯಿತು. ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರೊ.ಎಂ.ಕೋಮಲ, ಹೆಚ್.ಜಿ.ಪವಿತ್ರ, ಜೆ.ಬಾಪೂಜಿ, ಜಯಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಹೊಸಮಠದ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಐಎಫ್‌ಎಸ್ ಅಧಿಕಾರಿ ಆರ್.ರಾಜು ವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎಪಿಎನ್ ನಾಗೇಶ್, ಶರಣ ಮಂಡಲಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಉಪಾಧ್ಯಕ್ಷ ಎ.ಸಿ.ಜಗದೀಶ್, ಗೌರವಾಧ್ಯಕ್ಷ ಯು.ಎಸ್.ಶೇಖರ್ ಮತ್ತಿತರರು ಉಪಸ್ಥಿತರಿದ್ದರು.

> ❝ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸತ್ಯದ ಮಾರ್ಗದಲ್ಲಿ, ಜ್ಞಾನದ ಮಾರ್ಗದಲ್ಲಿ ಪ್ರಾಮಾಣಿಕತೆಯಿಂದ ನಡೆದರೆ ಸ್ವರ್ಗ ದರ್ಶನವಾಗುತ್ತದೆ. ದುಷ್ಟಕೂಟ ಕಟ್ಟಿಕೊಂಡು, ಅನ್ಯಾಯದ ಮಾರ್ಗದಲ್ಲಿ ನಡೆದರೆ ನರಕಪ್ರಾಪ್ತಿಯಾಗುತ್ತದೆ ಎಂದು ಸುಲಭವಾಗಿ ಶರಣರು ಹೇಳಿದ್ದಾರೆ. ಆದ್ದರಿಂದ ಬಸವೇಶ್ವರರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮೈಸೂರು ಅರಸರ ಪರಂಪರೆಯು ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಅನುಸರಿಸಿಕೊಂಡು ಅಭಿವೃದ್ಧಿ ಕೆಲಸ, ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದೇ ಪರಂಪರೆಯನ್ನು ಸಂಸದರಾಗಿ ಮುಂದುವರೆಸಿಕೊಂಡು ಹೋಗುತ್ತೇವೆ. ಹಿಂದಿನ ಪರಂಪರೆಗೂ ಧಕ್ಕೆಯಾಗದಂತೆ, ಮುಂದಿನ ಅಭಿವೃದ್ಧಿ ಕೆಲಸಗಳನ್ನೂ ಮಾಡುತ್ತಾ ಮೈಸೂರು ಮೈಸೂರಾಗಿಯೇ ಇರುವಂತೆ ನೋಡಿಕೊಳ್ಳುವ ಗುರುತರವಾದ ಜವಾಬ್ದಾರಿ ನಮ್ಮ ಮೇಲಿದೆ.
>
> **–ಯದುವೀರ್, ಸಂಸದ**

ಆಸ್ತಿ ತೆರಿಗೆ ಪಾವತಿಗೆ 'ಒನ್ ಟೈಂ ಸೆಟ್ಲಮೆಂಟ್' ಯೋಜನೆ ಜಾರಿಗೆ ತನ್ನಿ

ಸರ್ಕಾರಕ್ಕೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಆಗ್ರಹ

ಮೈಸೂರು, ಜು.17(ಜಿಎ)–ಆಸ್ತಿ ತೆರಿಗೆ ಪಾವತಿದಾರರ ಅನುಕೂಲಕ್ಕಾಗಿ ಒನ್ ಟೈಂ ಸೆಟ್ಲಮೆಂಟ್ ಯೋಜನೆ ಜಾರಿಗೆ ತರಬೇಕೆಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಮಹಾನಗರ ಪಾಲಿಕೆಯೂ ಹಲವಾರು ವರ್ಷಗಳಿಂದ ತೆರಿಗೆ ಪಾವತಿಸದವರಿಗಾಗಿ ಒನ್ ಟೈಂ ಸೆಟ್ಲಮೆಂಟ್ ಆಸ್ತಿ ತೆರಿಗೆ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿ ದಂಡರಹಿತ ಹಾಗೂ ಬಡ್ಡಿ ಮನ್ನಾ ವಿನಾಯಿತಿಯಡಿ, ಜು.31ರವರೆಗೆ ಕಾಲಾವಕಾಶ ನೀಡಿದೆ. ರಾಜ್ಯದ ಎರಡನೇ ಮಹಾನಗರವಾದ ಮೈಸೂರಿನ ತೆರಿಗೆದಾರಿಗೆ ಆಸ್ತಿ ತೆರಿಗೆ ಪಾವತಿಸಲು ಅನುಕೂಲ ಕಲ್ಪಿಸಬೇಕು. ಪಾಲಿಕೆಯ ಆದಾಯ ಹೆಚ್ಚಿಸಲು ಒನ್ ಟೈಂ ಸೆಟ್ಲಮೆಂಟ್‌ನ್ನು ಮೈಸೂರಿಗೂ ವಿಸ್ತರಿಸುವುದು ಅತ್ಯಗತ್ಯವಾಗಿದೆ ಎಂದರು.

ಈಗಾಗಲೇ ಮೈಸೂರಲ್ಲಿ ಶೇ.40ರಷ್ಟು ಆಸ್ತಿ ತೆರಿಗೆ ಪಾವತಿಯಾಗುತ್ತಿಲ್ಲ. ಪಾಲಿಕೆ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಅನಧಿಕೃತ ಬಡಾವಣೆ ನಿರ್ಮಾಣವಾಗಿರುವುದೇ ಮುಖ್ಯ ಕಾರಣವಾಗಿದೆ. ರೆವಿನ್ಯೂ ಬಡಾವಣೆಗಳನ್ನು ಅಕ್ರಮ ಸಕ್ರಮಗೊಳಿಸುವುದಾಗಿ ಸರ್ಕಾರಗಳು ಘೋಷಣೆ ಮಾಡಿವೆ ಹೊರತು, ಈವರೆಗೂ ಯಾವ ಸರ್ಕಾರವು ಈ ಸಮಸ್ಯೆಗಳನ್ನು ಪರಿಹರಿಸಿ ರೆವಿನ್ಯೂ ಬಡಾವಣೆಯಲ್ಲಿ ವಾಸಿಸುತ್ತಿರುವ ಜನರಿಗೆ ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಾಣ ಮಾಡದಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯವಸ್ಥಿತವಾದ ನಿವೇಶನ ಮತ್ತು ಮನೆಗಳನ್ನು ಕಲ್ಪಿಸಿಕೊಡುವ ಕೆಲಸ ಮಾಡಿದ್ದರೆ, ಈ ರೀತಿ ಅನಧಿಕೃತ ಬಡಾವಣೆಗಳು ಮೈಸೂರಿನಲ್ಲಿ ತಲೆ ಎತ್ತುತ್ತಿರಲಿಲ್ಲ. ಇಂದಿಗೂ ನರಸಿಂಹರಾಜ ಕ್ಷೇತ್ರದಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣವಾಗುತ್ತಲೇ ಇದ್ದು, ಪಾಲಿಕೆ ಮತ್ತು ಮುಡಾ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸದೇ ಮೌನ ವಹಿಸಿರುವುದು ಅಚ್ಚರಿ ಮೂಡಿಸಿದೆ ಎಂದರು.

ಈ ಹಿಂದೆ ಸರ್ಕಾರ ಅನಧಿಕೃತ ಬಡಾವಣೆಗಳಿಗೆ ಡಬ್ಬಲ್ ಟ್ಯಾಕ್ಸ್ ವಿಧಿಸುವಂತೆ ಸುತ್ತೋಲೆ ಹೊರಡಿಸಿತ್ತು. ಆದರೆ, ಇಂತಹ ಬಡಾವಣೆಯಲ್ಲಿ ಬಡ ಮತ್ತು ಮಧ್ಯಮ ವರ್ಗದವರು ಹೆಚ್ಚಾಗಿ ವಾಸಿಸುವುದರಿಂದ ನಾನು ಮೇಯರ್ ಆಗಿದ್ದಾಗ 2010–11ರಲ್ಲಿ ಸಿಂಗಲ್ ಟ್ಯಾಕ್ಸ್ ವಸೂಲಿ ಮಾಡಲು ಕೌನ್ಸಿಲ್ ಅನುಮೋದನೆ ಪಡೆದು ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ, ಇದಕ್ಕೆ ಸರ್ಕಾರ ಅನುಮತಿ ನೀಡಲಿಲ್ಲ. ಅಕ್ರಮ ಸಕ್ರಮ ಮಾಡುವ ಚಿಂತನೆಯೂ ಮಾಡಲಿಲ್ಲ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದವರ ಮತ್ತು ಮಧ್ಯಮ ವರ್ಗದವರು ಹೆಚ್ಚಾಗಿ ವಾಸಿಸುತ್ತಿರುವ ಮೈಸೂರಿನ ಬಡಾವಣೆಗಳನ್ನು ಸಕ್ರಮಗೊಳಿಸುವಲ್ಲಿ ತಕ್ಷಣವೇ ಮುಂದಾಗಬೇಕು ಹಾಗೂ ಆಸ್ತಿ ತೆರಿಗೆದಾರರಿಗೆ ವಿನಾಯಿತಿ ಕಲ್ಪಿಸುವ ಒನ್ ಟೈಂ ಸೆಟ್ಲಮೆಂಟ್ ಯೋಜನೆ ಜಾರಿಗೊಳಿಸಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುರಳಿ, ಭಾನುಪ್ರಕಾಶ್, ಪದ್ಮನಾಭ್, ಸ್ಮಾರ್ಟ್ ಮಂಜು ಉಪಸ್ಥಿತರಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ: ಹಿನಕಲ್ ಬಸವರಾಜು ಮತಯಾಚನೆ




ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ ಹಿನ್ನೆಲೆಯಲ್ಲಿ ಹಿನಕಲ್ ಬಸವರಾಜು ಅವರು ಪಿರಿಯಾಪಟ್ಟಣ, ಬೆಟ್ಟದಪುರದಲ್ಲಿ ಮತಯಾಚನೆ ಮಾಡಿದರು. ಇದೇ ವೇಳೆ ಬೆಟ್ಟದಪುರ ಮಠದ ಸ್ವಾಮೀಜಿ ಆಶೀರ್ವಾದ ಪಡೆದರು. ಈ ವೇಳೆ ಲವಕುಮಾರ್, ರಾಜಣ್ಣ, ಕೂರ್ಗ್ ಮಂಜು, ಯೋಗಾನಂದ, ರಘು, ಕುಮಾರಸ್ವಾಮಿ, ಮಂಜುನಾಥ್, ಆನಂದ್, ರವಿ ಲಾಲನಹಳ್ಳಿ, ಕೆ.ನಾಗರಾಜು, ಮಾಜಿ ಮೇಯರ್ ದಕ್ಷಿಣಾಮೂರ್ತಿ, ಡಾ.ಮಹದೇವಪ್ಪ ಎಂ.ಎಂ.ಮುಳ್ಳೂರು ರೇಚಣ್ಣ, ಮೂಡಹಳ್ಳಿ ವಿ.ಶೇಖರ್, ಧರ್ಮ ಮಂಜುನಾಥ್, ಹೆಚ್.ಎನ್.ಸರ್ವಮಂಗಳ, ರೂಪ ಸತೀಶ್, ಎಂ.ದಾಕ್ಷಾಯಿಣಿ, ಮುಖಂಡರಾದ ಎಂ.ಪ್ರದೀಪ್ ಕುಮಾರ್, ಟಿ.ಎಸ್.ಲೋಕೇಶ್, ಸಿ.ಗುರುಸ್ವಾಮಿ ದೇವಲಾಪುರ ನಟರಾಜು, ಚಿಕ್ಕಹಳ್ಳಿ ಕುಮಾರ್, ಕಾವಿಬಸಪ್ಪ ಈರಪ್ಪನಕೊಪ್ಪಲು, ಗೆಜ್ಜಗಳ್ಳಿ ಶಂಕರ್ ಡಿ.ಪಿ.ಸುರೇಶ್, ಎನ್.ಬಿ.ಶಿವಕುಮಾರ್ ನಾಗವಾಲ, ಇಮ್ಮಾವು ದಕ್ಷಿಣಾ ಮೂರ್ತಿ ಹಾಗೂ ದಾರಿಪುರ ಡಿ.ಚಂದ್ರಶೇಖರ್ ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

ಜು.20, ಡಾ.ಅಗ್ನಿಕಾ ನೃತ್ಯ ಸಮರ್ಪಣೆ

ವೈದ್ಯಕೀಯ ವಿದ್ಯಾಭ್ಯಾಸದೊಂದಿಗೆ ಭರತನಾಟ್ಯದಲ್ಲೂ ವಿದ್ವತ್ ಪರೀಕ್ಷೆಗೆ ಸಿದ್ಧತೆ

ಮೈಸೂರು,ಜು.17(ಜಿಎ)–ನಿಮಿಷಾಂಬ ನೃತ್ಯ ಶಾಲೆಯ ವಿದ್ಯಾರ್ಥಿನಿ ಹಾಗೂ ವೈದ್ಯಕೀಯ ವಿದ್ಯಾಭ್ಯಾಸ ಮಾಡಿರುವ ಡಾ.ಅಗ್ನಿಕಾ ಅಜಯ್‌ಕುಮಾರ್ ಅವರಿಂದ ಜು.20ರಂದು 5.30ಕ್ಕೆ ಜಗನ್ಮೋಹನ ಅರಮನೆಯಲ್ಲಿ ನೃತ್ಯ ಸಮರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಿಮಿಷಾಂಬ ನೃತ್ಯ ಶಾಲೆ ಮುಖ್ಯಸ್ಥ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಂತರರಾಷ್ಟ್ರೀಯ ಖ್ಯಾತಿಯ ಪಿಟೀಲು ವಾದಕ ಡಾ.ಮೈಸೂರು ನಾಗರಾಜ್, ಖ್ಯಾತ ಭರತನಾಟ್ಯ ಕಲಾವಿದೆ ವಿದುಷಿ ಅನುರಾಧ ಶ್ರೀಧರ್ ಆಗಮಿಸಲಿದ್ದಾರೆ. ಮೈಸೂರಲ್ಲಿ ಯಾರೂ ಮಾಡಿರದ ಅರ್ಧನಾರೀಶ್ವರ ನೃತ್ಯ ಪ್ರದರ್ಶನ ಮಾಡಲಿದ್ದಾರೆ. ಇದಕ್ಕಾಗಿ ಹೆಚ್ಚುವರಿಯಾಗಿ ನೂರು ಲೈಟ್ ಬಳಸಲಾಗುವುದು ಎಂದರು.

ತಮ್ಮ ಶಾಲೆಯಲ್ಲಿ ಡಾ.ಅಗ್ನಿಕಾ ಮೂರೂವರೆ ವಯಸ್ಸಿನಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದು, 9ನೇ ವಯಸ್ಸಿನಲ್ಲಿಯೇ ರಂಗಪ್ರವೇಶ ಮತ್ತು ಅದೇ ವರ್ಷ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನ ನೀಡುವ ಮೂಲಕ ಅಪಾರ ಮೆಚ್ಚುಗೆ ಪಡೆದುಕೊಂಡಿದ್ದಾರೆ. ಹೀಗೆ ದೇಶ–ವಿದೇಶದಲ್ಲಿ ಹಲವಾರು ನೃತ್ಯ ಕಾರ್ಯಕ್ರಮ ನೀಡಿದ್ದಾರೆ ಎಂದು ತಿಳಿಸಿದರು.

ನೃತ್ಯದ ಜೊತೆಗೆ ಪ್ರಸ್ತುತ ಬೆಂಗಳೂರಿನ ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಅಂತಿಮ ವರ್ಷವನ್ನು ಪೂರ್ಣಗೊಳಿಸುವುದರ ಜೊತೆಗೆ ತಮ್ಮ ಶಾಲೆಯಲ್ಲಿ ಭರತನಾಟ್ಯ ಅಭ್ಯಾಸ ಮಾಡಿ ವಿದ್ವತ್ (ಅಂತಿಮ) ಪರೀಕ್ಷೆಗೆ ಸಿದ್ಧರಾಗಿದ್ದಾರೆ. ತಾಯಿ ಭಾಗ್ಯ ಅಜಯ್‌ಕುಮಾರ್ ಮತ್ತು ಡಾ.ಬಿ.ಎಸ್.ಅಜಯ್ ಕುಮಾರ್ ಪ್ರೋತ್ಸಾಹದಿಂದ ಎರಡು ವಿಭಿನ್ನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅದ್ಭುತ ಪ್ರತಿಭೆಯಾಗಿದ್ದಾಳೆ ಎಂದರು.

ಡಾ.ಅಗ್ನಿಕಾ ಮಾತನಾಡಿ, ಬೆಂಗಳೂರಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡುವ ವೇಳೆಯೂ ಬಿಡುವು ಮಾಡಿಕೊಂಡು ಪ್ರತಿ ಶನಿವಾರ ಹಾಗೂ ಭಾನುವಾರ ಭರತನಾಟ್ಯ ತರಬೇತಿ ಪಡೆಯುತ್ತಿದ್ದು, ನಿರಂತರವಾಗಿ ನೃತ್ಯ ಮತ್ತು ವೈದ್ಯಕೀಯ ಸೇವೆಯಲ್ಲಿ ತೊಡಗಿಕೊಳ್ಳುತ್ತೇನೆ ಎಂದರು.

ನೃತ್ಯ ಸಮರ್ಪಣೆ ಕಾರ್ಯಕ್ರಮ ಮೈಸೂರಿನ ನಂತರ ಜು.27ರಂದು ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಮತ್ತು ಆ.4ರಂದು ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಡಾ.ಅಗ್ನಿಕಾ ಅಜಯ್ ಕುಮಾರ್, ಪೋಷಕರಾದ ಭಾಗ್ಯ ಅಜಯ್ ಕುಮಾರ್ ಹಾಗೂ ಡಾ.ಬಿ.ಎಸ್. ಅಜಯ್‌ಕುಮಾರ್ ಉಪಸ್ಥಿತರಿದ್ದರು.

68 ವರ್ಷಗಳ ಸುದೀರ್ಘ ಹೋರಾಟ ಸಫಲ; ಭೂ ಮಾಲೀಕನಿಗೆ ನೀಡಬೇಕಿದೆ 1061 ಕೋಟಿ ಪರಿಹಾರ!

ಮಂಡಿ: ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ನೆರ್‌ಚೌಕ್‌ನಿಂದ ವಿಚಿತ್ರ ಹಾಗೂ ಅಪರೂಪದ ಪ್ರಕರಣವೊಂದು ಬೆಳಕಿಗೆ ಬಂದಿದೆ. ಇದು ಸರ್ಕಾರವನ್ನೇ ನಡುಗಿಸುತ್ತಿದೆ. ವ್ಯಕ್ತಿಯೊಬ್ಬರಿಗೆ ಸರ್ಕಾರ ಒಂದೋ ಜಮೀನು ನೀಡಬೇಕು ಇಲ್ಲವೇ 1061 ಕೋಟಿ ಪರಿಹಾರ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಂಡಿ ಜಿಲ್ಲೆಯ ನಾರ್‌ಚೌಕ್‌ನಲ್ಲಿರುವ ವೈದ್ಯಕೀಯ ಕಾಲೇಜಿನ ಜಮೀನು ಈಗ ಖಾಸಗಿ ಭೂಮಿಯಾಗಿ ಮಾರ್ಪಟ್ಟಿದೆ. ಅದರ ಮಾಲೀಕರ ಪರವಾಗಿ ಈಗ ಎಲ್ಲಾ ಕೋರ್ಟ್ ತೀರ್ಪುಗಳು ಬಂದಿವೆ. 92 ಬಿಗಾ ಭೂಮಿಗೆ ಬದಲಾಗಿ 1,61 ಕೋಟಿ 57 ಲಕ್ಷ 11 ಸಾವಿರದ 431 ರೂ. ನೀಡುವಂತೆ ಇದರಲ್ಲಿ ಆದೇಶಿಸಲಾಗಿದೆ.

ನಾರ್‌ಚೌಕ್‌ನಲ್ಲಿರುವ ಮೀರ್ ಬಕ್ಷ್ ಅವರ ಪೂರ್ವಜರ ಭೂಮಿಯಲ್ಲಿ ರಾಜ್ಯ ಸರ್ಕಾರವು ಮಿನಿ ಸೆಕ್ರೆಟರಿಯೇಟ್, ಕೃಷಿ ಕೇಂದ್ರ, ಪಶುವೈದ್ಯಕೀಯ ಔಷಧಾಲಯ ಮತ್ತು ವೈದ್ಯಕೀಯ ಕಾಲೇಜುಗಳನ್ನು ನಿರ್ಮಿಸಿದೆ 68 ವರ್ಷ ನಡೆದ ಕಾನೂನು ಹೋರಾಟದಲ್ಲಿ ಹೈಕೋರ್ಟ್, ಸುಪ್ರೀಂಕೋರ್ಟ್ ಮೀರ್ ಬಕ್ಷ್ ಪರವಾಗಿ ತೀರ್ಪು ನೀಡಿವೆ. ಭೂಮಿಗೆ ಬದಲಾಗಿ ಬೇರೆ ಕಡೆ ಅದೇ ಮೌಲ್ಯದ ಭೂಮಿ ನೀಡುವಂತೆ ಆದೇಶಿಸಿದೆ.

ಕೆ.ಆರ್.ಕ್ಷೇತ್ರದಲ್ಲಿ 4 ಸಾವಿರ ಮನೆ ಹಂಚಿಕೆ: ಶ್ರೀವತ್ಸ ಭರವಸೆ

ಮೈಸೂರು, ಜು.17(ಎಂಟಿವೈ)– ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಸತಿಹೀನರಿಗೆ ಮುಂದಿನ ಮೂರು ವರ್ಷಗಳಲ್ಲಿ ನಾಲ್ಕು ಸಾವಿರ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಟಿ.ಎಸ್. ಶ್ರೀವತ್ಸ ಭರವಸೆ ನೀಡಿದ್ದಾರೆ.



ಮೈಸೂರು ಮಹಾನಗರಪಾಲಿಕೆ ಸಭಾಂಗಣದಲ್ಲಿ ಕೃಷ್ಣರಾಜ ಕ್ಷೇತ್ರದ ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಬುಧವಾರ ಶಾಸಕ ಟಿ.ಎಸ್.ಶ್ರೀವತ್ಸ ಮನೆಯ ಹಕ್ಕುಪತ್ರ, ಹಕ್ಕು ಖುಲಾಸೆ ಮತ್ತು ಎನ್‌ಓಸಿ ವಿತರಿಸಿದರು.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಕೃಷ್ಣರಾಜ ಕ್ಷೇತ್ರದ ಆಶ್ರಯ ಬಡಾವಣೆಯ ಫಲಾನುಭವಿಗಳಿಗೆ ಹಕ್ಕುಪತ್ರ, ಹಕ್ಕು ಖುಲಾಸೆ ಮತ್ತು ಎನ್‌ಓಸಿ ನೀಡುವ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಫಲಾನುಭವಿಗಳಾದ ಸಾವಿತ್ರಿ, ಕಮಲಮ್ಮ, ಶಿವರುದ್ರ, ಲಕ್ಷ್ಮಮ್ಮ, ಕೃಷ್ಣಮೂರ್ತಿ ಅವರಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ಕೆ.ಆರ್.ಕ್ಷೇತ್ರದಲ್ಲಿ ವಸತಿಹೀನರಿಗೆ ಆಶ್ರಯ ಯೋಜನೆ ಹಾಗೂ ಇನ್ನಿತರ ಯೋಜನೆಯಡಿ ಮನೆ ನಿರ್ಮಿಸಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಗಳು ತಮಗೆ ಮಂಜೂರಾದ ಮನೆಗಳನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡುವುದು ಹಾಗೂ ಬಾಡಿಗೆಗೆ ನೀಡದೇ ತಾವೇ ವಾಸ ಮಾಡಬೇಕು. ಮೈಸೂರಿನ ಲಲಿತಾದ್ರಿಪುರದಲ್ಲಿ ಜಿ–ಪ್ಲಸ್ ಬಹುಮಹಡಿ ಕಟ್ಟಡ ನಿರ್ಮಿಸಲಾಗುತ್ತಿದೆ. ಅಲ್ಲದೆ 1660 ಮನೆಗಳ ನಿರ್ಮಾಣಕ್ಕೆ ಶೀಘ್ರದಲ್ಲೇ ಕಾಮಗಾರಿ ಆರಂಭಿಸಲು ಉದ್ದೇಶಿಸಲಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ಫಲಾನುಭವಿಗಳಿಗಾಗಿ 395 ಮನೆಗಳ ನಿರ್ಮಾಣಕ್ಕೆ ಅನುದಾನ ಮೀಸಲಿಡಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಅಶೋಕಪುರಂನ ಕೆಲವು ಕಡೆಗಳಲ್ಲಿ ದಾಖಲೆ ಸಮಸ್ಯೆಯಾಗಿರುವುದನ್ನು ಸರಿಪಡಿಸಿ ಮನೆ ಮಂಜೂರು ಮಾಡಲಾಗುತ್ತಿದೆ. ಸ್ವಂತ ಜಾಗ ಹೊಂದಿರುವ ಬಡವರಿಗೆ ಸರ್ಕಾರದ ನೆರವಿನಿಂದ ಮನೆ ನಿರ್ಮಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು. ಮೂರು ವರ್ಷಗಳಲ್ಲಿ ಕ್ಷೇತ್ರದಲ್ಲಿ ನಾಲ್ಕು ಸಾವಿರ ಮನೆಗಳನ್ನು ಅರ್ಹರಿಗೆ ಕೊಡಿಸಲು ಉದ್ದೇಶಿಸಲಾಗಿದೆ. ಕಳೆದ ಒಂದು ವರ್ಷದ ಹಿಂದೆ ಶಾಸಕನಾಗಿ ಆಯ್ಕೆಯಾದ ಬಳಿಕ ಹಕ್ಕುಪತ್ರ, ಹಕ್ಕು ಖುಲಾಸೆ ನೀಡುತ್ತಿಲ್ಲ ಎಂದು ಕೆಲವರು ದೂರು ನೀಡಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುತ್ತಿದೆ. ಸರ್ಕಾರದ ಯೋಜನೆಗಳು ಹಳ್ಳ ಹಿಡಿಯಬಾರದು. ಬಡವರಿಗೆ ಸರ್ಕಾರದ ಕಾರ್ಯಕ್ರಮಗಳ ಸೌಲಭ್ಯ ನೀಡುವಾಗ ಹಣಕ್ಕಾಗಿ ಪೀಡಿಸಬಾರದು. ಫಲಾನುಭವಿಯಿಂದ ಯಾವುದನ್ನೂ ನಿರೀಕ್ಷೆ ಮಾಡದೆ ಕೆಲಸ ಮಾಡಬೇಕು. ಹಣ ಕೊಟ್ಟು ಪಡೆದುಕೊಂಡೆ ಎನ್ನುವಂತಾಗಬಾರದು ಎಂದು ಸಲಹೆ ನೀಡಿದರು.

ಹೆಚ್ಚುವರಿ ಆಯುಕ್ತರಾದ ಕುಸುಮ ಕುಮಾರಿ ಮಾತನಾಡಿ, ತುಂಬಾ ವರ್ಷಗಳ ಕಾಲದಿಂದಲೂ ಹಕ್ಕುಪತ್ರಗಳು ಸಿಗದೆ ಅಲೆದಾಡುತ್ತಿರುವುದನ್ನು ಗಮನಿಸಿ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅದರಂತೆ ಒಟ್ಟಿಗೆ ವಿತರಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಆಶ್ರಯ ಸಮಿತಿಯ ಜಯರಾಮ್, ಕಚೇರಿ ಸಹಾಯಕ ಉಮೇಶ್, ಮದನ್ ಹಾಜರಿದ್ದರು.

ಮೈಸೂರು ಮಿತ್ರ ಗುರುವಾರ 18 ಜುಲೈ 2024

ಪ್ರವಾಹ ಮಟ್ಟ ಮೀರಿದ ನದಿಗಳು

• ಕೊಡಗಿನಲ್ಲಿ ಮುಂದುವರೆದ ಮಳೆ ಅಬ್ಬರ • ರಸ್ತೆ ಸಂಚಾರ ಬಂದ್


ನಾಪೋಕ್ಲು–ಮೂರ್ನಾಡು ಸಂಪರ್ಕ ರಸ್ತೆ ಸಂಚಾರ ಕಡಿತಗೊಂಡಿರುವುದು.


ಶ್ರೀಮಂಗಲ–ನಾಲ್ಕೇರಿ ಸಂಪರ್ಕ ಸೇತುವೆ ಮೇಲೆ ನೀರು ಹರಿಯುತ್ತಿರುವುದು.

ಮಡಿಕೇರಿ, ಜು.17–ಕೊಡಗು ಜಿಲ್ಲಾದ್ಯಂತ ಪುನರ್ವಸು ಮಳೆ ಬುಧವಾರ ಮತ್ತಷ್ಟು ತೀವ್ರ ಸ್ವರೂಪ ಪಡೆದಿದ್ದು, ಶ್ರೀಮಂಗಲ–ನಾಲ್ಕೇರಿ ಸಂಪರ್ಕ ಸೇತುವೆ ಮೇಲೆ 4 ಅಡಿಗೂ ಅಧಿಕ ನೀರು ಹರಿಯುತ್ತಿರುವುದರಿಂದ ಸಂಚಾರ ಬಂದ್ ಆಗಿದೆ.

ಭಾಗಮಂಡಲ ತ್ರಿವೇಣಿ ಸಂಗಮ ಸತತ 2ನೇ ದಿನವೂ ಕಾವೇರಿ ನದಿ ಪ್ರವಾಹದಲ್ಲಿ ಮುಳುಗಿದ್ದು, ಭಾಗಮಂಡಲ–ಅಯ್ಯಂಗೇರಿ ರಸ್ತೆ ಜಲಾವೃತವಾಗಿದೆ. ಇತ್ತ ಮಡಿಕೇರಿ–ಭಾಗಮಂಡಲ ರಸ್ತೆ ಮೇಲೂ ನೀರು ಹರಿಯುತ್ತಿದ್ದು, ಭಾಗಮಂಡಲದಲ್ಲಿ ಪ್ರವಾಹ ಉಂಟಾದರೂ ಮೇಲ್ಸೇತುವೆ ಮೂಲಕ ಜನ ಹಾಗೂ ವಾಹನ ಸಂಚಾರ ಎಂದಿನಂತೆ ಇತ್ತು. ದಕ್ಷಿಣ ಕೊಡಗಿನಲ್ಲೂ ಮಳೆ ಅಬ್ಬರಿಸುತ್ತಿದ್ದು, ಲಕ್ಷ್ಮಣ ತೀರ್ಥ ನದಿಯಲ್ಲಿ ಪ್ರವಾಹ ಏರ್ಪಟ್ಟಿದೆ.

ಕೊಡಗಿನಲ್ಲಿ ಮುಂದಿನ ಎರಡು ದಿನ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಈಗಾಗಲೇ ಮಳೆಯಿಂದ ಜನ ತತ್ತರಿಸಿದ್ದು, ಇದೀಗ ಮತ್ತೆ ರೆಡ್ ಅಲರ್ಟ್ ಘೋಷಿಸಿರುವುದು ಆತಂಕ ಮೂಡಿಸಿದೆ. ಜಿಲ್ಲೆಯ ಎಲ್ಲಾ ನದಿಗಳು ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ಕೆಲವೆಡೆ ಪ್ರವಾಹ ತಲೆದೋರಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ರಸ್ತೆ ಸಂಚಾರ ಅಸ್ತವ್ಯಸ್ತವಾಗಿದೆ. ಇದೇ ರೀತಿ ಮಳೆ ಮುಂದುವರೆದಲ್ಲಿ ನದಿ ಪಾತ್ರದ ಜನವಸತಿ ಪ್ರದೇಶಗಳಿಗೂ ಪ್ರವಾಹ ಉಂಟಾಗುವ ಸಾಧ್ಯತೆ ಹೆಚ್ಚಿದೆ.

ಮುಂದುವರೆದ ಮಳೆ ಆರ್ಭಟ: ನಾಪೋಕ್ಲು ವ್ಯಾಪ್ತಿ ಮಳೆ ಆರ್ಭಟ ಮುಂದುವರೆದಿದ್ದು, ಈ ಭಾಗದಲ್ಲಿ ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕೆಲ ಕಡೆಗಳಲ್ಲಿ ರಸ್ತೆಮುಳುಗಿ ಸಂಚಾರ ಬಂದ್ ಆಗಿದೆ ಇನ್ನೆರಡು ದಿನ ಮಳೆ ಮುಂದುವರೆದರೆ ನಾಪೋಕ್ಲುವಿನ ಎಲ್ಲಾ ಸಂಪರ್ಕ ಕಡಿತಗೊಳ್ಳಲಿದೆ.

ಜಲಾವೃತಗೊಂಡ ರಸ್ತೆಗಳಲ್ಲಿ ನಾಪೋಕ್ಲು ಪೊಲೀಸರು ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರು ಓಡಾಡದಂತೆ ಕ್ರಮ ಕೈಗೊಂಡಿದ್ದಾರೆ. ನಾಪೋಕ್ಲು–ಮೂರ್ನಾಡು ಸಂಪರ್ಕ ರಸ್ತೆಯ ಬೊಳಿಬಾಣೆ ಹಾಗೂ ನಾಪೋಕ್ಲು ಗ್ರಾಪಂನ ಚೆರಿಯಪರಂಬು ಕಲ್ಲುಮೊಟ್ಟೆ ಗ್ರಾಮದ ಸಂಪರ್ಕ ಮುಖ್ಯರಸ್ತೆಯ ಸಂಚಾರ ಸಂಪೂರ್ಣ ಕಡಿತಗೊಂಡಿದ್ದು, ಈ ಭಾಗದ ಜನರಲ್ಲಿ ಪ್ರವಾಹದ ಭೀತಿ ಎದುರಾಗಿದೆ.

ಚೆರಿಯಪರಂಬು ಗ್ರಾಮದಲ್ಲಿ 300ರಿಂದ 400ಕ್ಕೂ ಅಧಿಕ ಕುಟುಂಬಗಳಿದ್ದು, ಪ್ರವಾಹ ಸಂಕಷ್ಟ ಅನುಭವಿಸುವಂತಾಗಿದೆ. ಅಲ್ಲದೆ, ನದಿ ದಡದ ಕುಟುಂಬಗಳಿಗೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಈಗಾಗಲೇ ಕಂದಾಯ ಇಲಾಖೆ ನೋಟಿಸ್ ನೀಡಿದೆ. ನಾಪೋಕ್ಲು–ಮೂರ್ನಾಡು ಸಂಪರ್ಕ ರಸ್ತೆ ಸಂಚಾರ ಕಡಿತಗೊಂಡಿರುವುದರಿಂದ ವಾಹನ ಸವಾರರು ಕೊಟ್ಟಮುಡಿ, ಕೇಮಾಟ್, ಹೊದವಾಡ, ಕುಯ್ಯಂಗೇರಿ, ಹೊದ್ದೂರು ಮಾರ್ಗವಾಗಿ ಬಳಸಿ ಮೂರ್ನಾಡಿಗೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬಿ.ಬಾಡಗದಲ್ಲಿ ಮನೆ ಕುಸಿತ: ನಿರಂತರ ಮಳೆಯಿಂದಾಗಿ ಭಾಗಮಂಡಲ ಹೋಬಳಿಯ ಬಿ.ಬಾಡಗ ಗ್ರಾಮದ ಕೆ.ಯು.ಉಲ್ಲಾಸ ಅವರ ಮನೆ ಸಂಪೂರ್ಣ ಕುಸಿದಿದೆ. ಶನಿವಾರಸಂತೆ ಮಾಲಂಬಿ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಂಚುಗಳು ಗಾಳಿಗೆ ಹಾರಿ ಹೋಗಿವೆ. ಈ ಭಾಗದಲ್ಲಿ ಕಳೆದ ಒಂದು ವಾರದಿಂದ ಮಳೆ ಸುರಿಯುತ್ತಿದ್ದು, ಶಾಲೆಗೆ ರಜೆ ನೀಡಿದ್ದ ಹಿನ್ನೆಲೆಯಲ್ಲಿ ಅನಾಹುತ ತಪ್ಪಿದಂತಾಗಿದೆ. ಕೊಡ್ಲಿಪೇಟೆ ಹೋಬಳಿಯ ಬೆಂಬಳೂರು ಗ್ರಾಮದ ಪಾರ್ವತಿ ದೊಡ್ಡಯ್ಯ ಅವರ ಮನೆಯ ಗೋಡೆಗಳು ಕುಸಿದು ಮನೆಗೆ ತೀವ್ರ ಹಾನಿಯಾಗಿದೆ. ಮಳೆ ಹಾನಿ ಸ್ಥಳಗಳಿಗೆ ಕಂದಾಯ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ.

ಇಂದು ಶಾಲಾ–ಕಾಲೇಜಿಗೆ ರಜೆ

ಕೊಡಗಿನಲ್ಲಿ ಬಿರುಸಿನ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಜು.18ರಂದು ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಕೊಪ್ಪ ಸೇತುವೆ ಬಳಿ ನೀರಿನ ಮಟ್ಟ ಏರಿಕೆ


ಕುಶಾಲನಗರದ ಕೊಪ್ಪ ಸೇತುವೆ ಬಳಿ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿರುವುದು.

ಮಡಿಕೇರಿ, ಜು.17–ಕಾವೇರಿ ಹಾಗೂ ಹಾರಂಗಿ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಕುಶಾಲನಗರದ ಕೊಪ್ಪ ಸೇತುವೆ ಬಳಿ ಕಾವೇರಿ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದೆ.

ಇದರಿಂದ ಕುಶಾಲನಗರದ ನದಿ ತಟದ ನಿವಾಸಿಗಳಲ್ಲಿ ಆತಂಕ ಮನೆಮಾಡಿದೆ. ಈಗಾಗಲೇ ನದಿ ತಟದ ಪ್ರದೇಶಗಳು ಜಲಾವೃತಗೊಳ್ಳಲು ಆರಂಭಿಸಿವೆ. ಹಾರಂಗಿ ಜಲಾಶಯದಿಂದ ಅಪಾರ ಪ್ರಮಾಣದ ನೀರನ್ನು ಬಿಡುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿದೆ. ಕೊಡಗಿನಲ್ಲಿ ಮತ್ತೆ ಕೆಲ ದಿನ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಮುಂದಿನ ದಿನಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗದಿರಲಿ ಎಂದು ನದಿ ದಡದ ನಿವಾಸಿಗಳು ಪ್ರಾರ್ಥಿಸುತ್ತಿದ್ದಾರೆ.

ರಿವರ್ ರ್‍ಯಾಫ್ಟಿಂಗ್ ಸ್ಥಗಿತ: ಕುಶಾಲನಗರ ಬಳಿಯ ದುಬಾರೆ ಪ್ರವಾಸಿ ತಾಣದಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದ್ದು, ಪರಿಣಾಮ ರಿವರ್ ರ್‍ಯಾಫ್ಟಿಂಗ್ ಸ್ಥಗಿತಗೊಳಿಸಲಾಗಿದೆ. ದುಬಾರೆಗೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ತಾತ್ಕಾಲಿಕ ನಿರ್ಬಂಧ ಹೇರಲಾಗಿದೆ. ಈ ಹಿನ್ನೆಲೆಯಲ್ಲಿ ರ್‍ಯಾಫ್ಟ್‌ಗಳು ಮತ್ತು ಅರಣ್ಯ ಇಲಾಖೆಯ ದೋಣಿಗಳನ್ನು ದಡದಲ್ಲಿ ನಿಲ್ಲಿಸಲಾಗಿದೆ.

ಹಾರಂಗಿ: ಹಾರಂಗಿ ಜಲಾಶಯ ಗರಿಷ್ಠ 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ ಜಲಾಶಯದಲ್ಲಿ 2852.7 ಅಡಿ ಸಂಗ್ರಹವಿದೆ. ಬುಧವಾರ ಸಂಜೆ ವೇಳೆ ಜಲಾಶಯಕ್ಕೆ 11,236 ಕ್ಯುಸೆಕ್ ಒಳಹರಿವು ಬರುತ್ತಿದ್ದು, 4 ಕ್ರೆಸ್ಟ್ ಗೇಟ್‌ಗಳ ಮೂಲಕ 10 ಸಾವಿರ ಕ್ಯುಸೆಕ್ ಹೊರ ಬಿಡಲಾಗುತ್ತಿದೆ.

ರಸ್ತೆಯಲ್ಲಿ ಗುಂಡಿ ಮುಚ್ಚಿದ ಗ್ರಾಮಸ್ಥರು


ಮೇಕೇರಿ ಸರ್ಕಾರಿ ಶಾಲೆ ಮುಂಭಾಗದ ರಸ್ತೆ ಗುಂಡಿಗಳನ್ನು ಗ್ರಾಮಸ್ಥರು ಮುಚ್ಚಿದರು.

ಮಡಿಕೇರಿ, ಜು.17–ಮೇಕೇರಿ ಸರ್ಕಾರಿ ಪ್ರಾಥಮಿಕ ಶಾಲೆ ಮುಂಭಾಗ ರಸ್ತೆ ಸಂಪೂರ್ಣವಾಗಿ ಹದಗೆಟ್ಟು ವಾಹನ ಹಾಗೂ ಜನರ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ಗ್ರಾಮಸ್ಥರೇ ಗುಂಡಿ ಬಿದ್ದ ರಸ್ತೆಯನ್ನು ಮಣ್ಣು ಹಾಕಿ ಮುಚ್ಚಿದರು.


ಹಲವು ತಿಂಗಳಿಂದ ಗುಂಡಿ ಬಿದ್ದ ರಸ್ತೆ ತುಂಬಾ ಮಳೆ ನೀರು ನಿಂತು ಸಂಚಾರಕ್ಕೆ ಕಷ್ಟಕರವಾಗಿತ್ತು. ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ, ರಸ್ತೆಯಲ್ಲಿ ನೀರು ತುಂಬಿ ಶಾಲಾ ವಿದ್ಯಾರ್ಥಿಗಳ ಓಡಾಟಕ್ಕೆ ತೊಂದರೆಯಾಗಿತ್ತು. ಮೇಕೇರಿ ಗ್ರಾಪಂ ಸದಸ್ಯ ಎಂ.ಯು. ಹನೀಫ್ ನೇತೃತ್ವದಲ್ಲಿ ಗ್ರಾಮಸ್ಥರು ಗುಂಡಿಗಳನ್ನು ಮುಚ್ಚಿದರು.

ರಸ್ತೆಯ ಎರಡೂ ಬದಿಯಲ್ಲಿ ನೀರು ಸರಾಗವಾಗಿ ಹರಿಯಲು ಚರಂಡಿ ವ್ಯವಸ್ಥೆ ಮಾಡಿದರು. ಗ್ರಾಮಸ್ಥರ ಈ ಕಾರ್ಯಕ್ಕೆ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಪ್ರಶಂಸೆ ವ್ಯಕ್ತಪಡಿಸಿದರು. ಲೋಕೋಪಯೋಗಿ ಇಲಾಖೆಗೆ ಸೇರಿದ ಈ ರಸ್ತೆಯಲ್ಲಿ ಗುಂಡಿ ಬಿದ್ದು ವಾಹನ ಮತ್ತು ವಿದ್ಯಾರ್ಥಿಗಳ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಮಕ್ಕಳ ಹಿತದೃಷ್ಟಿಯಿಂದ ಗ್ರಾಮಸ್ಥರೊಂದಿಗೆ ಗುಂಡಿ ಮುಚ್ಚಿ, ಚರಂಡಿ ವ್ಯವಸ್ಥೆ ಮಾಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ಶೀಘ್ರ ಅಭಿವೃದ್ಧಿಪಡಿಸುವಂತೆ ಎಂ.ಯು.ಹನೀಫ್ ಒತ್ತಾಯಿಸಿದರು.

ಸ್ಥಳೀಯರಾದ ಎಂ.ಯು.ರಫೀಕ್, ಟಿ.ಆರ್.ಜಗದೀಶ್, ಕೆ.ಟಿ.ವಿಜಯ, ರಾಧಾಕೃಷ್ಣ, ಸ್ಟೀಫನ್, ರೆಹಮಾನ್, ಗ್ರಾಪಂ ವಾಟರ್‌ಮನ್ ಸೀತಾರಾಮ್, ಬಿಲ್ ಕಲೆಕ್ಟರ್ ಶ್ರೇಯಸ್ ಮತ್ತಿತರರು ಇದ್ದರು.

11 ಮನೆ, 110 ವಿದ್ಯುತ್ ಕಂಬಗಳಿಗೆ ಹಾನಿ

ಮಡಿಕೇರಿ, ಜು.17–ಕಳೆದ 24 ಗಂಟೆ ಅವಧಿಯಲ್ಲಿ ಸುರಿದ ಮಳೆಗೆ ಜಿಲ್ಲೆಯಲ್ಲಿ 11 ಮನೆಗಳಿಗೆ ಹಾನಿಯಾಗಿದೆ. ಈ ಪೈಕಿ 1 ಮನೆ ಸಂಪೂರ್ಣವಾಗಿ ಕುಸಿದಿದ್ದು, 5 ಮನೆಗಳಿಗೆ ತೀವ್ರ ಹಾನಿ ಹಾಗೂ ಉಳಿದ 5 ಮನೆಗಳು ಭಾಗಶಃ ಜಖಂಗೊಂಡಿವೆ. ಒಂದು ಭಾಗದಲ್ಲಿ ಅಲ್ಪಪ್ರಮಾಣದಲ್ಲಿ ಭೂ ಕುಸಿತವಾಗಿದ್ದು, 110 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ರಸ್ತೆಗೆ ಮರ ಬಿದ್ದ 2 ಪ್ರಕರಣಗಳು ವರದಿಯಾಗಿದ್ದು, ಮರಗಳನ್ನು ತೆರವು ಮಾಡಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.



ಸ್ವಯಂ ಘೋಷಣಾ ಪತ್ರ ನೀಡಲು ಮನವಿ

ಮಡಿಕೇರಿ, ಜು.17–ಸರ್ಕಾರದ ಮಹತ್ತರ ಗ್ಯಾರಂಟಿ ಯೋಜನೆಯ ಯುವನಿಧಿ ಫಲಾನುಭವಿಗಳು ಸ್ವಯಂ ಘೋಷಣಾ ಪತ್ರ ನೀಡುವಂತೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ತಿಳಿಸಿದೆ.

ಯುವನಿಧಿ ಯೋಜನೆಯಡಿ ಸೇವಾಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಿರುವ ಕೊಡಗು ಜಿಲ್ಲೆಯ ಅರ್ಹ ಫಲಾನುಭವಿಗಳು ತಮ್ಮ ವಿದ್ಯಾರ್ಹತೆಗೆ ಸಂಬಂಧಿಸಿದ ಮೂಲ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ ಇತರ ದಾಖಲಾತಿಗಳೊಂದಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ (ರೂಂ.ನಂ–22, ಎರಡನೇ ಮಹಡಿ, ಜಿಲ್ಲಾಡಳಿತ ಭವನ ಕಟ್ಟಡ, ಮಡಿಕೇರಿ) ಈ ವಿಳಾಸಕ್ಕೆ ಹಾಜರಾಗಬೇಕು.

ಫಲಾನುಭವಿಗಳು ಪ್ರತಿ ತಿಂಗಳ 25ರೊಳಗೆ ವ್ಯಾಸಂಗ ಹಾಗೂ ಉದ್ಯೋಗ ಹೊಂದಿಲ್ಲದಿರುವ ಕುರಿತು ಸ್ವಯಂ ಘೋಷಣಾ ಪತ್ರ ನೀಡಬೇಕು. ಮಾಹಿತಿಗೆ ಸಹಾಯವಾಣಿ ಸಂಖ್ಯೆ: 1800–599 9918ಕ್ಕೆ ಕರೆ ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮೊ.ಸ: 8296020826/ 8123312319 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ರೇಖಾ ಗಣಪತಿ ತಿಳಿಸಿದ್ದಾರೆ.

ಕಾರು, ಆಟೋ ಡಿಕ್ಕಿ: ಪ್ರಯಾಣಿಕರಿಗೆ ಸಣ್ಣಪುಟ ಗಾಯ

ಸುಂಟಿಕೊಪ್ಪ, ಜು.17–ಕಾರು ಮತ್ತು ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಆಟೋದಲ್ಲಿದ್ದ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾದ ಘಟನೆ ಕೆದಕಲ್ ಬಳಿಯ 7ನೇ ಮೈಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ನಡೆದಿದೆ.

ಕಂಬಿಬಾಣೆಯಿಂದ ಮಡಿಕೇರಿ ಕಡೆಗೆ ಹೋಗುತ್ತಿದ್ದ ಆಟೋ ಮತ್ತು ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಆಟೋ ಸಂಪೂರ್ಣ ಜಖಂಗೊಂಡಿದ್ದು, ಆಟೋ ಚಾಲಕ ಕಂಬಿಬಾಣೆಯ ಸಚಿನ್ ಮತ್ತು ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.


ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸ್ ಠಾಣೆ ಪಿಎಸ್‌ಐ ಶ್ರೀಧರ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು.

ಸಂಚಾರ ನಿಯಮ ಪಾಲಿಸಿ, ಅಪಘಾತ ತಡೆಯಿರಿ


ಕೊಳ್ಳೇಗಾಲದಲ್ಲಿ ನಡೆದ ರಸ್ತೆ ಸಂಚಾರ ಸುರಕ್ಷತಾ ಜಾಗೃತಿ ಕಾರ್ಯಕ್ರಮದಲ್ಲಿ ಎಸ್ಪಿ ಕವಿತಾ ಮಾತನಾಡಿದರು.

ಕೊಳ್ಳೇಗಾಲ, ಜು.17–ಸಂಚಾರ ನಿಯಮಗಳ ಪಾಲನೆಯಿಂದ ಅಪಘಾತಗಳನ್ನು ತಡೆಯಬಹುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸಲಹೆ ನೀಡಿದರು.

ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಸಂಚಾರ ಮತ್ತು ರಸ್ತೆ ಸುರಕ್ಷತೆ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸದಾ ಜನರ ನಡುವೆ ಇರುವ ಆಟೋ ಚಾಲಕರು ಒಂದು ರೀತಿ ಆರಕ್ಷಕರೇ ಆಗಿದ್ದಾರೆ. ಹಾಗಾಗಿ ಎಲ್ಲರೂ ಒಗ್ಗೂಡಿ ರಸ್ತೆ ಸುರಕ್ಷತೆ ಕೆಲಸ ಮಾಡೋಣ. ರಸ್ತೆಯಲ್ಲಿ ರೋಡ್ ರೋಮಿಯೋಗಳ ಕಾಟ, ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಅಕ್ರಮ ಚಟುವಟಿಕೆಗಳು ನಡೆದರೆ ಪೊಲೀಸರಿಗೆ ವಾಹನ ಸವಾರರು, ಮಾಲೀಕರು, ಚಾಲಕರು ಮಾಹಿತಿ ನೀಡಿ. ಅವರ ಹೆಸರನ್ನು ಗೌಪ್ಯವಾಗಿಡಲಾಗುವುದು. ಇಲಾಖೆ ಜೊತೆ ಸಹಕರಿಸಿ ಕಾನೂನು ಗೌರವಿಸಿದರೆ, ಸದಾ ಪೊಲೀಸ್ ಇಲಾಖೆ ನಿಮ್ಮ ಜೊತೆಗಿರುತ್ತೆ ಎಂದರು.

ಖಾಕಿ ತೊಡುವುದು ಹೆಮ್ಮೆಯ ಸಂಗತಿ. ಆದ್ದರಿಂದ ಆಟೋ ಹಾಗೂ ಇನ್ನಿತರೆ ವಾಹನಗಳ ಚಾಲಕರು ಖಾಕಿ ಸಮವಸ್ತ್ರ ಧರಿಸಿ, ಹೆಮ್ಮೆಯಿಂದ ಕರ್ತವ್ಯ ನಿರ್ವಹಿಸುವ ಜೊತೆಗೆ ರಸ್ತೆ ಸಂಚಾರ ನಿಯಮ ಹಾಗೂ ಪ್ರಯಾಣಿಕರ ಸುರಕ್ಷತೆಯನ್ನು ಕಾಪಾಡಬೇಕು ಎಂದು ತಿಳಿಸಿದರು.

ಡಿವೈಎಸ್ಪಿ ಧರ್ಮೇಂದ್ರ ಮಾತನಾಡಿ, ಪ್ಯಾಸೆಂಜರ್ ಆಟೋಗಳಲ್ಲಿ ನಿಗದಿತ ಪ್ರಯಾಣಿಕರಿಗಿಂತಲೂ ಹೆಚ್ಚು ಜನರನ್ನು ಕರೆದುಕೊಂಡು ಹೋಗಲಾಗುತ್ತಿದೆ. ಈ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಕೆಲವರು ಅಪಾಯದ ಸ್ಥಿತಿಯಲ್ಲಿ ಶಾಲಾ ಮಕ್ಕಳನ್ನು ಆಟೋದಲ್ಲಿ ಕರೆದುಕೊಂಡು ಹೋಗುತ್ತಾರೆ, ಇದು ಸರಿಯಲ್ಲ, ಕಾನೂನು ಪಾಲಿಸಬೇಕು ಎಂದರು.

ಅಕ್ರಮ ಮದ್ಯ ವಿರುದ್ಧ ಕ್ರಮಕ್ಕೆ ಒತ್ತಾಯ


ಅಕ್ರಮ ಮದ್ಯದ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿ ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಜು.17–ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟದ ವಿರುದ್ಧ ಕ್ರಮ ಜರುಗಿಸಬೇಕೆ ಎಂದು ಒತ್ತಾಯಿಸಿ ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ಅಬಕಾರಿ ಉಪ ಆಯುಕ್ತ ನಾಗಶಯನ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಕೆಲವರು ಸಿಎಲ್–7 ಲೈಸನ್ಸ್ ಇಟ್ಟುಕೊಂಡು ಹೋಟೆಲ್ ಹಾಗೂ ಡಾಬಾಗಳಲ್ಲಿ ರಾಜಾರೋಷವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಇಂತಹ ಹೋಟೆಲ್ ಹಾಗೂ ಡಾಬಾಗಳ ಮೇಲೆ ದಾಳಿ ನಡೆಸಿ ಕ್ರಮ ವಹಿಸಬೇಕು. ಅಕ್ರಮ ಮದ್ಯ ಮಾರಾಟದ ಬಗ್ಗೆ ಸಾರ್ವಜನಿಕರಿಂದ ದೂರುಗಳಿವೆ. ಇದರಿಂದ ಸರ್ಕಾರಕ್ಕೆ ತೆರಿಗೆ ವಂಚಿಸಲಾಗುತ್ತಿದೆ. ಇದರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ನಗರದ ಹೊರವಲಯದ ಡಾಬಾ, ಕೆಲ ರೆಸಾರ್ಟ್ ಮತ್ತು ಕ್ಲಬ್‌ಗಳಲ್ಲಿ ನಿತ್ಯ ರಾಜಾರೋಷವಾಗಿ ಅಕ್ರಮವಾಗಿ ಮದ್ಯ ಸರಬರಾಜು ಮಾಡಲಾಗುತ್ತಿದೆ. ಸಿಎಲ್–2 ಸನ್ನದ್ದುಗಳಲ್ಲಿ ಮದ್ಯವನ್ನು ಚಿಲ್ಲರೆ ಹಾಗೂ ಎಂಆರ್‌ಪಿ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದು, ಆ ಬ್ಯಾಚ್ ನಂಬರ್‌ಗಳ ಮದ್ಯ ಡಾಬಾಗಳಲ್ಲಿ ಸರಬರಾಜಾಗುತ್ತಿದೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಇದರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಇದೇ ವೇಳೆ ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜು, ಚಾಮುಲ್ ಮಾಜಿ ನಿರ್ದೇಶಕ ಕಿಲಗೆರೆ ಬಸವರಾಜು ಇದ್ದರು.

ಕಾಡಂಚಿನ ಗ್ರಾಮಗಳ ಸಮಸ್ಯೆ ಪರಿಹಾರಕ್ಕೆ ಆದ್ಯತೆ

● ಸಂಸದ ಸುನೀಲ್ ಬೋಸ್ ಭರವಸೆ ● ಹನೂರಲ್ಲಿ ಮತದಾರರ ಕೃತಜ್ಞತೆ ಸಭೆ

ಹನೂರು, ಜು.17–ಕೇಂದ್ರ ಸರ್ಕಾರದಿಂದ ಅರಣ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅನುದಾನ ಬರಲಿದ್ದು, ಹನೂರು ಕ್ಷೇತ್ರದ ಕಾಡಂಚಿನ ಜನರ ಸಮಸ್ಯೆಗೆ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇನೆ ಎಂದು ಸಂಸದ ಸುನೀಲ್ ಬೋಸ್ ಭರವಸೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮತದಾರರ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಅರಣ್ಯ ಅಧಿಕಾರಿಗಳು ರೈತರಿಗೆ ಕಿರುಕುಳ ನೀಡುತ್ತಿರುವ ಬಗ್ಗೆ ಹಲವಾರು ದೂರು ಬಂದಿದೆ. ಮುಂದಿನ ದಿನಗಳಲ್ಲಿ ಮಾಜಿ ಶಾಸಕ ಆರ್.ನರೇಂದ್ರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸಮಸ್ಯೆ ಬಗೆಹರಿಸಲಾಗುವುದು ಎಂದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮತದಾರರು ನನಗೆ 1.80 ಲಕ್ಷ ಮತಗಳ ಅಂತರದಿಂದ ಐತಿಹಾಸಿಕ ಗೆಲುವು ತಂದುಕೊಟ್ಟಿದ್ದಾರೆ. ಅಲ್ಲದೆ, ಹನೂರು ವಿಧಾನಸಭೆ ಕ್ಷೇತ್ರದಲ್ಲಿ 37 ಸಾವಿರ ಮತಗಳ ಅಂತರ ನೀಡುವ ಮೂಲಕ ನನ್ನ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಆರ್.ನರೇಂದ್ರ ಮಾತನಾಡಿ, 40 ವರ್ಷಗಳಿಂದ ಹನೂರು ಕ್ಷೇತ್ರದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ವ್ಯತ್ಯಾಸವಾದರೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಹೆಚ್ಚಿನ ಮತ ನೀಡುತ್ತಿದ್ದಾರೆ. ಇದು ಕಾಂಗ್ರೆಸ್ಸಿನ ಭದ್ರಕೋಟೆ ಎಂಬುವುದು ಮತ್ತೊಮ್ಮೆ ಸಾಬೀತಾಗಿದೆ. ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಇದ್ದಾರೆ. ಆದರೆ, ಹನೂರು ಕ್ಷೇತ್ರದಲ್ಲಿ ಬೇರೆ ಪಕ್ಷದ ಶಾಸಕರು ಇರುವುದರಿಂದ ಹೆಚ್ಚಿನ ಅನುದಾನ ದೊರೆಯುತ್ತಿಲ್ಲ. ಈ ನಿಟ್ಟಿನಲ್ಲಿ ಸಂಸದರ ನಿಧಿಯಿಂದ ಪ್ರತಿವರ್ಷ ಹನೂರು ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವ ಮೂಲಕ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕರ ಮನವಿ ಸಲ್ಲಿಕೆ: ಸಂಸದರಾಗಿ ಆಯ್ಕೆಯಾದ ನಂತರ ಹನೂರು ಪಟ್ಟಣಕ್ಕೆ ಮೊದಲ ಬಾರಿಗೆ ಆಗಮಿಸಿದ ಸುನೀಲ್ ಬೋಸ್ ಹನೂರು ಕ್ಷೇತ್ರದ ಜನರಿಂದ ಅಹವಾಲು ಸ್ವೀಕರಿಸಿದರು. ಕೆಲವೊಂದು ಸಮಸ್ಯೆಗಳಿಗೆ ಸ್ಥಳದಲ್ಲಿ ದೂರವಾಣಿ ಮುಖಾಂತರ ಬಗೆಹರಿಸಿದರೆ, ಕೆಲ ಮನವಿಗಳು ಸರ್ಕಾರ ಮಟ್ಟದಲ್ಲಿ ಆಗಬೇಕಾಗಿರುವುದರಿಂದ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು.


ಹನೂರಿನ ಅಂಬೇಡ್ಕರ್ ಭವನದಲ್ಲಿ ನಡೆದ ಮತದಾರರ ಕೃತಜ್ಞತಾ ಸಭೆಯನ್ನು ಸಂಸದ ಸುನೀಲ್ ಬೋಸ್, ಮಾಜಿ ಶಾಸಕ ಆರ್.ನರೇಂದ್ರ ಉದ್ಘಾಟಿಸಿದರು.

ಕಾಮಗಾರಿಗೆ ಆದ್ಯತೆ: ಮನವಿ ಸ್ವೀಕರಿಸಿ ಮಾತನಾಡಿದ ಸಂಸದರು, ರಾಜ್ಯದಲ್ಲಿ ನಮ್ಮದೇ ಸರ್ಕಾರ ಹಾಗೂ ನಮ್ಮ ತಂದೆಯವರೇ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿರುವುದರಿಂದ ಹೆಚ್ಚಿನ ಅನುದಾನ ತಂದು ಅಭಿವೃದ್ಧಿಪಡಿಸುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಮರಿಸ್ವಾಮಿ, ಕೆಪಿಸಿಸಿ ಸದಸ್ಯ ಬಸವರಾಜು, ಚಾಮುಲ್ ನಿರ್ದೇಶಕರಾದ ಶಾಹುಲ್ ಅಹಮ್ಮದ್, ನಂಜುಂಡಸ್ವಾಮಿ, ಪಪಂ ಉಪಾಧ್ಯಕ್ಷ ಗಿರೀಶ್, ಸಂಪತ್, ಸುದೇಶ್, ಗ್ರಾಪಂ ಅಧ್ಯಕ್ಷ ಇಗ್ನೇಶಿ ಮುತ್ತು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮುಕುಂದವರ್ಮ, ಈಶ್ವರ್ ಹಾಜರಿದ್ದರು.

ಪ್ರತಿಭಾ ಪುರಸ್ಕಾರ, ಪದಾಧಿಕಾರಿಗಳ ಪದಗ್ರಹಣ


ಚಾಮರಾಜನಗರದಲ್ಲಿ ಆರಾಧ್ಯ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಜು.17–ಆರಾಧ್ಯ ಟ್ರಸ್ಟ್‌ನ ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬುಧವಾರ ನಗರದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಹಾಗೂ ಸಮುದಾಯದ ಕ್ರೀಡಾಪಟುಗಳಾದ ವಿಶ್ವೇಶ್ವರ ಆರಾಧ್ಯ, ಆಕಾಶ್ ಆರಾಧ್ಯ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್‌ನ ನೂತನ ಅಧ್ಯಕ್ಷ ರಾಮಾರಾಧ್ಯ ಅಧಿಕಾರ ಸ್ವೀಕರಿಸಿದರು. ನಿಕಟಪೂರ್ವ ಅಧ್ಯಕ್ಷ ವಿಶ್ವಾರಾಧ್ಯ ಅವರಿಗೆ ಬೀಳ್ಕೊಡಲಾಯಿತು.

ಮೈಸೂರಿನ ನಾಗಭೂಷಣ ಆರಾಧ್ಯ ಮಾತನಾಡಿ, ಶಿಕ್ಷಣಕ್ಕೆ ಸಮುದಾಯದವರು ಒತ್ತು ನೀಡಬೇಕು. ಯಶಸ್ಸು ತಾನಾಗಿಯೇ ಒಲಿಯುವುದಿಲ್ಲ. ಅದಕ್ಕಾಗಿ ಪರಿಶ್ರಮ ಅಗತ್ಯ. ಸೋಲು ಸಾಮಾನ್ಯ. ಆದರೆ, ಮರಳಿ ಯತ್ನಿಸಿದರೆ ಯಶಸ್ಸು ಕಷ್ಟವೇನಲ್ಲ. ಟ್ರಸ್ಟ್ ವತಿಯಿಂದ ಪ್ರತಿಭಾನ್ವಿತರನ್ನು ಉತ್ತೇಜಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ಆರ್.ಐಶ್ವರ್ಯಾ ಮಾತನಾಡಿ, ಜೀವನದಲ್ಲಿ ಗುರಿ ಮತ್ತು ಗುರುವಿನ ಅಗತ್ಯ ತುಂಬ ಇದೆ ಗುರಿ ಸಾಧನೆಯ ಕನಸು ಕಾಣಬೇಕು. ಅಡೆತಡೆಗಳನ್ನು ಮೆಟ್ಟಿ ಮುನ್ನಗ್ಗಬೇಕು. ಅಲ್ಲದೆ, ನಮ್ಮ ಸಂಸ್ಕೃತಿಯನ್ನು ಉಳಿಸಬೇಕು ಎಂದು ಸಲಹೆ ನೀಡಿದರು.

ಟ್ರಸ್ಟ್‌ನ ಗೌರವಾಧ್ಯಕ್ಷ ರುದ್ರಾರಾಧ್ಯ, ಶಿವಶಂಕರ ಆರಾಧ್ಯ ಹಾಗೂ ಪದಾಧಿಕಾರಿಗಳು, ಗುಂಡ್ಲುಪೇಟೆ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಹಾಜರಿದ್ದರು.

ವಾಟ್ಸ್ ಆ್ಯಪ್ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಿ

ಚಾಮರಾಜನಗರ, ಜು.17–ಗ್ರಾಮ ಪಂಚಾಯಿತಿಯ ಯಾವುದೇ ಕುಂದುಕೊರತೆಗಳಿದ್ದರೂ ಪಂಚಮಿತ್ರ ಪೋರ್ಟಲ್ ಮತ್ತು ವಾಟ್ಸ್ ಆ್ಯಪ್ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ಹನೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ಆರ್.ಉಮೇಶ ತಿಳಿಸಿದ್ದಾರೆ.

ಸಾರ್ವಜನಿಕರು ಗ್ರಾಪಂ ಕಚೇರಿಗೆ ಅಲೆಯುವ ಅವಶ್ಯಕತೆ ಇಲ್ಲ. ಬದಲಿಗೆ ಎಲ್ಲಾ ಸಮಸ್ಯೆಗಳಿಗೆ ಮನೆಯಲ್ಲೇ ಕುಳಿತು ವಾಟ್ಸ್ ಆ್ಯಪ್ ಮೂಲಕ ಪರಿಹರಿಸಕೊಳ್ಳಬಹುದು. ನರೇಗಾ ಯೋಜನೆ ವಿಷಯಗಳು, ಕುಡಿಯುವ ನೀರಿನ ಸಮಸ್ಯೆ, ಆಸ್ತಿ ತೆರಿಗೆ ಪಾವತಿ ಹಾಗೂ ಪಂಚಾಯಿತಿಗೆ ಸಂಬಂಧಿಸಿದ ಇನ್ನಿತರ ಕುಂದುಕೊರತೆಗಳನ್ನು ಬಗೆಹರಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪಂಚಮಿತ್ರ ಪೋರ್ಟಲ್ ಹಾಗೂ ವಾಟ್ಸ್ ಆ್ಯಪ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ಸಹಾಯವಾಣಿ: 8277506000ಗೆ ಕರೆಮಾಡಬಹುದು.

ಪಂಚಮಿತ್ರ ಪೋರ್ಟಲ್ ಲಿಂಕ್: https://panchamitra.karnataka.gov.in/ ನಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಹನೂರು, ಯಳಂದೂರು ತಾಲೂಕಿನ ಎಲ್ಲಾ ಗ್ರಾಪಂಗಳ ಪಿಡಿಓಗಳನ್ನು ಸಂಪರ್ಕಿಸಬಹುದು ಎಂದು ತಾಪಂ ಇಓ ಆರ್.ಉಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಎಸ್‌ಸಿ, ಎಸ್‌ಟಿ ಉದ್ಯಮಿಗಳ ಅಹವಾಲು ಸ್ವೀಕಾರ

ಚಾಮರಾಜನಗರ, ಜು.17–ನಗರದಲ್ಲಿ ಜು.18ರಂದು ಎಸ್‌ಸಿ, ಎಸ್‌ಟಿ ಉದ್ಯಮಿಗಳ ಅಹವಾಲು ಸ್ವೀಕರಿಸಲಾಗುವುದು ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಜೋಡಿ ರಸ್ತೆಯ ರೋಟರಿ ಭವನದಲ್ಲಿ 11 ಗಂಟೆಗೆ ನಡೆಯುವ ಸಭೆಯಲ್ಲಿ ರಾಜ್ಯ ದಲಿತ ಉದ್ಯಮಿದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ ಸಮ್ಮುಖದಲ್ಲಿ ಎಸ್‌ಸಿ, ಎಸ್‌ಟಿ ಉದ್ಯಮಿಗಳ ಅಹವಾಲು ಸ್ವೀಕರಿಸಲಾಗುವುದು. ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಮಳಿಗೆ ಹಂಚಿಕೆ ಯೋಜನೆ ಅನುಷ್ಠಾನ ಹಾಗೂ ಹಲವು ಸಮಸ್ಯೆಗಳ ಬಗೆಹರಿಸಲು ಮನವಿ ಸ್ವೀಕರಿಸಲಾಗುವುದು ಎಂದರು.

ಸಂಘ 8–10 ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿದ್ದು, ಮೈಸೂರು, ಚಾಮರಾಜನಗರ ಸೇರಿದಂತೆ 5 ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಎಸ್ಸಿ, ಎಸ್ಟಿ ಸಮುದಾಯದ ಉದ್ದಿಮೆದಾರರು ನಿವೇಶನ ಪಡೆದು ಯೋಜನೆ ಅನುಷ್ಠಾನಗೊಳಿಸುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಆ ನಿಟ್ಟಿನಲ್ಲಿ ಅವರಿಗೆ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು ಸಲಹೆ, ಸೂಚನೆಗಳನ್ನು ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಸಂಚಾಲಕ ಎನ್.ನಾಗಯ್ಯ, ಪ್ರಧಾನ ಕಾರ್ಯದರ್ಶಿ ವಿಜಯ ಶಂಕರ್, ಉದ್ಯಮಿಗಳಾದ ಕುಮಾರಸ್ವಾಮಿ, ಸಿ.ಬಾಲರಾಜು, ಶ್ರೀನಿವಾಸ, ಗೋಕುಲಂ ಮಂಜುನಾಥ್ ಹಾಜರಿದ್ದರು.

ಒಂದನೇ ಪುಟದಿಂದ

ಕನ್ನಡಿಗರಿಗೆ ಉದ್ಯೋಗ ವಿಧೇಯಕಕ್ಕೆ ಗ್ರಹಣ

ಹಾಗೂ ಇತರ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ.50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ. 75ರಷ್ಟು ಮೀಸಲಾತಿ ನಿಗದಿಪಡಿಸುವ ವಿಧೇಯಕಕ್ಕೆ ಸೋಮವಾರ ನಡೆದ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಕನ್ನಡಿಗರು ಕನ್ನಡದ ನೆಲದಲ್ಲಿ ಉದ್ಯೋಗ ವಂಚಿತರಾಗುವುದನ್ನು ತಪ್ಪಿಸಿ, ತಾಯ್ನಾಡಿನಲ್ಲಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂಬುದು ನಮ್ಮ ಸರ್ಕಾರದ ಆಶಯ. ನಮ್ಮದು ಕನ್ನಡ ಪರವಾದ ಸರ್ಕಾರ. ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆಯಾಗಿದೆ" ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ಮತ್ತೊಂದೆಡೆ ಭಾರೀ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಖಾಸಗಿ ಉದ್ಯಮಗಳಲ್ಲೂ ಕನ್ನಡಿಗರಿಗೆ ಕೆಲವು ಶ್ರೇಣಿಯ ಹುದ್ದೆಗಳನ್ನು 100ಕ್ಕೆ 100ರಷ್ಟು ಮೀಸಲಿಡಲಾಗುವುದು. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ತಯಾರಿಕಾ ವಲಯ ಮತ್ತು ಕೈಗಾರಿಕಾ ಕ್ರಾಂತಿಯ ಉಜ್ವಲ ಅವಕಾಶಗಳನ್ನು ನಾವು ಕಳೆದುಕೊಳ್ಳುವಂತಿಲ್ಲ. ಸದ್ಯದಲ್ಲೇ ಮುಖ್ಯಮಂತ್ರಿ, ಐಟಿ-ಬಿಟಿ, ಕಾನೂನು ಮತ್ತು ಕಾರ್ಮಿಕ ಸಚಿವರ ಜೊತೆ ಚರ್ಚಿಸಿ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯಲಾಗುವುದು. ಸ್ಥಳೀಯರ ಹಿತಾಸಕ್ತಿ ಕಾಪಾಡಲು ಸರ್ಕಾರ ಬದ್ಧವಾಗಿದೆ. ಉದ್ಯಮ ವಲಯದವರ ಹಿತಾಸಕ್ತಿಗೂ ಧಕ್ಕೆ ಆಗದಂತೆ ಗಮನ ನೀಡಲಾಗುವುದು. ಸಂಬಂಧಪಟ್ಟ ಎಲ್ಲರೊಂದಿಗೂ ಮಾತುಕತೆ ನಡೆಸಲಾಗುವುದು. ಕರ್ನಾಟಕ ಪುರೋಗಾಮಿ ರಾಜ್ಯವಾಗಿದೆ. 'ಗ್ಲೋಬಲ್ ಚೈನ್ ಒನ್' ನೀತಿಯಿಂದ ಲಭಿಸಿರುವ ಸದಾವಕಾಶ ಕಳೆದುಕೊಳ್ಳುವಂತಿಲ್ಲ. ಶತಮಾನಕ್ಕೊಮ್ಮೆ ಇಂತಹ ಅವಕಾಶ ಸಿಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದರು.

ಖಾಸಗಿ ಕೈಗಾರಿಕೆಗಳು, ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ವಿಧೇಯಕಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂಬ ವಿಚಾರ ಸಾಮಾಜಿಕ ಜಾಲತಾಣದಲ್ಲಿ ಮುಖ್ಯಮಂತ್ರಿಗಳು ಹಾಕಿದ್ದ ಪೋಸ್ಟ್ ಮೂಲಕ ಬಹಿರಂಗಗೊಳ್ಳುತ್ತಿದ್ದಂತೆಯೇ ಉದ್ಯಮಿ ಮೋಹನ್‌ದಾಸ್ ಪೈ ಅವರು ಸರ್ಕಾರದ ಈ ನಿರ್ಧಾರ ಸಂವಿಧಾನ ವಿರೋಧಿ ಎಂದು ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದರು. ಅದೇ ರೀತಿ ಹಲವಾರು ಉದ್ಯಮಿಗಳು ಸರ್ಕಾರಕ್ಕೆ ಈ ವಿಚಾರದ ಬಗ್ಗೆ ವಿರೋಧ ವ್ಯಕ್ತಪಡಿಸಿ ಸಂದೇಶ ರವಾನಿಸಿದ್ದರು ಎಂದು ಹೇಳಲಾಗಿದೆ. ಮತ್ತೊಂದೆಡೆ ಇಂದು ಸಂಜೆ ಮುಖ್ಯಮಂತ್ರಿಗಳನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ, ಉಪಾಧ್ಯಕ್ಷೆ ಅಶ್ವಿನಿಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಸಣ್ಣೀರಪ್ಪ, ಸಂಘಟನಾ ಕಾರ್ಯದರ್ಶಿ ಅಬ್ಬಿಗೆರೆ ವಿನೋದ್ ಭೇಟಿ ಮಾಡಿ, ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ವಿಧೇಯಕಕ್ಕೆ ಸಂಪುಟ ಅನುಮೋದನೆ ನೀಡಿದ್ದಕ್ಕಾಗಿ ಅಭಿನಂದಿಸಿದ್ದರು.

ಆದರೆ, ಈ ಸಂಭ್ರಮ ಬಹಳ ಹೊತ್ತು ಇರಲಿಲ್ಲ. ರಾತ್ರಿ 9 ಗಂಟೆಗೆ ಇದೇ ವಿಚಾರವಾಗಿ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, "ಕನ್ನಡಿಗರಿಗೆ ಖಾಸಗಿ ವಲಯದ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧಪಟ್ಟ ಅನುಮೋದನೆ ನೀಡಲಾಗಿದ್ದ ವಿಧೇಯಕವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಜಾರಿಗೆ ತರಲು ಉದ್ದೇಶಿಸಿದ್ದ ವಿಧೇಯಕವು ಇನ್ನೂ ಸಿದ್ಧತೆಯ ಹಂತದಲ್ಲಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು" ಎಂದು ಪೋಸ್ಟ್ ಮಾಡಿದ್ದಾರೆ. ಒಟ್ಟಾರೆ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವ ವಿಧೇಯಕಕ್ಕೆ ಸಂಪುಟ ಅನುಮೋದನೆ ನೀಡಿದ 2 ದಿನದ ನಂತರ ಅಧಿಕೃತವಾಗಿ ಘೋಷಣೆ ಯಾಗಿ, ಅದಾದ ಕೆಲವೇ ಗಂಟೆಗಳಲ್ಲಿ ವಿಧೇಯಕವನ್ನು ತಡೆಹಿಡಿಯಲಾಗಿದೆ. ಸರ್ಕಾರದ ಈ ಕ್ರಮ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಮೀಸಲಾತಿ ಬದಲು ಕನ್ನಡಿಗರಲ್ಲಿ ಕೌಶಲ ಬೆಳೆಸಿ...

ಒದಗಿಸುವ ಬದಲು ಉದ್ಯೋಗ ಪಡೆಯಲು ಕೌಶಲ್ಯ ಬೆಳೆಸುವುದೊಂದೇ ದಾರಿ ಎಂದಿದ್ದಾರೆ. ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, ಕನ್ನಡಿಗರಿಗೆ ಉದ್ಯೋಗ ಬಯಸುವುದಾದರೆ, ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಖರ್ಚು ಮಾಡಿ. ಅವರಿಗೆ ತರಬೇತಿ ನೀಡಿ. ಕೌಶಲ್ಯ ಅಭಿವೃದ್ಧಿ, ಇಂಟರ್ನ್‌ಶಿಪ್, ಅಪ್ರೆಂಟಿಸ್‌ಶಿಪ್ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿ. ಅದರಿಂದ ಅವರೆಲ್ಲರೂ ಕೌಶಲ್ಯಪೂರ್ಣರಾಗುತ್ತಾರೆ. ಇದರಿಂದ ನೀವು ಏನನ್ನು ಸಾಧಿಸಲು ಪ್ರಯತ್ನಿಸುತ್ತಿದ್ದೀರಿ ಎಂದು ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು. ವಿಧೇಯಕ 'ಫ್ಯಾಸಿಸ್ಟ್' ಮತ್ತು 'ಅಸಂವಿಧಾನಿಕ' ಎಂದು ಮಣಿಪಾಲ ಗ್ಲೋಬಲ್ ಎಜುಕೇಶನ್ ಸರ್ವೀಸಸ್ ಅಧ್ಯಕ್ಷರೂ ಆದ ಮೋಹನ್ ದಾಸ್ ಪೈ ಹೇಳಿದ್ದಾರೆ.

ಇದಕ್ಕೂ ಮುನ್ನಾ ಟ್ವೀಟ್ ಮಾಡಿದ್ದ ಮೋಹನ್ ದಾಸ್ ಪೈ, ಇದು ತಾರತಮ್ಯ, ಪ್ರತಿಗಾಮಿ ಮತ್ತು ಸಂವಿಧಾನ ವಿರೋಧಿಯಾಗಿದೆ. ಕಾಂಗ್ರೆಸ್ ಸರ್ಕಾರ ಈ ರೀತಿಯ ಮಸೂದೆಯನ್ನು ತರಬಹುದು ಎಂದು ನಂಬಲು ಸಾಧ್ಯವಿಲ್ಲ. ಖಾಸಗಿ ವಲಯದ ನೇಮಕಾತಿ ಸಮಿತಿಗಳಲ್ಲಿ ಸರ್ಕಾರಿ ಅಧಿಕಾರಿ ಕುಳಿತುಕೊಳ್ಳುತ್ತಾರೆಯೇ?-ಕಾಂಗ್ರೆಸ್ ಹಾಗೂ ಜೈರಾಮ್ ರಮೇಶ್ ಅವರನ್ನು ಟ್ಯಾಗ್ ಮಾಡಿ ಪ್ರಶ್ನಿಸಿದ್ದರು. ಈ ಮಧ್ಯೆ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಮಸೂದೆಯ ನಿಯಮಗಳನ್ನು ರೂಪಿಸುವ ಮೊದಲು ವ್ಯಾಪಕ ಸಮಾಲೋಚನೆ ನಡೆಸಲಾಗುವುದು ಎಂದು ಹೇಳುವ ಮೂಲಕ ಕೈಗಾರಿಕೋದ್ಯಮಿಗಳ ಆತಂಕವನ್ನು ನಿವಾರಿಸಿದ್ದಾರೆ.

ಕಾರ್ಮಿಕ ಇಲಾಖೆಯಿಂದ ಮಸೂದೆಯನ್ನು ತರಲಾಗಿದೆ. ಅವರು ಇನ್ನೂ ಉದ್ಯಮ, ಕೈಗಾರಿಕಾ ಸಚಿವರು ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯೊಂದಿಗೆ ಸಮಾಲೋಚಿಸಬೇಕಾಗಿದೆ. ಮಸೂದೆಯ ನಿಯಮಗಳನ್ನು ಮಂಡಿಸುವ ಮೊದಲು ಸಂಬಂಧಿತ ಸಚಿವರು ಮುಖ್ಯವಾಗಿ ಉದ್ಯಮದೊಂದಿಗೆ ವ್ಯಾಪಕವಾದ ಸಮಾಲೋಚನೆ ನಡೆಸಲಿದ್ದಾರೆ. ಆದ್ದರಿಂದ ಆತಂಕಗೊಳ್ಳುವ ಅಗತ್ಯವಿಲ್ಲ. ಆದ್ದರಿಂದ ಕನ್ನಡಿಗರಿಗೆ ಉದ್ಯೋಗಕ್ಕೆ ಪ್ರೋತ್ಸಾಹ ಜೊತೆಗೆ ಉದ್ಯಮಗಳೊಂದಿಗೆ ಸಮಾಲೋಚನೆಯೊಂದಿಗೆ ಹೂಡಿಕೆಯನ್ನು ಪ್ರೋತ್ಸಾಹಿಸಲಿದ್ದೇವೆ ಎಂದು ಅವರು ತಿಳಿಸಿದ್ದಾರೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಮಾಲೋಚಿಸಿ ಗೊಂದಲವನ್ನು ನಿವಾರಿಸಲಾಗುವುದು ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ಅಗತ್ಯ ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ

ಕೈಗೊಳ್ಳಬೇಕು ಎಂದು ಹೇಳಿದರು. ಕೇರಳ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಯಾವ ಪ್ರಮಾಣದಲ್ಲಿ ನೀರು ಬರಲಿದೆ ಎಂಬುದರ ಬಗ್ಗೆ ಕ್ಷಣಕ್ಷಣಕ್ಕೂ ಮಾಹಿತಿ ಪಡೆಯಬೇಕು. ಅದಕ್ಕೆ ತಕ್ಕಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಪ್ರಾಣಿಗಳು ಹಾಗೂ ಮಾನವ ಸಾವು-ನೋವು ಸಂಭವಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರವಾಹದಿಂದ ಮುಳುಗಡೆ ಆಗಬಹುದಾದ ಸೇತುವೆ ಹಾಗೂ ರಸ್ತೆಗಳನ್ನು ಗುರುತಿಸಿ, ಆ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಿ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು. ಪರ್ಯಾಯ ಮಾರ್ಗವನ್ನೂ ಸೂಚಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ತಿಳಿಸಿದರು.

ಕಬಿನಿ ಜಲಾಶಯ ಭರ್ತಿಯಾಗುತ್ತಿದ್ದಂತೆಯೇ ಡಿ.ಬಿ. ಕುಪ್ಪೆ ಹಾಗೂ ಇತರೆ ಗ್ರಾಮಗಳಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಇರುವುದರಿಂದ ಗ್ರಾಮಸ್ಥರಿಗೆ ಡಂಗೂರ ಸಾರುವ ಮೂಲಕ ಮಾಹಿತಿ ನೀಡುವುದರ ಜೊತೆಗೆ ಕಾಳಜಿ ಕೇಂದ್ರಗಳನ್ನು ತೆರೆದು ನಿರಾಶ್ರಿತರನ್ನು ಅಲ್ಲಿಗೆ ಸ್ಥಳಾಂತರಿಸಬೇಕು. ಕಾಳಜಿ ಕೇಂದ್ರದಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸಲಹೆ ನೀಡಿದರು.

ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯ್ತಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲೇ ಇದ್ದು, ಇತರ ಎಲ್ಲಾ ಇಲಾಖೆಗಳ ಸಮನ್ವಯ ಸಾಧಿಸುವುದರ ಜೊತೆಗೆ ಕೆಲಸ ನಿರ್ವಹಿಸಬೇಕು. ಪ್ರಮುಖವಾಗಿ ಪ್ರವಾಹ ಸಂದರ್ಭದಲ್ಲಿ ನೀರಿಗಿಳಿಯದಂತೆ ಹಾಗೂ ತಗ್ಗು ಪ್ರದೇಶದ ಜನರು ಸ್ಥಳಾಂತರಗೊಳ್ಳುವಂತೆ ಜಾಗೃತಿ ಮೂಡಿಸುವ ಕೆಲಸ ಅಗತ್ಯವಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ನಂತರ ನಂಜನಗೂಡಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ತಾಲೂಕಿನ ಕಡಜಟ್ಟಿ, ಹುಲ್ಲಹಳ್ಳಿ, ಮೈಸೂರು-ಹುಲ್ಲಹಳ್ಳಿ ಸೇತುವೆ, ಬೊಕ್ಕಳ್ಳಿ, ಕುಳ್ಳಂಕಯ್ಯನ ಹುಂಡಿ ಪ್ರದೇಶಗಳಿಗೆ ಭೇಟಿ ನೀಡಿ, ಮುಂಜಾಗ್ರತಾ ಕ್ರಮದ ಬಗ್ಗೆ ಪರಿಶೀಲನೆ ನಡೆಸುವುದರ ಜೊತೆಗೆ ಅಧಿಕಾರಿಗಳಿಗೆ ಕೆಲವು ಸೂಚನೆಗಳನ್ನು ನೀಡಿದರು.

ನಂಜನಗೂಡಿನ ಸ್ನಾನಘಟ್ಟ, ಹಳ್ಳದಕೇರಿ ಬಡಾವಣೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಅಲ್ಲಿನ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ನಂಜನಗೂಡು ಹಳ್ಳದಕೇರಿ ಬಡಾವಣೆಯ ಮಹಿಳೆಯೊಬ್ಬರು, ಕಪಿಲಾ ನದಿಯಲ್ಲಿ ಪ್ರವಾಹ ಉಂಟಾದಾಗ ಮನೆಗಳಿಗೆ ನೀರು ನುಗ್ಗುತ್ತಿದೆ. ಹಲವಾರು ವರ್ಷಗಳಿಂದ ಈ ಪರಿಸ್ಥಿತಿ ಇದ್ದರೂ ಅಧಿಕಾರಿಗಳು ಶಾಶ್ವತ ಪರಿಹಾರ ಒದಗಿಸಲಿಲ್ಲ. ನಮಗೆ ಮನೆ ಅಥವಾ ನಿವೇಶನ ಕೊಡುವುದಾಗಿ ಈ ಹಿಂದೆ ಅಧಿಕಾರಿಗಳು ಭರವಸೆ ನೀಡಿದ್ದರಾದರೂ, ಅದನ್ನು ಈಡೇರಿಸಿಲ್ಲ. ದಯವಿಟ್ಟು ನಮಗೆ ಶಾಶ್ವತ ಪರಿಹಾರ ಒದಗಿಸಿ ಎಂದು ಜಿಲ್ಲಾಧಿಕಾರಿಗಳ ಬಳಿ ಅಳಲು ತೋಡಿಕೊಂಡರು.

ನಂಜನಗೂಡಿನ ಪ್ರವಾಹ ಪೀಡಿತ ಪ್ರದೇಶಗಳ ಸಂತ್ರಸ್ತರ ನೆರವಿಗಾಗಿ ಗಿರಿಜಾ ಕಲ್ಯಾಣ ಮಂಟಪದಲ್ಲಿ ಕಾಳಜಿ ಕೇಂದ್ರ ತೆರೆದು ತಕ್ಷಣವೇ ಸಂತ್ರಸ್ತರನ್ನು ಅಲ್ಲಿಗೆ ಸ್ಥಳಾಂತರಿಸಬೇಕು ಹಾಗೂ ಕಾಳಜಿ ಕೇಂದ್ರದಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ಸ್ಥಳದಲ್ಲೇ ಇದ್ದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಇಂದಿನ ಪ್ರವಾಸದಲ್ಲಿ ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಎಡಿಸಿ ಪಿ.ಶಿವರಾಜ್, ಹುಣಸೂರು ಉಪ ವಿಭಾಗಾಧಿಕಾರಿ ವೆಂಕಟರಾಜು, ಹೆಚ್.ಡಿ.ಕೋಟೆ ತಹಸೀಲ್ದಾರ್, ಸರಗೂರು ತಹಸೀಲ್ದಾರ್ ರುಕಿಯಾ ಬೇಗಂ, ನಂಜನಗೂಡು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಕಂದಾಯ, ನೀರಾವರಿ ಇಲಾಖೆ ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸಂಸದ ಯದುವೀರ್ ನೇತೃತ್ವದಲ್ಲಿ ಸ್ವಚ್ಛತಾ ಅಭಿಯಾನ



ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ನಮ್ಮ ಮೈಸೂರು ಫೌಂಡೇಷನ್ ಹಾಗೂ ಹಲವು ಸಂಘ-ಸಂಸ್ಥೆಗಳು ಕುಕ್ಕರಹಳ್ಳಿ ಕೆರೆ ಆವರಣ, ಯುವರಾಜ, ಮಹಾರಾಜ ಕಾಲೇಜು ಬಳಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಮೈಸೂರು, ಜು.17(ಆರ್‌ಕೆ)- ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ನಮ್ಮ ಮೈಸೂರು ಫೌಂಡೇಷನ್ ಹಾಗೂ ಹಲವು ಸಂಘ-ಸಂಸ್ಥೆಗಳು ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣ, ಯುವರಾಜ ಹಾಗೂ ಮಹಾರಾಜ ಕಾಲೇಜು ಬಳಿ ಇಂದು ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಕುಕ್ಕರಹಳ್ಳಿ ಕೆರೆ ಉದ್ಯಾನ, ಏರಿ ಮೇಲೆ ಸ್ವಚ್ಛತೆಯಲ್ಲಿ ತೊಡಗಿದ್ದ ಯದುವೀರ್‌ಗೆ ವಾಯುವಿಹಾರಿಗಳೂ ಸಾಥ್ ನೀಡಿದರು. ಈ ವೇಳೆ ಕೆಲ ಯುವಕ-ಯುವತಿಯರು ಸಂಸದರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಯದುವೀರ್, ಸಾಂಸ್ಕೃತಿಕ ನಗರಿ ಮೈಸೂರನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಪಾರಂಪರಿಕ ಕಟ್ಟಡ, ಸ್ಮಾರಕ, ಉದ್ಯಾನವನಗಳನ್ನು ಸ್ವಚ್ಛಗೊಳಿಸಬೇಕು, ಪ್ಲಾಸ್ಟಿಕ್ ಬಳಸಬಾರದೆಂಬ ಸಂದೇಶ ರವಾನಿಸುವ ಸಲುವಾಗಿ ಈ ಅಭಿಯಾನ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಟ್ಟಡ ತ್ಯಾಜ್ಯವನ್ನೂ ಎಲ್ಲೆಂದರಲ್ಲಿ ರಸ್ತೆಬದಿ, ಖಾಲಿ ಜಾಗದಲ್ಲಿ ಸುರಿಯುವುದರಿಂದ ಪರಿಸರ ಹಾಳಾಗುತ್ತದೆ. ಅದಕ್ಕೆಂದೇ ಗುರ್ತಿಸಿರುವ ಸ್ಥಳದಲ್ಲಿ ಸಿ ಅಂಡ್ ಡಿ ವೇಸ್ಟ್ ಸುರಿಯಬೇಕೆಂದು ಸಲಹೆ ನೀಡಿದ ಸಂಸದರು, ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ ಸುರಕ್ಷತೆಗಾಗಿ ಜನರಲ್ಲಿ ಜಾಗೃತಿ ಮೂಡಿಸುವುದು, ಯುವ ಸಮೂಹವನ್ನು ಪ್ರೇರೇಪಿಸುವುದು ಅಭಿಯಾನದ ಮುಖ್ಯ ಉದ್ದೇಶ ಎಂದರು.

ಕುವೆಂಪುನಗರದಲ್ಲಿ ತಾತ್ಕಾಲಿಕವಾಗಿ ನಾವು ಕಚೇರಿ ತೆರೆದಿದ್ದೇವೆ. ಸಾರ್ವಜನಿಕರ ಅಳಲು, ಕುಂದುಕೊರತೆ ಅರ್ಜಿಗಳನ್ನು ಸ್ವೀಕರಿಸಿ ಸ್ಪಂದಿಸುತ್ತಿದ್ದೇವೆ. ಮುಂದೆ ಸಂಸದರ ಅಧಿಕೃತ ಕಚೇರಿ ಆರಂಭಿಸಿ, ಕ್ಷೇತ್ರದ ಜನರ ಸಮಸ್ಯೆ ಆಲಿಸುವುದಾಗಿ ತಿಳಿಸಿದರು.

ನಮ್ಮ ಮೈಸೂರು ಫೌಂಡೇಷನ್ (ಸಿಎಂಎಫ್), ಬಾಳ್ಯ, ಸೈಬರ್‌ವರ್ಸ್ ಫೌಂಡೇಷನ್, ರೋಟರಿ ಮೈಸೂರ್, ರೋಟರಿ ಕ್ಲಬ್ಸ್, ಲಯನ್ಸ್ ಇಂಟರ್ ನ್ಯಾಷನಲ್, ನರೆಡ್ಕೋ ಮೈಸೂರು, ರೋಟರಿ ಪಂಚಶೀಲ ಮತ್ತು ಯಂಗ್ ಇಂಡಿಯನ್ಸ್ ಹಾಗೂ ಇತರ ಸಂಘಟನೆಗಳ ಪದಾಧಿಕಾರಿಗಳು, ಎನ್‌ಎಂಎಫ್‌ನ ದಶರಥ, ಸಿ.ಜಿ.ಗಂಗಾಧರಗೌಡ ಸೇರಿದಂತೆ ಹಲವರು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ಯುಕೆ ಲೇಬರ್ ಪಾರ್ಟಿ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದ ಕನ್ನಡಿಗ ಡಾ.ನೀರಜ್ ಪಾಟೀಲ್

ಲಂಡನ್: ಲಂಡನ್‌ನ ಮಾಜಿ ಮೇಯರ್ ಡಾ.ನೀರಜ್ ಪಾಟೀಲ್ ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ಬ್ರಿಟಿಷ್ ಲೇಬರ್ ಪಾರ್ಟಿಯ



ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿದ್ದಾರೆ. ಈ ವಿಷಯವನ್ನು ಲೇಬರ್ ಪಾರ್ಟಿ ಪ್ರಧಾನ ಕಾರ್ಯದರ್ಶಿ ಡೇವಿಡ್ ಇವಾನ್ಸ್ ತಿಳಿಸಿದ್ದಾರೆ.

ಜುಲೈ 15ರಂದು ಹೊರಡಿಸಿರುವ ಪತ್ರದಲ್ಲಿ ಅಪಘಾತ ಹಾಗೂ ತುರ್ತು ವೈದ್ಯಕೀಯ ಸಲಹೆಗಾರರಾದ ಡಾ.ನೀರಜ್ ಪಾಟೀಲ್ ಕಳೆದ 20 ವರ್ಷ ಗಳಿಂದ ಸಕ್ರಿಯವಾಗಿ ಕಾರ್ಮಿಕ ಪಕ್ಷದ ಸದಸ್ಯರಾಗಿದ್ದಾರೆ. ಸೇಂಟ್ ಥಾಮಸ್ ಆಸ್ಪತ್ರೆ ಕಿಂಗ್ಸ್ ಕಾಲೇಜು ಆಸ್ಪತ್ರೆಯ ಫೌಂಡೇಷನ್ ಗವರ್ನರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಲಂಡನ್ ಥೇಮ್ಸ್ ನದಿ ದಡದಲ್ಲಿ ಬಸವೇಶ್ವರ ಪ್ರತಿಮೆಯನ್ನು ಸ್ಥಾಪಿಸಲು ನೀರಜ್ ಪಾಟೀಲ್ ಪ್ರಮುಖ ಕಾರಣವಾಗಿದ್ದರು. ಕೊರೊನಾ ಸೋಂಕು ತಗುಲಿದ ಮೇಲೆ ಭಾವನಾತ್ಮಕ ಪತ್ರ ಬರೆದು ಜಗತ್ತಿನ ಗಮನ ಸೆಳೆದಿದ್ದರು. ಇಂಗ್ಲೆಂಡ್‌ನ ಲ್ಯಾಂಬೆತ್ ನಗರದಲ್ಲಿ ಮೇಯರ್ ಆಗಿ ನೀರಜ್ ಪಾಟೀಲ್ ಕಾರ್ಯನಿರ್ವಹಿಸಿದ್ದಾರೆ.

ಶ್ರೀ ವಿದ್ಯಾಧೀಶತೀರ್ಥರಿಂದ ಮುದ್ರಾಧಾರಣೆ



ಮೈಸೂರಿನ ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಹಾಗೂ ಕಿರಿಯ ಶ್ರೀಗಳಾದ ವಿದ್ಯಾರಾಜೇಶ್ವರತೀರ್ಥ ಶ್ರೀಪಾದಂಗಳವರು ಭಕ್ತರಿಗೆ ಶಂಖ ಚಕ್ರಗಳ ಮುದ್ರಾಧಾರಣೆ ನೆರವೇರಿಸಿದರು.

ಮೈಸೂರು,ಜು.17-ಆಷಾಢ ಮಾಸದ ಪ್ರಥಮ ಏಕಾದಶಿ ಪರ್ವಕಾಲ ಹಿನ್ನೆಲೆಯಲ್ಲಿ ತಪ್ತ ಮುದ್ರಾಧಾರಣೆ ಕಾರ್ಯಕ್ರಮವನ್ನು ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣಮಿತ್ರ ಮಂಡಳಿ ಹಾಗೂ ಶ್ರೀಕೃಷ್ಣ ಟ್ರಸ್ಟ್ ವತಿಯಿಂದ ಉಡುಪಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಹಾಗೂ ಕಿರಿಯ ಶ್ರೀಗಳಾದ ವಿದ್ಯಾರಾಜೇಶ್ವರತೀರ್ಥ ಶ್ರೀಪಾದಂಗಳವರು ಬುಧವಾರ ಭಕ್ತರಿಗೆ ಶಂಖ ಚಕ್ರಗಳ ಮುದ್ರಾಧಾರಣೆ ನೆರವೇರಿಸಿದರು.

ನಂತರ ಮಾತನಾಡಿದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳು ಆಷಾಢ ಮಾಸದ ಶುಕ್ಲ ಪಕ್ಷದ ಏಕಾದಶಿಯನ್ನು ಶಯನಿ ಏಕಾದಶಿ ಎಂದು ಕರೆಯಲಾಗುತ್ತದೆ. ಈ ದಿನದಿಂದ ಉತ್ಥಾನದ್ವಾದಶಿಯ ತನಕ ಶ್ರೀಮನ್ನಾರಯಣನು ಯೋಗ ನಿದ್ರೆಯಲ್ಲಿ ತೊಡಗುತ್ತಾನೆ ಎಂಬ ನಂಬಿಕೆ ಇದೆ. ಮಳೆಗಾಲದಲ್ಲಿ ಸೊಳ್ಳೆ, ಕ್ರಿಮಿ ಕೀಟಗಳಿಂದ ಎದುರಾಗುವ ರೋಗ ರುಜಿನಗಳನ್ನು ಎದುರಿಸಲು ಬೇಕಾದ ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೂ ತಪ್ತ ಮುದ್ರಾಧಾರಣೆ ಪೂರಕವಾಗಲಿದೆ ಎಂದರು.

ಚಾತುರ್ಮಾಸ್ಯಕ್ಕೆ ಕೂರುವ ಮೊದಲು ಗೃಹಸ್ಥರು ಹಾಗೂ ಯತಿಗಳು ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು. ಅನಾನುಕೂಲವಾದವರು ಏಕಾದಶಿ ದಿನದ ಹೊರತಾಗಿಯೂ ಮುದ್ರಾಧಾರಣೆ ಮಾಡಿಸಿಕೊಳ್ಳಬಹುದು ಎಂದು ಹೇಳಿದರು.

ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ಮಾತನಾಡಿ, ಬೆಳಗ್ಗಿನಿಂದಲೇ ಮಠಕ್ಕೆ ಆಗಮಿಸಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ತೋಳಿಗೆ, ಎದೆಯ ಭಾಗ ಹಾಗೂ ಹೊಟ್ಟೆಯ ಮೇಲೆ ಶಂಖ ಹಾಗೂ ಚಕ್ರದ ಮುದ್ರೆ ಹಾಕಿಸಿಕೊಂಡರು.

ಪ್ರತಿವರ್ಷವೂ ನಾನಾ ಕಡೆಗಳಿಂದ ಭಕ್ತರು ಆಗಮಿಸಿ ತಪ್ತ ಮುದ್ರೆಯನ್ನು ಹಾಕಿಸಿಕೊಳ್ಳುತ್ತಾರೆ. ಸುದರ್ಶನ ಹೋಮವನ್ನು ನಡೆಸಿ ಅದರಲ್ಲಿ ಕಾಯಿಸಿದ ಶಂಖ, ಚಕ್ರ, ಗದಾ, ಪದ್ಮ ಚಿಹ್ನೆಯನ್ನು ಎದೆಯ ಭಾಗ, ಎಡ ಮತ್ತು ಬಲ ತೋಳಿಗೆ ಹಾಕುವುದನ್ನು ತಪ್ತ ಮುದ್ರಾಧಾರಣೆ ಎಂದು ಹೇಳಿದರು. ಅದಕ್ಕೂ ಮುನ್ನ ಮಠದಲ್ಲಿ ಸುರೇಶ್ ಭಟ್ ಹಾಗೂ ಶ್ರೀಕಾಂತ್ ಆಚಾರ್ಯ ನೇತೃತ್ವದಲ್ಲಿ ಸುದರ್ಶನ ಹೋಮ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್‌ನ ಪಿ.ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ. ಶ್ರೀಧರ್, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪಿ.ಜಿ.ಪ್ರವೀಣ್, ಉಪಾಧ್ಯಕ್ಷ ಗೋಪಾಲ ಕೃಷ್ಣನ್, ವಿಜಯ ವಿಠಲ ವಿದ್ಯಾ ಸಂಸ್ಥೆಯ ಮುಖ್ಯಸ್ಥ ವಾಸುದೇವ್ ಭಟ್ ಮಿತ್ರ ಮಂಡಳಿಯ ಸದಸ್ಯರು ಮತ್ತು ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು.

ಕುರಿಗಳ ಸಾವಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ



ಸಿ.ಎನ್.ಮಂಜೇಗೌಡ

ಬೆಂಗಳೂರು, ಜು.17-ಅವಧಿ ಮುಗಿದ ಔಷಧಿಯನ್ನು ಕುರಿಗಳಿಗೆ ನೀಡಿ ಅವುಗಳ ಸಾವಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಕುರಿ ಮಾಲೀಕರಿಗೆ ಸರ್ಕಾರ ಕೂಡಲೇ ಪರಿಹಾರ ನೀಡಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಪರಿಷತ್ ಕಲಾಪದ ಸೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ಕೃಷಿ ಮತ್ತು ಹೈನುಗಾರಿಕೆ ರೈತರ ಬೆನ್ನೆಲುಬಾಗಿದ್ದು, ಹೈನುಗಾರಿಕೆಯನ್ನು ನಡೆಸುವ ರೈತರ ಗೋಳನ್ನು ಕೇಳುವವರಿಲ್ಲದಾಗಿದೆ. ಇದಕ್ಕೆ ನಿದರ್ಶನವಾಗಿ ಜು.13ರಂದು ಕನಕಪುರ ತಾಲೂಕು ಹೆಗ್ಗ ನೂರುದೊಡ್ಡಿ ಗ್ರಾಮದ ಮುತ್ತುರಾಜರವರ ಕುರಿಗಳಿಗೆ ಜಂತುಹುಳು ಔಷಧಿ ಹಾಕಿಸಲು ಕನಕಪುರ ತಾಲೂಕು ಉಯ್ಯಂಬಳ್ಳಿ ಸರ್ಕಾರಿ ಪಶು ಚಿಕಿತ್ಸಾಲಯಕ್ಕೆ ತೆರಳಿದಾಗ ಅಲ್ಲಿನ ಇನ್ಸ್‌ಪೆಕ್ಟರ್ ವಿನೋದ್ ಔಷಧಿ ಬಾಟಲ್ ಮೇಲಿನ ಅವಧಿ ಮೀರಿದ ಲೇಬಲ್ ತೆಗೆದು ಅದರ ಜೊತೆ ಸಿರೆಂಜ್ ಕೊಟ್ಟು ವೈದ್ಯರ ಕೊರತೆ ಇದೆ. ನೀವೇ ಕುರಿಗಳಿಗೆ ಹಾಕಿಕೊಳ್ಳಿರಿ ಎಂದು ಔಷಧಿ ನೀಡಿದ್ದರು. ಈ ಔಷಧಿಯನ್ನು ಹಾಕಿದ ನಂತರ 13 ಕುರಿಗಳು, 7 ಕುರಿಮರಿಗಳು 3 ದಿನದಲ್ಲೇ ಸಾವನ್ನಪ್ಪಿವೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಕುರಿಗಳಿಗೆ ಕಣ್ಣು ಕಾಣಿ ಸುತ್ತಿಲ್ಲ. ಇನ್ನೂ ಕೆಲವು ಕುರಿಗಳು ನಿತ್ರಾಣಗೊಂಡು ಸಾಯುವ ಸ್ಥಿತಿಯಲ್ಲಿವೆ. ಇದರಿಂದ ರೈತನಿಗೆ ಸುಮಾರು 6 ಲಕ್ಷ ರೂ. ನಷ್ಟವಾಗಿದೆ. ಆದ್ದರಿಂದ ಕುರಿಗಳ ಸಾವಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು, ಕುರಿಗಳ ಸಾವಿನಿಂದ ನಷ್ಟವಾಗಿರುವ ರೈತರಿಗೆ ಸರ್ಕಾರ ಕೂಡಲೇ ಪರಿಹಾರ ಮಂಜೂರು ಮಾಡಬೇಕೆಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರನ್ನು ಒತ್ತಾಯಿಸಿದರು.

ಇಂದು ಮೈಸೂರಲ್ಲಿ ಜಿಲ್ಲಾ ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರ ಸಂಘದಿಂದ ಅಹವಾಲು ಸ್ವೀಕಾರ ಸಭೆ

ಮೈಸೂರು, ಜು.17(ಜಿಎ)-ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರ ಸಂಘದ ವತಿಯಿಂದ ಜು.18ರಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಭಾವೀ ಹಾಗೂ ಹಾಲಿ ಕೈಗಾರಿಕೋದ್ಯಮಿಗಳು ಕೈಗಾರಿಕಾ ನಿವೇಶನ, ಮಳಿಗೆ ಹಂಚಿಕೆ ಯೋಜನೆ ಅನುಷ್ಠಾನಗೊಳಿಸಲು ಇರುವ ಸಮಸ್ಯೆಗಳ ಅಹವಾಲು ಸ್ವೀಕಾರ ಸಭೆಯನ್ನು ನಗರದ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಈ ವಿಷಯ ತಿಳಿಸಿ, ಅಂದು ಮಧ್ಯಾಹ್ನ 2 ಗಂಟೆಗೆ ರಾಜ್ಯದ ದಲಿತ ಉದ್ಯಮಿದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ್ ಸಮ್ಮುಖದಲ್ಲಿ ಸಭೆ ನಡೆಯಲಿದೆ ಎಂದರು.

ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಭಾವಿ ಹಾಗೂ ಹಾಲಿ ಕೈಗಾರಿಕೋದ್ಯಮಿಗಳು ಜಿಲ್ಲಾ ಕೈಗಾರಿಕಾ ಕೇಂದ್ರ, ಕೆಐಎಡಿಬಿ, ಕೆಎಸ್‌ಐಡಿಸಿ, ಕೆಎಸ್‌ಎಫ್‌ಸಿ, ರಾಷ್ಟ್ರೀಕೃತ ಬ್ಯಾಂಕುಗಳು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಜವಳಿ ಇಲಾಖೆ ಹಾಗೂ ರೇಷ್ಮೆ ಇಲಾಖೆ ಇತ್ಯಾದಿ ಮೊದಲಾದ ಯಾವುದಾದರೂ ಇಲಾಖೆಯಿಂದ ಸಮಸ್ಯೆ ಎದುರಿಸುತ್ತಿದ್ದಲ್ಲಿ ಲಿಖಿತವಾಗಿ ಗಮನಕ್ಕೆ ತಂದಲ್ಲಿ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಶಿವಣ್ಣ ನಂಜಾಪುರ, ಸಿಂಧುವಳ್ಳಿ ಶಿವಣ್ಣ, ಮಂಜುನಾಥ್ ಉಪಸ್ಥಿತರಿದ್ದರು.

ಮುಡಾ ಹಗರಣ: ಸಿಎಂ ವಿರುದ್ಧದ ಆರೋಪ ಸತ್ಯಕ್ಕೆ ದೂರವಾದುದು

ಮೈಸೂರು, ಜು.17(ಜಿಎ)-ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಮುಡಾ ಹಗರಣ ಕುರಿತು ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದು ಇಂಡಿಯನ್ ನ್ಯೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಪತ್ನಿ ಪಾರ್ವತಿ ಅವರ ಒಡೆತನದ ಭೂಮಿಯನ್ನು ಮುಡಾ ಕಾನೂನುಬಾಹಿರವಾಗಿ ವಶಪಡಿಸಿಕೊಂಡು ನಿವೇಶನ ಮಾಡಿ ಹಂಚಿತ್ತು. ಬಳಿಕ ಅದಕ್ಕೆ ಪ್ರತಿಯಾಗಿ ಅವರಿಗೆ ನಿವೇಶನ ನೀಡಿದೆ. ಹೀಗಾಗಿ ಸಿಎಂ ವಿರುದ್ಧ ಈಗ ಕೇಳಿ ಬರುತ್ತಿರುವ ಆರೋಪ ಸತ್ಯಕ್ಕೆ ದೂರವಾದುದಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ ತಿಳಿಸಿದರು.

ಭೂಮಿಯನ್ನು ಮಲ್ಲಿಕಾರ್ಜುನ ಅವರು ಕ್ರಯಕ್ಕೆ ಪಡೆದು ಬಳಿಕ ತಮ್ಮ ಸಹೋದರಿಗೆ ದಾನವಾಗಿ ನೀಡಿದ್ದರು. ಬಳಿಕ ಮುಡಾ ನಿಯಮ ಅನುಸರಿಸದೇ ತನ್ನ ವಶಕ್ಕೆ ಪಡೆದು ನಿವೇಶನ ಮಾಡಿ ವಿತರಿಸಿತ್ತು. ಇದಕ್ಕೆ ಪ್ರತಿಯಾಗಿ ಪಾರ್ವತಿ ಅವರಿಗೆ ಬದಲಿ ನಿವೇಶನಗಳನ್ನು ನೀಡಿದೆ. ಹೀಗಾಗಿ ಇದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದ ಅವರು, ಮುಡಾದಲ್ಲಿ ಈ ಪ್ರಕರಣ ಹೊರತುಪಡಿಸಿದಂತೆ ಅನೇಕ ಅಕ್ರಮ ನಡೆದಿವೆ. ಇದರ ವಿರುದ್ಧ ತಮ್ಮ ಪಕ್ಷ ಹೋರಾಟ ನಡೆಸುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶಂಕರ್, ಶ್ರೀನಿವಾಸ್, ಬಸವರಾಜು, ಚಿಕ್ಕಣ್ಣ ಉಪಸ್ಥಿತರಿದ್ದರು.

ಸಂವಿಧಾನ ಹತ್ಯೆ ದಿನಾಚರಣೆಗೆ ಖಂಡನೆ

ಮೈಸೂರು,ಜು.17-ತುರ್ತು ಪರಿಸ್ಥಿತಿ ಹೇರಿದ ದಿನವನ್ನು ಸಂವಿಧಾನ ಹತ್ಯೆ ದಿನವನ್ನಾಗಿ ಆಚರಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿರುವುದು ಅತ್ಯಂತ ಖಂಡನೀಯ. ಇದನ್ನು ದೇಶದ ಸಮಸ್ತ ನಾಗರಿಕರು ವಿರೋಧಿಸಬೇಕು ಎಂದು ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ಅಧ್ಯಕ್ಷ ಕೆ. ಮಹೇಶ್ ತಿಳಿಸಿದ್ದಾರೆ.

ಬಿಜೆಪಿ ಸರ್ಕಾರದ 10 ವರ್ಷಗಳ ಆಡಳಿತದಲ್ಲಿ ನಿರಂತರವಾಗಿ ಸಂವಿಧಾನದ ಮೇಲೆ ದಾಳಿ ಮಾಡಲಾಗುತ್ತಿದೆ. ಸಂವಿಧಾನ ಬದಲಿಸಲು ನಾವು ಬಂದಿದ್ದೇವೆ ಎಂದಾಗ ಮತ್ತು ಸಂವಿಧಾನ ಪ್ರತಿ ಸುಟ್ಟಾಗಲೂ ಬಿಜೆಪಿ ನಾಯಕರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಸಂವಿಧಾನದ ಮೇಲಿನ ದಾಳಿಗೆ 2024ರ ಚುನಾವಣೆಯಲ್ಲಿ ದೇಶದ ಜನರು ಉತ್ತರ ಕೊಟ್ಟಿದ್ದಾರೆ. ಸಂವಿಧಾನ ಜಾರಿಗೆ ಬಂದ ದಿನ ದಿಂದಲೂ ವಿರೋಧ ವ್ಯಕ್ತಪಡಿಸುತ್ತಿರುವುದು ಯಾರು? ಸಂವಿಧಾನ ವಿರುದ್ಧವಾಗಿ ಆಡಳಿತ ನಡೆಸುತ್ತಿರುವುದು ಯಾರು? ಸಂವಿಧಾನದ ಬದಲಾಯಿಸಲು ಶ್ರಮಿಸುತ್ತಿರುವುದು ಯಾರೆಂಬುದು ದೇಶದ ಬಹುಸಂಖ್ಯಾತ ಜನರಿಗೆ ಗೊತ್ತಿದೆ. ಸಂವಿಧಾನದ ಆಶಯಗಳಿಗೆ ಬದ್ಧವಾಗಿರುವ ಕಾಂಗ್ರೆಸ್ ವಿರುದ್ಧವಾಗಿ ಜನಾಭಿಪ್ರಾಯ ರೂಪಿಸಲು ಬಿಜೆಪಿ ಸಂವಿಧಾನ ಹತ್ಯೆ ದಿನಾಚರಣೆಗೆ ಮುಂದಾಗಿದೆ. ಇದು ಬಿಜೆಪಿಯ ದ್ವೇಷ ರಾಜಕಾರಣದ ಮುಂದುವರಿದ ಭಾಗ. ದ್ವೇಷದ ರಾಜಕಾರಣವನ್ನು ಜನರು ತಿರಸ್ಕರಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.28ರಂದು ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜು.17-ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಭೂಮಿಗಿರಿ ನಾರಾಯಣಪ್ಪ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಸಹಯೋಗದೊಂದಿಗೆ ಜು.28ರಂದು ಪಡುವಾರಹಳ್ಳಿಯ ಶ್ರೀಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ ಹಾಗೂ ಖ್ಯಾತ ಸ್ತ್ರೀರೋಗ ತಜ್ಞರಾದ ಡಾ.ಎ.ಎಸ್.ಪೂರ್ಣಿಮಾ ಗರ್ಭಕೋಶ, ಮುಟ್ಟಿನ ಸಮಸ್ಯೆ ಸಂಬಂಧಿಸಿದಂತೆ ತಪಾಸಣೆ ಮಾಡಲಿದ್ದಾರೆ.

ಅಗ್ನಿವೀರ್ ಯೋಜನೆಗೆ ಅಪಸ್ವರ; ರಾಹುಲ್‌ಗಾಂಧಿ ಕ್ಷಮೆ ಯಾಚನೆಗೆ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಪೂರ್ವ ಸೈನಿಕ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯ ಸಿದ್ದರಾಮು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜು.17(ಎಂಟಿವೈ)- ಕಾಂಗ್ರೆಸ್ ವರಿಷ್ಠ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅಗ್ನಿವೀರ್ ಯೋಜನೆ ಕುರಿತು ಅಸಂಬದ್ಧ ಹೇಳಿಕೆ ನೀಡುವ ಮೂಲಕ ಸೈನಿಕರಿಗೆ ಅಪಮಾನ ಮಾಡಿದ್ದು, ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಪೂರ್ವ ಸೈನಿಕ ಪ್ರಕೋಷ್ಠ ರಾಜ್ಯ ಸಮಿತಿ ಸದಸ್ಯ ಸಿದ್ದರಾಮು ಒತ್ತಾಯಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ದೇಶದ ಯುವ ಜನರ ಭವಿಷ್ಯದ ಹಿನ್ನೆಲೆಯಲ್ಲಿ ಅಗ್ನಿಪಥ ಯೋಜನೆ ಜಾರಿಗೆ ತಂದು, ನಾಲ್ಕು ವರ್ಷದ ಅವಧಿಗೆ ಯುವಕರನ್ನು ಅಗ್ನಿ ವೀರರನ್ನಾಗಿ ಸೇನೆಗೆ ನೇಮಕ ಮಾಡಿಕೊಳ್ಳುವ ಯೋಜನೆ ಜಾರಿಗೊಳಿಸಿದ್ದಾರೆ. ಈ ಯೋಜನೆಯಲ್ಲಿ ಆಯ್ಕೆಯಾದ ನೂತನ ಸೈನಿಕರಿಗೆ 25ರಿಂದ 45 ಸಾವಿರ ರೂ. ವರೆಗೆ ಹಂತ ಹಂತವಾಗಿ ವೇತನ ನೀಡುವುದರೊಂದಿಗೆ ಸೇವೆ ಪೂರ್ಣಗೊಂಡ ಬಳಿಕ 14 ಲಕ್ಷ ರೂ. ಇಡಿಗಂಟು ನೀಡಲಾಗುತ್ತದೆ. ಇದನ್ನು ಅರಿಯದೇ ರಾಹುಲ್ ಗಾಂಧಿ ಅಗ್ನಿವೀರ ಯೋಜನೆ ಟೀಕಿಸುವ ಮೂಲಕ ಸೈನಿಕರನ್ನು ಅಪಮಾನಿಸಿದ್ದಾರೆ ಎಂದು ಕಿಡಿಕಾರಿದರು.

ಈ ಯೋಜನೆಯಿಂದ ಆಯ್ಕೆಯಾದ ಅಗ್ನಿವೀರರು 4 ವರ್ಷದ ಸೇವೆ ಮುಗಿದ ಬಳಿಕ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಕೆಲಸಕ್ಕೆ ಸೇರಲು ಸೈನಿಕ ಮೀಸಲಾತಿ ಪಡೆಯಬಹುದಾಗಿದೆ. ಅಲ್ಲದೇ ಸೇನಾ ನೇಮಕಾತಿಯಲ್ಲೂ ಅರ್ಹತೆ ಪಡೆದುಕೊಂಡು ಸೈನ್ಯ ಸೇರಬಹುದಾಗಿದೆ. ಈ ಯೋಜನೆ 17ರಿಂದ 24 ವರ್ಷದವರಿಗೆ ಅನುಕೂಲವಾಗುವುದರಿಂದ ಯುವ ಸಮೂಹಕ್ಕೆ ದೇಶಭಕ್ತಿ, ಶಿಸ್ತು ಬೆಳೆಸಲು ಅನುಕೂಲವಾಗಲಿದೆ. ಅಗ್ನಿಪಥ ಯೋಜನೆ ಭಾರತೀಯ ಸೈನ್ಯವನ್ನು ಬಲಪಡಿಸುವ ಯೋಜನೆಯಾಗಿದೆ. ಅಗ್ನಿಪಥ ಯೋಜನೆ ಮೂಲಕ ದೇಶದ ಯುವಕರಿಗೆ ಸೈನ್ಯದ ತರಬೇತಿ ನೀಡಿದರೆ ದೇಶದ ಭದ್ರತೆ ದೃಷ್ಟಿಯಿಂದ ಅನುಕೂಲ. ಇದನ್ನು ತಿಳಿಯದೇ ಅವಹೇಳನ ಮಾಡಿರುವುದು ಖಂಡನೀಯ ಎಂದು ಹೇಳಿದರು.

ಬಿಜೆಪಿ ವಕ್ತಾರ ಎಂ.ಮೋಹನ್ ಮಾತನಾಡಿ, ಅಗ್ನಿಪಥ ಯೋಜನೆ ಅನುಷ್ಠಾನದಿಂದ ಯುವ ಸಮುದಾಯಕ್ಕೆ ನೆರವಾಗಿದೆ. ಯುವಕರಲ್ಲಿ ಶಿಸ್ತು ಬೆಳೆಸುವ ನಿಟ್ಟಿನಲ್ಲಿ ಅಗ್ನಿವೀರ್ ಯೋಜನೆ ಸಹಕಾರಿಯಾಗಿದೆ. ಈಗಾಗಲೇ 88 ಸಾವಿರ ಅಗ್ನಿವೀರರು ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೂ 1.75 ಲಕ್ಷ ಯುವಕರು ಅರ್ಜಿ ಸಲ್ಲಿಸಿದ್ದಾರೆ. ದೇಶದ ಪ್ರತಿಯೊಬ್ಬ ಪ್ರಜೆಯೂ ದೇಶಕ್ಕಾಗಿ ತಾನು ಸೇವೆ ಸಲ್ಲಿಸುವ ಭಾವನೆ ಹೊಂದಬೇಕು. ಇದಕ್ಕೆ ಈ ಯೋಜನೆ ಪೂರಕವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸೈನಿಕ ದೊಡ್ಡೇಗೌಡ, ಮಾಧ್ಯಮ ಸಂಯೋಜಕ ಮಹೇಶ್‌ರಾಜೇ ಅರಸ್ ಇದ್ದರು.

ಮೈಸೂರು ಮಿತ್ರ ಗುರುವಾರ 18 ಜುಲೈ 2024

ಮಳೆಯಿಂದ ಕೆರೆಯಂತಾಗಿರುವ ಸಿಂಡೇನಹಳ್ಳಿ

ರಸ್ತೆಗಳು ಇಲ್ಲ, ಚರಂಡಿಯೂ ಇಲ್ಲ, ಕೇಳುವವರಿಲ್ಲ



ರಸ್ತೆಯಲ್ಲಿ ನೀರು ನಿಂತು ಕೆರೆಯಂತಾಗಿರುವುದು.

ಹನಗೋಡು, ಜು.17– ಹನಗೋಡು ಸುತ್ತಮುತ್ತ ಸುರಿದ ಭಾರಿ ಮಳೆಯಿಂದ ಹೋಬಳಿಯ ಸಿಂಡೇನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ನೀರು ನಿಂತು ಕೆರೆಯಂತಾಗಿದ್ದು, ಗ್ರಾಮಸ್ಥರು ಓಡಾಡಲು ಸಾಧ್ಯವಾಗದೆ ಹರ ಸಾಹಸಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸ್ವಚ್ಛತೆ ಕಾಪಾಡಬೇಕಾದ ಗ್ರಾಮ ಪಂಚಾಯಿತಿ ಅಧಿಕಾರಿ ವರ್ಗದವರು ಮೌನಕ್ಕೆ ಶರಣಾಗಿದ್ದಾರೆ. ಚರಂಡಿಗಳಿಲ್ಲದೇ ನಮ್ಮಗ್ರಾಮ ರಸ್ತೆ ಗಬ್ಬೆದ್ದು ನಾರುತ್ತಿದ್ದು, ಸಾಂಕ್ರಾಮಿಕ ರೋಗಕ್ಕೆ ಮುಕ್ತ ಆಹ್ವಾನ ನೀಡುತ್ತಿದೆ.

ಇದರಿಂದ ಚರಂಡಿ ಕೊಳಚೆ ನೀರು ಗಬ್ಬೆದ್ದು ನಾರುತ್ತಿದೆ. ದಿನದಿಂದ ದಿನಕ್ಕೆ ಇಲ್ಲಿ ಸೊಳ್ಳೆಗಳ ಕಾಟ ಹೆಚ್ಚುತ್ತಿದೆ. ರಾತ್ರಿ ವೇಳೆ ರಸ್ತೆಯ ನಿವಾಸಿಗಳ ಗೋಳು–ಕೇಳುವರೇ ಇಲ್ಲದಂತಾಗಿದೆ. ಸೊಳ್ಳೆ ಬತ್ತಿ ಹತ್ತಿಸದೇ ಹೋದರೆ ನಿದ್ದೆ ಎಂಬುದು ಮರೀಚಿಕೆಯೇ ಸರಿ. ಗ್ರಾಮದ ಮುಖ್ಯರಸ್ತೆ ಇದಾಗಿದ್ದು, ರಸ್ತೆಯೂ ಇಲ್ಲ, ಇತ್ತ ಚರಂಡಿ ವ್ಯವಸ್ಥೆಯೂ ಇಲ್ಲದೆ ಬಿದ್ದ ಮಳೆಯ ನೀರು ರಸ್ತೆಯಲ್ಲಿ ನಿಂತಿದ್ದು, ಮಕ್ಕಳು ಪ್ರತಿನಿತ್ಯ ಈ ರಸ್ತೆಯ ಮೂಲಕ ಶಾಲೆಗೆ ಹೋಗಬೇಕಾಗಿದೆ. ಇದರಿಂದ ಮಕ್ಕಳು ಶಾಲೆಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಗ್ರಾಮಸ್ಥರು ಈ ರಸ್ತೆಯಲ್ಲಿ ನಿತ್ಯ ಕೆಲಸಕ್ಕೆ ತಿರುಗಾಡಲು ಸಾಧ್ಯವಾಗದೆ ನರಕಯಾತನೆ ಅನುಭವಿಸುವಂತಾಗಿದೆ.

ಈ ರಸ್ತೆಯಲ್ಲಿ ಮಳೆಗಾಲದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿರುವ ಬಗ್ಗೆ ಎಷ್ಟೋ ಬಾರಿ ಪಂಚಾಯಿತಿ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತಂದು, ಪ್ರಯೋಜನವಾಗದೆ ಕೆಸರಿನಲ್ಲೇ ತಿರುಗಾಡುತ್ತ ದಿನ ಕಳೆಯುತ್ತಿದ್ದಾರೆ.

ಗ್ರಾಮದ ರಸ್ತೆಗಳಲ್ಲಿ ಮಳೆ ನೀರು ನಿಲ್ಲುತ್ತಿದ್ದು ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ಹರಡುವಿಕೆಯ ಆತಂಕ ಸೃಷ್ಟಿಸುತ್ತಿದೆ. ಈ ಬಗ್ಗೆ ಯಾವ ಅಧಿಕಾರಿಗಳು, ಜನಪ್ರತಿನಿಧಿಗಳು ತಲೆಕೆಡಿಸಿಕೊಳ್ಳದೆ ಇರುವುದು ಗ್ರಾಮಸ್ಥರಲ್ಲಿ ಆಕ್ರೋಶ ಉಂಟು ಮಾಡಿದೆ.

ಮೈದುಂಬಿ ಕಳೆಗಟ್ಟಿದ ತ್ರಿವೇಣಿ ಸಂಗಮ

ಪ್ರವಾಸಿಗರ ಆಕರ್ಷಣೆ, ನದಿಗೆ ಇಳಿಯದಂತೆ ಎಚ್ಚರಿಕೆ

ತಿ.ನರಸೀಪುರ, ಜು.17– ಭರ್ತಿಯಾದ ಕಬಿನಿ ಜಲಾಶಯದಿಂದ 50 ಸಾವಿರ ಕ್ಯುಸೆಕ್ ನೀರನ್ನು ನಾಲ್ಕು ಗೇಟ್‌ಗಳ ಮೂಲಕ ಹೊರ ಬಿಟ್ಟಿರುವುದರಿಂದ ಪಟ್ಟಣಕ್ಕೆ ಹೊಂದಿಕೊಂಡಂತಿರುವ ಕಬಿನಿ ನದಿ ತುಂಬಿ ಹರಿಯಲಾರಂಭಿಸಿದ್ದು, ತ್ರಿವೇಣಿ ಸಂಗಮ ಮೈದುಂಬಿ ಕಳೆಗಟ್ಟಿದೆ.

ಈ ಬಾರಿಯ ಮುಂಗಾರು ಮಳೆ ಉತ್ತಮವಾಗಿ ಆಗುತ್ತಿರುವುದರಿಂದ ಜಿಲ್ಲೆಯ ಕಬಿನಿ ಅಣೆಕಟ್ಟೆ ಭರ್ತಿಯಾಗಿ, ನದಿ ಪಾತ್ರದಲ್ಲಿ ನೀರು ತುಂಬಿ ಹರಿಯುತ್ತಿರುವುದರಿಂದ ಕಬಿನಿ ಅಂತ್ಯಗೊಳ್ಳುವ ತ್ರಿವೇಣಿ ಸಂಗಮವೀಗ ಉಕ್ಕಿ ಹರಿಯುವ ನೀರಿನಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಕಬಿನಿ ನದಿಯಲ್ಲಿ ಅಪಾಯದ ಮಟ್ಟದಲ್ಲಿ ನೀರು ತುಂಬಿ ಹರಿಯುತ್ತಿರುವುದರಿಂದ ತಾಲೂಕು ಆಡಳಿತ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಂಡಿದ್ದು, ತಹಶೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರು, ಕಬಿನಿ ಜಲಾಶಯದಿಂದ ಅಧಿಕ ಪ್ರಮಾಣದ ನೀರನ್ನು ಹೊರಬಿಡಲಾಗಿದ್ದು, ನದಿ ಪಾತ್ರದ ಸ್ಥಳಗಳಿಗೆ ಗ್ರಾಮಸ್ಥರು ಯಾವುದೇ ಕಾರಣಕ್ಕೂ ನದಿಗೆ ಇಳಿಯಬಾರದು. ಜಾನುವಾರುಗಳನ್ನು ಕೂಡಾ ನದಿ ಬಳಿಗೆ ಕೊಂಡೊಯ್ಯದಂತೆ ಎಚ್ಚರಿಕೆ ನೀಡುವಂತೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ತಿ.ನರಸೀಪುರ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಕಬಿನಿ ಜಲಾಶಯದಿಂದ ಅಧಿಕ ಪ್ರಮಾಣದ ನೀರನ್ನು ಬಿಟ್ಟಿರುವುದರಿಂದ ತಿ.ನರಸೀಪುರ ತ್ರಿವೇಣಿ ಸಂಗಮ ಸೇರುವ ಕಬಿನಿ ನದಿ ಮೈದುಂಬಿ ಹರಿಯುತ್ತಿರುವುದು.

ಪಟ್ಟಣದ ತಗ್ಗು ಪ್ರದೇಶಗಳು ಸೇರಿದಂತೆ ತಾಲೂಕಿನ ಹುಣಸೂರು, ಕೆಂಪಯ್ಯನಹುಂಡಿ, ಗರ್ಗೇಶ್ವರಿ, ಕೆಂಡನಕೊಪ್ಪಲು, ಅಕ್ಕೂರ್ ದೊಡ್ಡಿ, ಕಟ್ಟೆಪುರ, ಮಾರನಪುರ, ತಲಕಾಡು, ಮಾಲಂಗಿ ಹಾಗೂ ಕುಕ್ಕೂರು ಇನ್ನಿತರೇ ನದಿ ಪಾತ್ರದ ಜನವಸತಿ ಪ್ರದೇಶಗಳಲ್ಲಿ ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಸ್ಥಳೀಯ ಅಧಿಕಾರಿಗಳ ಮೂಲಕ ಸಾರ್ವಜನಿಕವಾಗಿ ತಿಳಿಸುವ ಮೂಲಕ ಜಾಗೃತಿ ಮೂಡಿಸಬೇಕೆಂದು ಕಟ್ಟುನಿಟ್ಟಿನ ಕ್ರಮಕ್ಕೆ ತಾಕೀತು ಮಾಡಿದ್ದರಿಂದ ತಾಲೂಕಿನ ಯಾವುದೇ ಗ್ರಾಮ ಪ್ರವಾಹಕ್ಕೆ ತುತ್ತಾಗಿರುವ ಬಗ್ಗೆ ವರದಿಯಾಗಿಲ್ಲ.

ಕೋಟೆಯಲ್ಲಿ ರೋಟರಿಯಿಂದ ದಾಖಲೆ ಪ್ರಮಾಣದ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

ರೋಟರಿ ಕ್ಲಬ್ ನೂತನ ತಂಡದ ಪದವಿ ಪ್ರದಾನ ಸಮಾರಂಭದಲ್ಲಿ ಶ್ಲಾಘನೆ

ಹೆಚ್.ಡಿ.ಕೋಟೆ, ಜು.17– ತಾಲೂಕಿನಲ್ಲಿ ರೋಟರಿ ಕ್ಲಬ್ ವತಿಯಿಂದ 1000 ಮಂದಿಗೆ ಕಣ್ಣಿನ ಪೊರೆ ತೆಗೆಯುವ ಶಸ್ತ್ರಚಿಕಿತ್ಸೆ ಮಾಡಿಸಿರುವುದು ದಾಖಲೆಯಾಗಿದೆ ಎಂದು ರೋಟರಿ ಮೇಜರ್ ಡೋನರ್, ಜಿಲ್ಲಾ ಗವರ್ನರ್ ಪಿ.ಕೆ. ರಾಮಕೃಷ್ಣನ್ ತಿಳಿಸಿದರು.

ಪಟ್ಟಣದ ಸಮೀಪವಿರುವ ಹೆಗ್ಗಡಾಪುರ ಗ್ರಾಮದಲ್ಲಿರುವ ಕಬಿನಿ ಫಾರಂನಲ್ಲಿ ನಡೆದ ರೋಟರಿ ಕ್ಲಬ್‌ನ ನೂತನ ತಂಡದ ಪದವಿ ಪ್ರದಾನ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಒಂದು ರೋಟರಿ ಸಂಸ್ಥೆಯು ಈ ರೀತಿಯ ಸೇವೆ ಸಲ್ಲಿಸುತ್ತಿರುವುದು ಜಿಲ್ಲೆಯಲ್ಲಿ ಇದೇ ಮೊದಲು. ಈ ಸೇವೆ ಮುಂದಿನ ದಿನಗಳಲ್ಲಿ ಇದೇ ರೀತಿ ಮುಂದುವರಿಯಲಿ ಎಂದರಲ್ಲದೆ, ತಾಲೂಕಿನಲ್ಲಿ ರೋಟರಿ ಕ್ಲಬ್ ಸಾರ್ವಜನಿಕ ಆಸ್ಪತ್ರೆಗೆ ಡಯಾಲಿಸಿಸ್ ಯಂತ್ರವನ್ನು ನೀಡಿದೆ ಎಂದರು.



ಹೆಚ್.ಡಿ.ಕೋಟೆ:ಪಟ್ಟಣದ ಸಮೀಪವಿರುವ ಹೆಗ್ಗಡಾಪುರ ಗ್ರಾಮದಲ್ಲಿರುವ ಕಬಿನಿ ಫಾರಂನಲ್ಲಿ ನಡೆದ ರೋಟರಿ ಕ್ಲಬ್‌ನ ನೂತನ ತಂಡದ ಪದವಿ ಪ್ರದಾನ ಸಮಾರಂಭ

ಅಧ್ಯಕ್ಷರಾಗಿ ಆಯ್ಕೆಯಾದ ಎಸ್.ಎನ್. ನಿರಂಜನ್ ಮಾತನಾಡಿ, ಕಳೆದ ಸಾಲಿನಲ್ಲಿ ನಮ್ಮ ಕ್ಲಬ್ ಹಲವಾರು ಜನಪರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಕಳೆದ ಸಾಲಿನಲ್ಲಿ 1000 ಮಂದಿಗೆ ತಾಲೂಕಿನಲ್ಲಿ ಕಣ್ಣು ಪೊರೆ ತೆಗೆಯುವ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ವಡ್ಡರಗುಡಿ ಗ್ರಾಮದ ಅಂಗನವಾಡಿಯನ್ನು ದತ್ತು ಪಡೆದು ಅಭಿವೃದ್ಧಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿಯೂ ಸಹ ಕ್ಲಬ್ ಸೇವೆಗಳು ಇದೇ ರೀತಿ ಮುಂದುವರೆಸಿಕೊಂಡು ಹೋಗಲಾಗುವುದು ಎಂದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾಗಿ ಶ್ರೀಕಾಂತ್, ಕಾರ್ಯದರ್ಶಿಯಾಗಿ ಬಿ.ಎನ್. ಶಿವಣ್ಣ, ಖಜಾಂಚಿಯಾಗಿ ನಾರಾಯಣ್, ಕ್ಲಬ್ ನಿರ್ದೇಶಕರಾಗಿ ಸ್ವಾಮಿ, ವೃತ್ತಿಪರ ನಿರ್ದೇಶಕರಾಗಿ ಆರ್ಮುಗಂ, ಸಮುದಾಯದ ನಿರ್ದೇಶಕರಾಗಿ ಗಣೇಶ್ ಲಾಡ್, ಅಂತರಾಷ್ಟ್ರೀಯ ನಿರ್ದೇಶಕರಾಗಿ ಕೆ.ಎಂ. ಮಹೇಶ್, ಯುವ ಜನ ನಿರ್ದೇಶಕರಾಗಿ ದೀಪು ನೇಮಕಗೊಂಡರು. ವೈದ್ಯರಾದ ಜಯಂತ್, ಮಹೇಶ್, ಮುರುಗೇಶ್, ಶಿವಕುಮಾರ್ ಮತ್ತು ಪತ್ರಕರ್ತ ನಾಗರಾಮ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನಿಕಟಪೂರ್ವ ಅಧ್ಯಕ್ಷ ಗಂಗಾಧರ್, ಸ್ವಾಮಿ, ಶಿವಣ್ಣ ಮಾದಾಪುರ, ಗಣೇಶ್ ಲಾಡ್, ಎ.ಜೆ. ರಾಜೀವ್, ಚಿನ್ನಬೆಳ್ಳಿ ರವಿ, ಡಾ. ಮುರುಗೇಶ್, ಕೆರೂರು ಶಿವಕುಮಾರ್, ಶ್ರೀಕಂಠಯ್ಯ, ಬಸವರಾಜು, ದೀಪಕ್ ಅರಸ್, ಸತೀಶ್ ಸುರಭಿ, ರಾಕೇಶ್ ದಾಸ್, ಆರ್ಮುಗಂ, ಡಾ. ಜಯಂತ್, ಡಾ. ಶಿವಕುಮಾರ್, ಟಿ.ಜಿ. ಬಸವರಾಜು, ಕಸ್ತೂರಿ ಮಹೇಶ್, ಧರ್ಮೇಶ್, ಚಂದ್ರು, ಕೇಶವ್, ಪ್ರಶಾಂತ್, ನಾಗರಾಜು, ಪ್ರಸಾದ್, ಎಚ್.ಎಂ. ಹರೀಶ್, ನಟರಾಜು, ಎಸ್.ಎಸ್. ಪಾರ್ಶ್ವನಾಥ್ ಜೈನ್, ಸಿದ್ದನಾಯಕ, ಬಿ.ಸಿ. ಭಾಗ್ಯೇಶ್ ಇದ್ದರು.

ನಿವೃತ್ತರಾದ ಮುಖ್ಯ ಶಿಕ್ಷಕರಿಗೆ ಅಭಿನಂದನೆ



ಸರಗೂರು ಬಿಡಗಲು ಪಡವಲು ವಿರಕ್ತ ಮಠದಲ್ಲಿ ವೀರಶೈವ ಲಿಂಗಾಯತ ಸಮಾಗಮ ಬಳಗ ವತಿಯಿಂದ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ರಾಜಣ್ಣ ಅವರನ್ನು ಪತ್ನಿ ಸಮೇತ ಅಭಿನಂದಿಸಲಾಯಿತು.

ಸರಗೂರು, ಜು.17– ಸರಳತೆಯಲ್ಲೂ ಸಿರಿವಂತಿಕೆಯಿರುತ್ತದೆ. ಆದರೆ ಅದನ್ನು ಗುರುತಿಸಲು ಹೃದಯವಂತಿಕೆ ಬೇಕು. ಎಂದು ಪಡವಲು ವಿರಕ್ತ ಮಠದ ಮಹದೇವ ಸ್ವಾಮೀಜಿ ಅಭಿಪ್ರಾಯಪಟ್ಟರು,

ಸರಗೂರು 11ನೇ ವಾರ್ಡ್ ಪಟ್ಟಣದ ಬಿಡಗಲು ಪಡವಲು ವೀರಕ್ತ ಮಠದಲ್ಲಿ ವೀರಶೈವ ಲಿಂಗಾಯತ ಸಮಾಗಮ ಬಳಗ ವತಿಯಿಂದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ರಾಜಣ್ಣ ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಶ್ರೀಗಳು ಮಾತನಾಡಿ, ಪ್ರತಿಭಾವಂತ ಶಿಕ್ಷಕರಾದ ರಾಜಣ್ಣ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದಾರೆ, ಎಲ್ಲರಲ್ಲಿಯೂ ಸಹಬಾಳ್ವೆ, ಸಹಕಾರ, ಕೂಡಿದ ಅನನ್ಯ ವ್ಯಕ್ತಿತ್ವ ಇವರದು. ಸದಾ ಹಸಮ್ಮುಖಿಯಾಗಿ ಹಲವು ವರ್ಷಗಳ ಅಮೂಲ್ಯ ಸೇವೆ ನೀಡಿ ಶಾಲಾ ಮಕ್ಕಳ ಹಾಗೂ ವೀರಶೈವ ಲಿಂಗಾಯತ ಸಮಾಗಮ ಬಳಗದ ಉಜ್ವಲ ಭವಿಷ್ಯಕ್ಕೆ ಕಾರಣಕರ್ತರಾದ ಇವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ವೀರಶೈವ ಲಿಂಗಾಯತ ಸಮಾಗಮ ಬಳಗದ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ನಿವೃತ್ತಿ ಪಡೆದ ಶಿಕ್ಷಕರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇದು ಉತ್ತಮ ಅವಕಾಶವಾಗಿದೆ. ಅವರು ಜ್ಞಾನದ ಸಂಪತ್ತನ್ನು ಹೊಂದಿದ್ದಾರೆ. ವಿದ್ಯಾರ್ಥಿಗಳಿಗೆ ಕೆಲವು ವಿಶೇಷ ಕೌಶಲ್ಯಗಳನ್ನು ಕಲಿಸಿದ ಗುರುವಾಗಿದ್ದಾರೆ ಎಂದು ತಿಳಿಸಿದರು,

ಇದೇ ವೇಳೆ ವೀರಶೈವ ಲಿಂಗಾಯತ ಸಮಾಗಮ ಬಳಗದ ವತಿಯಿಂದ ನಿವೃತ್ತಿ ಪಡೆದ ರಾಜಣ್ಣ ಹಾಗೂ ಶ್ರೀಮತಿ ಶೋಭಾ ರಾಜಣ್ಣ ದಂಪತಿಯನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಧನುಷ್, ಹಾಗೂ ಲಕ್ಷ್ಮಿ ಚಂದನ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೀರಶೈವ ಲಿಂಗಾಯತ ಸಮಾಗಮ ಬಳಗದ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಸಂಘದ ಸದಸ್ಯರಾದ ರಾಜೇಂದ್ರ, ಟಿ.ಎಂ.ಸುರೇಶ್ ಕುಮಾರ್, ಪರಶಿವಮೂರ್ತಿ, ಜಗದೀಶ್, ರಾಜಶೇಖರ ಸ್ವಾಮಿ, ಕಿರಣ್, ಮಲ್ಲೇಶ್, ಶಿವರುದ್ರಪ್ಪ ಭಾಗವಹಿಸಿದ್ದರು


ಜಯಪುರ ಬಳಿ ಸ್ನೇಹಿತನಿಂದ ಇರಿತಕ್ಕೊಳಗಾಗಿದ್ದ ಯುವಕ ಸಾವು

ಜಯಪುರ, ಜು.17– ಸ್ನೇಹಿತನಿಂದ ಇರಿತಕ್ಕೊಳಗಾಗಿದ್ದ ಯುವಕ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಮೈಸೂರು ತಾಲೂಕು ಡಿ.ಸಾಲುಂಡಿ ಗ್ರಾಮದ ನಾಗೇಗೌಡ ಎಂಬವರ ಪುತ್ರ ವಿಜಯ್ ಭಾಸ್ಕರ್(32) ಕೊಲೆಗೀಡಾದವನಾಗಿದ್ದು, ಈತನನ್ನು ಸ್ನೇಹಿತ ದೇವರಾಜ್ ಭಾನುವಾರ ರಾತ್ರಿ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ. ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವಿಜಯ ಭಾಸ್ಕರ್ ಇಂದು ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.



ವಿವರ: ವಿಜಯ್ ಭಾಸ್ಕರ್ ಮತ್ತು ಸ್ನೇಹಿತ ದೇವರಾಜ್ ಭಾನುವಾರ ರಾತ್ರಿ ಕೆಂಚಲಗೂಡು ಸಮೀಪದ ಬಾರ್ ಮುಂದೆ ಕ್ಷುಲ್ಲಕ ವಿಚಾರಕ್ಕೆ ಜಗಳವಾಡಿದ್ದಾರೆ. ಸ್ಥಳದಲ್ಲಿದ್ದವರು ಜಗಳ ಬಿಡಿಸಿ ಕಳುಹಿಸಿದ್ದಾರೆ. ವಿಜಯ್ ಭಾಸ್ಕರ್ ತನ್ನ ದ್ವಿಚಕ್ರ ವಾಹನದಲ್ಲಿ ಮತ್ತೊಬ್ಬ ಸ್ನೇಹಿತ ಕಾರ್ತಿಕ್ ಜೊತೆ ಡಿ. ಸಾಲುಂಡಿ ಯ ಮನೆಗೆ ತೆರಳುತ್ತಿದ್ದಾಗ, ಹಿಂದಿ ನಿಂದ ಬಂದ ದೇವರಾಜ್ ಕೆಂಚಲಗೂಡು ಗೇಟ್‌ನ ಐಶ್ವರ್ಯ ಕಲ್ಯಾಣ ಮಂಟಪದ ಬಳಿ ಅಡ್ಡಗಟ್ಟಿ ವಿಜಯ ಭಾಸ್ಕರ್‌ನನ್ನು ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದಾನೆ. ಬಿಡಿಸಲು ಹೋದ ಕಾರ್ತಿಕ್‌ನನ್ನೂ ಗಾಯಗೊಳಿಸಿದ್ದಾನೆ. ತೀವ್ರ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ವಿಜಯ್ ಭಾಸ್ಕರ್‌ನನ್ನು ಸಂಬಂಧಿಕರು ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಆತ ಇಂದು ಸಾವನ್ನಪ್ಪಿದ್ದಾನೆ ಘಟನೆ ಸಂಬಂಧ ಭಾನುವಾರ ಜಯಪುರ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ಈಗ ವಿಜಯ್ ಭಾಸ್ಕರ್ ಸಾವನ್ನಪ್ಪಿದ್ದರಿಂದ ಪೊಲೀಸರು ಕೊಲೆ ಯತ್ನ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆ



ಹುಣಸೂರು ತಾಲೂಕು ಬೋಳೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಡಿ.ಶಿವಕುಮಾರ್ ಹೊಸರಾಮೇನಹಳ್ಳಿ ಅವರು ಜೆಡಿಎಸ್ ಬೆಂಬಲದಿಂದ ಅವಿರೋಧವಾಗಿ ಆಯ್ಕೆಯಾಗಿದ್ದು, ವಿಜೇತರನ್ನು ಶಾಸಕ ಜಿ.ಡಿ. ಹರೀಶ್‌ಗೌಡ ಅಭಿನಂದಿಸಿದರು. ಚುನಾವಣಾಧಿಕಾರಿ ಅನಿಲ್ ಅವಿರೋಧ ಆಯ್ಕೆ ಘೋಷಿಸಿದರು. ಗ್ರಾಪಂನ 17 ಸದಸ್ಯರಲ್ಲಿ 15 ಸದಸ್ಯರು ಭಾಗವಹಿಸಿದ್ದರು. ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಜೆಡಿಎಸ್ ಮುಖಂಡರಾದ ಹೊಸರಾಮನಹಳ್ಳಿ ಲೋಕೇಶ್ ಹಾಗೂ ಗ್ರಾಪಂ ಸದಸ್ಯರು ಹಾಜರಿದ್ದರು.

ಸಫಾಯಿ ಕರ್ಮಚಾರಿ ಕಾವಲು ಸಮಿತಿಗೆ ನೇಮಕ



ಪ್ರಸನ್ನ



ಮಹದೇವ

ತಿ.ನರಸೀಪುರ, ಜು.16– ಸಫಾಯಿ ಕರ್ಮಚಾರಿ ಕಾವಲು ಸಮಿತಿಯ ತಿ. ನರಸೀಪುರ ತಾಲೂಕು ಘಟಕದ ಅಧ್ಯಕ್ಷರಾಗಿ ಪುರಸಭೆಯ ಪೌರಕಾರ್ಮಿಕ ಮಹದೇವ ಹಾಗೂ ಕಾರ್ಯದರ್ಶಿಯಾಗಿ ಪ್ರಸನ್ನ ಆಯ್ಕೆಯಾಗಿದ್ದಾರೆಂದು ಸಫಾಯಿ ಕರ್ಮಚಾರಿ ಕಾವಲು ಸಮಿತಿ ವಿಭಾಗಿಯ ಸಂಚಾಲಕ ಕೆ. ನಂಜಪ್ಪ ಬಸವನಗುಡಿ ತಿಳಿಸಿದ್ದಾರೆ.

ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮತದಾನದ ಅರಿವು

ಬನ್ನೂರು, ಜು.17– ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ, ಚುನಾವಣಾ ಸಾಕ್ಷರತಾ ಕ್ಲಬ್ ವತಿಯಿಂದ ವಿದ್ಯಾರ್ಥಿಗಳಿಗೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಮೌಲ್ಯದ ಬಗ್ಗೆ ಅರಿವು ಮೂಡಿಸುವಂತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂತೆಮಾಳದಲ್ಲಿರುವ ಕಾಲೇಜಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ವಿದ್ಯಾರ್ಥಿಗಳಿಂದಲೇ ತರಗತಿ ಪ್ರತಿನಿಧಿಗಳನ್ನು ಮಾದರಿ ಮತದಾನ ಮಾಡುವ ಮೂಲಕ ಅರಿವು ಮೂಡಿಸಲಾಯಿತು. ಚುನಾವಣೆಗೆ ಸಂಬಂಧಿಸಿದಂತೆ ಪೋಸ್ಟರ್ ಮೇಕಿಂಗ್ ಹಾಗೂ ಕೊಲ್ಯಾಜ್ ಮೇಕಿಂಗ್ ಒಳಗೊಂಡಂತೆ ವಸ್ತು ಪ್ರದರ್ಶನ ಏರ್ಪಡಿಸಿ ತಿಳುವಳಿಗೆ ಮೂಡಿಸಲಾಯಿತು.



ಮತದಾನದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳು.

ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಬನ್ನೂರು, ಜು.17– ಪಟ್ಟಣದ ಪರಿಶಿಷ್ಟ ಜಾತಿ ನೌಕರರ ಸಂಘದ ವತಿಯಿಂದ ಬನ್ನೂರು ಹೋಬಳಿಯ ಶಾಲಾ ಕಾಲೇಜಿನಲ್ಲಿ, 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ವ್ಯಾಸಂಗ ಮಾಡಿ, ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ, ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಬನ್ನೂರು ಹೋಬಳಿಯ ಆಸಕ್ತ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳೊಂದಿಗೆ ಆಗಸ್ಟ್ 15ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿ.ರಂಗರಾಜು 9880729022. ಬಿ.ವಿ.ಸ್ವಾಮಿ 8748837598 ಅವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಶ್ರೀ ವೀರಭದ್ರೇಶ್ವರಸ್ವಾಮಿ ದೇವಾಲಯದಲ್ಲಿ ಆಷಾಢಪೂಜೆ

ಮೂಗೂರು, ಜು.17– ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ದೇವಾಲಯದಲ್ಲಿ ಆಷಾಢ ಮಾಸದ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗ್ರಾಮದ ಮೂಡಲ ಬೀದಿಯಲ್ಲಿ ನಿರ್ಮಾಣಗೊಂಡಿರುವ ಪುರಾತನ ಕಾಲದ ಶ್ರೀ ವೀರಭದ್ರೇಶ್ವರ ಸ್ವಾಮಿಯ ದೇಗುಲದ ಆವರಣದಲ್ಲಿ ಮಂಗಳವಾರ ಮುಂಜಾನೆ ಹೋಮ ಹಾಗೂ ಧಾರ್ಮಿಕ ಆಚರಣೆಯೊಂದಿಗೆ ಪೂಜಾ ಕೈಂಕರ್ಯ ನಡೆಯಿತು. ಸಂಜೆ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕದ ಬಳಿಕ ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆ, ಮಹಾ ಮಂಗಳಾರತಿ ನಡೆಯಿತು. ಈ ಸಂದರ್ಭದಲ್ಲಿ ದೇವಾಲಯದ ಅರ್ಚಕರಾದ ಸಂದ್ರಪ್ಪ ಹಾಗೂ ಅಕ್ಕೂರು ಅಭಿಷೇಕ್, ಗ್ರಾಮದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.



ಮಾಜಿ ಶಾಸಕ ಮಂಜುನಾಥ್‌ಗೆ ಅಭಿನಂದನೆ



ಹುಣಸೂರು ತಾಲೂಕು ಹನಗೋಡು ಹೋಬಳಿಯ ಕೊತ್ತೆಗಾಲ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರವಿಕುಮಾರ್ ಅವರು ಹುಣಸೂರಿನ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರನ್ನು ಅಭಿನಂದಿಸಿದರು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಗ್ರಾಮಾಂತರ ಎಸ್‌ಟಿ ಘಟಕದ ಕಾರ್ಯದರ್ಶಿ ಶಶಿಕುಮಾರ್ ಇದ್ದಾರೆ.

ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು: ಮೈಸೂರಿನ ಅಮೃತಾಂಶು ಟ್ರಸ್ಟ್, ನಾರಾಯಣ ಹೃದಯಾಲಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣೆ ಇಲಾಖೆ, ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಜು. 22 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ # 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945270646 ಸಂಪರ್ಕಿಸಬಹುದು.

ಕಾಲೇಜು ಅಭಿವೃದ್ಧಿ ಸಮಿತಿ ಸಭೆ




ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಕಾಲೇಜು ವಿಭಾಗದ ಕಾಲೇಜು ಅಭಿವೃದ್ಧಿ ಸಮಿತಿಯ ಸಭೆ, ಸಮಿತಿ ಅಧ್ಯಕ್ಷ ಶಿವಕುಮಾರ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಮಿತಿ ಸದಸ್ಯರಾದ ದೀಲಿಪ್, ಮಹದೇವ, ನಾಗರಾಜು, ಕಾಲೇಜಿನ ಪ್ರಭಾರ ಪ್ರಾಂಶುಪಾಲ ಬಿ.ಮಹೇಶ್, ರಾಜೇಶ್, ಜಯಣ್ಣ, ಪುಟ್ಟರಸ ಹಾಗೂ ಉಪನ್ಯಾಸಕ ವರ್ಗ ಹಾಜರಿದ್ದರು.

ಜು. 21ರಂದು ವೀರಶೈವ ಲಿಂಗಾಯಿತ ಮಹಾಸಭೆಗೆ ಚುನಾವಣೆ

ನಮ್ಮನ್ನು ಗೆಲ್ಲಿಸಿದರೆ ವೀರಶೈವ ಸಮಾಜದ ಅಭಿವೃದ್ಧಿಗೆ ಶ್ರಮಿಸುವೆ

ತಿ.ನರಸೀಪುರ, ಜು.17– ಅಖಿಲ ಭಾರತ ವೀರಶೈವ ಮಹಾಸಭಾಕ್ಕೆ ಜು.21ರಂದು ಚುನಾವಣೆ ನಡೆಯಲಿದೆ. ತಾಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಆಲಗೂಡು ಪ್ರಾಥಮಿಕ ಸಹಕಾರ ಸಂಘದ ಮಾಜಿ ಅಧ್ಯಕ್ಷ ವಿ. ವೀರಭದ್ರಪ್ಪ, ನನ್ನನ್ನು ಮತ್ತು ನಮ್ಮ ತಂಡದ 7 ಮಂದಿ ನಿರ್ದೇಶಕರನ್ನು ಆಯ್ಕೆ ಮಾಡಿದರೆ ಮುಂದಿನ ದಿನಗಳಲ್ಲಿ ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದಿದ್ದಾರೆ.



ಚುನಾವಣಾ ಪ್ರಚಾರ ನಡೆಸುತ್ತಿರುವ ವೀರಶೈವ ಮಹಾಸಭಾ ಚುನಾವಣಾ ಆಕಾಂಕ್ಷಿಗಳು.

ತಾಲೂಕಿನ ಕಾವೇರಿಪುರ ತಲಕಾಡು ಮತ್ತಿತರ ಗ್ರಾಮದಲ್ಲಿ ನಡೆದ ವೀರಶೈವ ಸಮಾಜದ ಮುಖಂಡರು ಮತ್ತು ಮತದಾರರ ಸಭೆಯಲ್ಲಿ ಮಾತನಾಡಿ, ನಮಗೆ ಈ ಬಾರಿ ಅವಕಾಶ ಕಲ್ಪಿಸಿದರೆ ಸಮಾಜ ಬಾಂಧವರ ಋಣ ತೀರಿಸಲು ಎಲ್ಲರೊಡಗೂಡಿ ದುಡಿಯುತ್ತೇನೆ. ನಾವು ಚುನಾಯಿತರಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದು, ಅದರಂತೆ ನಡೆದುಕೊಳ್ಳುವುದಾಗಿ ತಿಳಿಸಿದರು.

ಈಗ 1200 ಮಂದಿ ಮಾತ್ರ ಸಂಘಕ್ಕೆ ಸದಸ್ಯರಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸದಸ್ಯರನ್ನು ನೇಮಕ ಮಾಡುತ್ತೇವೆ. ಹಲವಾರು ವರ್ಷಗಳಿಂದ ಸಮಾಜದ ಏಳಿಗೆಗೆ ಕೆಲಸ ಮಾಡುತ್ತಿದ್ದು, ನನಗೆ ಬಾಂಧವರು ಬೆಂಬಲ ನೀಡಬೇಕು ಎಂದು ಕೋರಿದರು.

ವೀರಶೈವ ಲಿಂಗಾಯಿತ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರ ಮತ್ತು ಸಂಘದ ಸವಲತ್ತುಗಳನ್ನು ಕೊಡಿಸಿ ಅದರೊಂದಿಗೆ ಸಂಘದ ವತಿಯಿಂದ ಉದ್ಯೋಗ ಮೇಳ ಸೇರಿದಂತೆ ಇತರ ಕೌಶಲ್ಯ ತರಬೇತಿ ಶಿಬಿರ ನಡೆಸುವ ಭರವಸೆ ನೀಡಿದರು.

ಜು.21 ರಂದು (ಭಾನುವಾರ) ಪಟ್ಟಣದ ವಿವೇಕಾನಂದ ನಗರದಲ್ಲಿರುವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ಬೆಳಗ್ಗೆ 8 ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಸಮಾಜದ ಬಾಂಧವರು ಕಡ್ಡಾಯವಾಗಿ ಭಾಗವಹಿಸಿ ಮತದಾನ ಮಾಡಬೇಕು ಎಂದು ಕೋರಿಕೊಂಡರು.

ನಿರ್ದೇಶಕ ಸ್ಥಾನದ ಅಭ್ಯರ್ಥಿಗಳಾದ ಕಿರಗಸೂರು ಗ್ರಾಮ ಸದಸ್ಯ ಬಿ.ಮಹದೇವ ಸ್ವಾಮಿ, ಚೆನ್ನಮಲ್ಲಿಕಾರ್ಜುನ ಸ್ವಾಮಿ, (ಕಾರ್ ಮಲ್ಲಪ್ಪ), ಪುಟ್ಟಬುದ್ಧಿ, ಟಿ.ಸಿ. ಮಲ್ಲೇಶ್, ಕೆ.ವಿ.ಶಿವಶಂಕರ್ ಹಾಗೂ ಜೆಎಸ್‌ಎಸ್ ಎಂ.ಸಂತೋಷ್ ಅವರನ್ನು ಕಣಕ್ಕಿಳಿಸಿದ್ದು ಇವರಿಗೆ ಹೆಚ್ಚು ಮತಗಳ ಅಂತರದ ಗೆಲುವು ತಂದುಕೊಡುವಂತೆ ಮನವಿ ಮಾಡಿದರು.

ಮುಖಂಡರಾದ ಚುನಾವಣಾ ಉಸ್ತುವಾರಿ ನಿವೃತ್ತ ಅಪಾರ ಆಯುಕ್ತ ಹೇಳವರಹುಂಡಿ ಸಿದ್ದಪ್ಪ, ಜೆಡಿಎಸ್ ಕ್ಷೇತ್ರ ಅಧ್ಯಕ್ಷ ಸಿಬಿ ಹುಂಡಿ ಚಿನ್ನಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನೆರೆಗ್ಯಾತನಹಳ್ಳಿ ಕುಮಾರಸ್ವಾಮಿ, ನಿವೃತ್ತ ಶಿಕ್ಷಕ ಪುಟ ಬುದ್ಧಿ, ಗ್ರಾಮ ಮಾಜಿ ಅಧ್ಯಕ್ಷ ಪ್ರಕಾಶ್, ಕುರುಬರು ಬ್ಯಂಗೇಶ್, ಕಾವೇರಿಪುರದ ರುದ್ರಸ್ವಾಮಿ, ದೊಡ್ಡನುಂಡಿ ಸುರೇಶ್, ಬಸವರಾಜ್, ಚಿಕ್ಕ ಭೂವಳ್ಳಿನವೀನ್, ಶಾಮಿಯಾನ ನಾಗೇಶ್, ಹೆಳವರಹುಂಡಿ ಪ್ರಭು, ಡೈರಿ ಅಧ್ಯಕ್ಷ ಡಿಎಲ್ ಮಹದೇವಪ್ಪ, ಎಂಎಲ್ ಹುಂಡಿ ಪ್ರಭುಸ್ವಾಮಿ, ಮುಡುಕನಪುರ ಮಹದೇವಸ್ವಾಮಿ, ಸಜ್ಜಲೂರು ಚಂದ್ರಪ್ಪ, ಬಜ್ಜಿ ನಿಂಗಪ್ಪ ಹೊಸೂರುಂಡಿ ಸುರೇಶ್, ಮುಖಂಡರು ಹಾಜರಿದ್ದರು.

ಮಾದೇಗೌಡ ನಿಧನ

ಹೆಚ್.ಡಿ.ಕೋಟೆ, ಜು.17– ಪಟ್ಟಣದ ವಿಶ್ವನಾಥಯ್ಯ ಕಾಲೋನಿ ವಾಸಿ ಮಾದೇಗೌಡ (75) ಬುಧವಾರ ನಿಧನರಾದರು.



ಮೃತರು ಪತ್ನಿ ಚಂದ್ರಕುಮಾರಿ, ಇಬ್ಬರು ಮಕ್ಕಳಾದ ಇಂಜಿನಿಯರ್ ಪುರುಷೋತ್ತಮ ಮತ್ತು ಡಾಕ್ಟರ್ ಷಣ್ಮುಗ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ತಾಳೆ ಬೆಳೆ ಯೋಜನೆಯಲ್ಲಿ ಇಲಾಖೆ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಅವರು ಹೆಚ್.ಡಿ.ಕೋಟೆಯಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿದ್ದರು.

ಬುಧವಾರ ಸಂಜೆ ಸುಮಾರು ಆರು ಗಂಟೆ ಸಮಯದಲ್ಲಿ ತಿ.ನರಸೀಪುರದಲ್ಲಿರುವ ಅವರ ನಿವಾಸದಲ್ಲಿ ಹೃದಯಾಘಾತವಾಗಿ ಮೃತಪಟ್ಟಿರುತ್ತಾರೆ. ಮೃತರ ಅಂತ್ಯಕ್ರಿಯೆ ತಿ.ನರಸೀಪುರದಲ್ಲಿ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಸಿಐಐಎಲ್ 56ನೇ ಸಂಸ್ಥಾಪನಾ ದಿನಾಚರಣೆ

ರಾಷ್ಟ್ರದ ಪ್ರಾದೇಶಿಕ ಭಾಷೆಗಳ ಯೋಜನಾಬದ್ಧ ಅಧ್ಯಯನಕ್ಕೆ ಎಐ ತಂತ್ರಜ್ಞಾನ ಬಳಕೆ ಅಗತ್ಯ

ನವದೆಹಲಿಯ ಸಿಎಸ್‌ಟಿಟಿ ಅಧ್ಯಕ್ಷ ಪ್ರೊ.ಗಿರೀಶ್‌ನಾಥ್ ಝಾ ಅಭಿಮತ

ಮೈಸೂರು, ಜು.17(ಪಿಎಂ)– ರಾಷ್ಟ್ರದ ಪ್ರಾದೇಶಿಕ ಭಾಷೆಗಳ ಯೋಜನಾಬದ್ಧ ಅಧ್ಯಯನ ನಡೆಸುವುದು ಅಗತ್ಯವಾಗಿದ್ದು, ಇದಕ್ಕಾಗಿ ಆಧುನಿಕ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ನವದೆಹಲಿಯ ವೈಜ್ಞಾನಿಕ ಮತ್ತು ತಾಂತ್ರಿಕ ಪರಿಭಾಷೆಯ ಆಯೋಗದ (ಸಿಎಸ್‌ಟಿಟಿ) ಅಧ್ಯಕ್ಷ ಪ್ರೊ.ಗಿರೀಶ್‌ನಾಥ್ ಝಾ ಹೇಳಿದರು.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ (ಸಿಐಐಎಲ್) ಪ್ರಿವ್ಯೂ ಥಿಯೇಟರ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಂಸ್ಥೆಯ (ಸಿಐಐಎಲ್) 56ನೇ ಸಂಸ್ಥಾಪನಾ ದಿನಾಚರಣೆಯಲ್ಲಿ 'ದೊಡ್ಡ ಭಾಷಾ ಮಾದರಿಗಳ ಸಂದರ್ಭದಲ್ಲಿ ನೈಸರ್ಗಿಕ ಭಾಷಾ ಸಂಸ್ಕರಣೆಯಲ್ಲಿನ ಇತ್ತೀಚೆಗಿನ ಪ್ರವೃತ್ತಿಗಳು' ಕುರಿತು ಅವರು ಮುಖ್ಯ ಭಾಷಣ ಮಾಡಿದರು.

ಭಾರತವು ಪ್ರಾದೇಶಿಕ ನೆಲೆಯಲ್ಲಿ ಬಹು ಭಾಷೆಗಳನ್ನು ಒಳಗೊಂಡಿದ್ದು, ಇಂತಹ ಸನ್ನಿವೇಶದಲ್ಲಿ ಭಾಷಾಶಾಸ್ತ್ರದ ಅಧ್ಯಯನ ವ್ಯಾಪಕವಾಗಿ ನಡೆಯುವುದು ಅಗತ್ಯ. ನಮ್ಮ ಪ್ರಾದೇಶಿಕ ಭಾಷೆಗಳು ಪರಂಪರಾಗತ ಶಕ್ತಿಗಳಾಗಿವೆ. ಭಾರತೀಯ ಜ್ಞಾನ ಭಂಡಾರವು ಭಾಷೆಗಳಲ್ಲಿ ಅಡಗಿದೆ. ಈ ಹಿನ್ನೆಲೆಯಲ್ಲಿ ಬಹುಭಾಷೀಯ ದೇಶಕ್ಕೆ ಭಾಷಾ ವಿಜ್ಞಾನದ ಅಧ್ಯಯನ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಅತ್ಯಂತ ಜಾಗರೂಕತೆ ವಹಿಸಬೇಕು. ಭಾರತದಲ್ಲಿ ಕೃತಕ ಬುದ್ಧಿಮತ್ತೆ ಅಭಿವೃದ್ಧಿ ಇಲ್ಲಿನ ಭಾಷಾ ದತ್ತಾಂಶವನ್ನು ಅವಲಂಬಿಸಿದೆ ಎಂದು ತಿಳಿಸಿದರು. ವೇದಾಂಗಗಳಾದ ಶಿಕ್ಷಾ (ಧ್ವನಿ ಶಾಸ್ತ್ರ), ಕಲ್ಪ (ಧರ್ಮಾಚರಣೆ), ವ್ಯಾಕರಣ, ನಿರುಕ್ತ (ವ್ಯುತ್ಪತ್ತಿಶಾಸ್ತ್ರ), ಛಂದಸ್ಸು ಮತ್ತು ಜ್ಯೋತಿಷ್ಯದಲ್ಲಿನ ನಾಲ್ಕು ಅಂಗಗಳು ಭಾಷೆಗೆ ಸಂಬಂಧಪಟ್ಟಿವೆ. ಭಾರತದ ಎಲ್ಲಾ ಜ್ಞಾನ ವಾಹಿನಿಗಳು ಭಾಷೆಯನ್ನೇ ಅವಲಂಬಿಸಿದ್ದು, ಭಾಷೆ ದಾಖಲೀಕರಣದ ಜೊತೆಯಲ್ಲೇ ವಿಶ್ಲೇಷಣೆ, ದೃಶ್ಯೀಕರಣ ಆಗಬೇಕಿದೆ. ದತ್ತಾಂಶ ಸಂಗ್ರಹವು ಸರಳವಾಗಿ ತಂತ್ರಜ್ಞಾನಕ್ಕೆ ನೆರವಾಗುವಂತಿರಬೇಕು ಎಂದು ವಿಶ್ಲೇಷಿಸಿದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಬುಧವಾರ ಸಂಸ್ಥೆಯ 56ನೇ ಸಂಸ್ಥಾಪನಾ ದಿನಾಚರಣೆಯನ್ನು ನವದೆಹಲಿಯ ಸಿಎಸ್‌ಟಿಟಿ ಅಧ್ಯಕ್ಷ ಪ್ರೊ.ಗಿರೀಶ್‌ನಾಥ್ ಝಾ ಉದ್ಘಾಟಿಸಿದರು.

ಕನ್ನಡ ಸೇರಿ 3 ಭಾಷೆಯಲ್ಲಿ ಪದಕೋಶ: ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ದೇಶದ ವಿವಿಧ ಭಾಷೆಗಳಲ್ಲಿ ಪದಕೋಶ ರಚಿಸುವ ಕಾರ್ಯವನ್ನು ಸಿಎಸ್‌ಟಿಟಿ ಕೈಗೆತ್ತಿಕೊಂಡಿದೆ. ಹಿಂದಿ–ಇಂಗ್ಲಿಷ್–ಕನ್ನಡ ಸೇರಿದಂತೆ ಮೂರು ಭಾಷೆಗಳಲ್ಲಿ ಪದಕೋಶ ರೂಪಿಸುವ ಯೋಜನೆ ಅನುಷ್ಠಾನಗೊಳಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳಲ್ಲಿ ಬಳಸುವ ಇಂಗ್ಲಿಷ್ ಪದಗಳಿಗೆ ಸಮಾನಾರ್ಥಕ ಪದ ಹುಡುಕುವ ಅಥವಾ ಸೂಚಿಸುವ ಕಾರ್ಯಕ್ಕೆ ವಿವಿಧ ರಾಜ್ಯಗಳ ನಾನಾ ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳ ಪ್ರಾಧ್ಯಾಪಕರನ್ನು ನಿಯೋಜಿಸಲಾಗಿದೆ ಎಂದು ಪ್ರೊ.ಗಿರೀಶ್‌ನಾಥ್ ಝಾ ಮಾಹಿತಿ ನೀಡಿದರು.

ಪುಸ್ತಕ ಮಾರಾಟ ಪೋರ್ಟಲ್

ಸಿಐಐಎಲ್‌ನ ನೂತನ ಆನ್‌ಲೈನ್ ಪುಸ್ತಕ ಮಾರಾಟ ಪೋರ್ಟಲ್‌ನಲ್ಲಿ (https://store.ciil.org) ಸಂಸ್ಥೆ ಈವರೆಗೆ ಪ್ರಕಟಿಸಿದ ಎಲ್ಲಾ ಪುಸ್ತಕಗಳು ದೊರೆಯಲಿವೆ. ಈ ಪೋರ್ಟಲ್‌ನಲ್ಲಿ ಆನ್‌ಲೈನ್ ಪಾವತಿಗೂ ಅವಕಾಶವಿದ್ದು, ಪುಸ್ತಕಗಳ ಹೋಂ ಡೆಲಿವರಿ ಸೌಲಭ್ಯ ದೊರೆಯಲಿದೆ. ಪ್ರಸ್ತುತ ದೇಶದ 100ಕ್ಕೂ ಹೆಚ್ಚು ಭಾಷೆಗಳಲ್ಲಿ 497 ಶೀರ್ಷಿಕೆಗಳ ಪುಸ್ತಕಗಳನ್ನು ಪಡೆಯಬಹುದು ಎಂದು ಸಿಐಐಎಲ್‌ನ ಜೂನಿಯರ್ ಸಂಶೋಧನಾ ಅಧಿಕಾರಿ ಡಾ.ನಾರಾಯಣ್‌ಕುಮಾರ್ ಚೌಧರಿ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು.

ಪುಸ್ತಕ ಮಾರಾಟ ಪೋರ್ಟಲ್‌ಗೆ ಚಾಲನೆ: ಸಿಐಐಎಲ್ ಸಂಸ್ಥೆಯ ಆನ್‌ಲೈನ್ ಪುಸ್ತಕ ಮಾರಾಟ ಪೋರ್ಟಲ್‌ಗೆ ವರ್ಚುವಲ್ ಮೋಡ್‌ನಲ್ಲಿ ಚಾಲನೆ ನೀಡಿದ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಜಂಟಿ ಕಾರ್ಯದರ್ಶಿ ನೀತಾ ಪ್ರಸಾದ್ ಮಾತನಾಡಿ, ಎರಡು ದಶಕದ ಹಿಂದಿದ್ದ ಬೋಧನೆ, ಕಲಿಕೆ, ಅಧ್ಯಯನ ಕ್ರಮಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಅಂತೆಯೇ ಮುಂದಿನ 20 ವರ್ಷಗಳಲ್ಲಿ ಪ್ರಸ್ತುತದ ಮಾದರಿಯಲ್ಲಿ ವ್ಯಾಪಕ ಬದಲಾವಣೆ ಆಗಲಿದೆ. ಈ ಹಿನ್ನೆಲೆಯಲ್ಲಿ ಎದುರಾಗುವ ಸವಾಲುಗಳನ್ನು ಭಾಷಾ ವಿಜ್ಞಾನಿಗಳು ಸಮರ್ಥವಾಗಿ ನಿಭಾಯಿಸಬೇಕಾಗುತ್ತದೆ ಎಂದು ತಿಳಿಸಿದರು.

ದೇಶವನ್ನು ಸಜ್ಜುಗೊಳಿಸಲು ಉತ್ತಮ ಸಂಶೋಧಕರು, ಭಾಷಾ ವಿಜ್ಞಾನಿಗಳು, ಅನುವಾದಕರು ಸೇರಿದಂತೆ ಮಾನವ ಸಂಪನ್ಮೂಲ ಮಹತ್ವದ ಪಾತ್ರ ವಹಿಸಲಿದೆ. ಅಂತಹ ವ್ಯವಸ್ಥೆಯನ್ನು ಭಾರತೀಯ ಭಾಷಾ ಸಂಸ್ಥಾನ ನೀಡಬೇಕಿದೆ. ಪ್ರಾದೇಶಿಕ ಭಾಷೆಗಳಲ್ಲಿಯೇ ಪ್ರಾಥಮಿಕ ಶಿಕ್ಷಣ ದೊರೆಯಬೇಕೆಂದು ರಾಷ್ಟ್ರೀಯ ಶಿಕ್ಷಣ ನೀತಿ–2020ರಲ್ಲಿ ಪ್ರತಿಪಾದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯು ದೇಶದ ಭಾಷೆಗಳ ದಾಖಲೀಕರಣ, ಅಭಿವೃದ್ಧಿ, ಸಂಶೋಧನೆಯಲ್ಲಿ ತೊಡಗಿಸಿಕೊಂಡು ನೀಡುವ ಕೊಡುಗೆ ಮುಖ್ಯವಾಗುತ್ತದೆ ಎಂದು ಹೇಳಿದರು.

ನವದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ನ ನಿರ್ದೇಶಕ ಕರ್ನಲ್ ಯುವರಾಜ್ ಮಲ್ಲಿಕ್ ಆನ್‌ಲೈನ್ ಮೂಲಕ 'ಭಾರತೀಯ ಭಾಷೆಗಳಲ್ಲಿ ಜ್ಞಾನ ಪತ್ಯ: ಉತ್ಪಾದನೆಯಿಂದ ವಿತರಣೆವರೆಗೆ' ಕುರಿತು ಉಪನ್ಯಾಸ ನೀಡಿದರು. ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪನಿರ್ದೇಶಕರಾದ ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಪ್ರೊ.ಪಿ.ಆರ್.ಧರ್ಮೇಶ್ ಫೆರ್ನಾಂಡಿಸ್, ಸಂಶೋಧನಾ ಅಧಿಕಾರಿ ಸುಜಯ್ ಸರ್ಕಾರ್ ಮತ್ತಿತರರು ಹಾಜರಿದ್ದರು.

ಅಂಗಾಂಗ ದಾನ ಮಾಡಿದವರ ಕುಟುಂಬಸ್ಥರನ್ನು ಗೌರವಿಸಲು ಸರ್ಕಾರ ನಿರ್ಧಾರ

ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆಯಂದು ಅಭಿನಂದಿಸಲು ನಿರ್ಧಾರ

ಮೈಸೂರು, ಜು.17(ಎಸ್‌ಪಿಎನ್)– ಅಂಗಾಂಗ ದಾನ ಮಾಡುವ ವ್ಯಕ್ತಿಯ ಕುಟುಂಬದವರಿಗೆ ಆಗಸ್ಟ್ 15ರಂದು ಪ್ರಶಂಸಾ ಪತ್ರ ನೀಡಿ ಗೌರವಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಸ್ಥಾಪಿತವಾದ ರಾಜ್ಯ ಅಂಗ ಅಂಗಾಂಶ ಕಸಿ ಸಂಸ್ಥೆ(ಎಸ್‌ಓಟಿಟಿಒ ಕರ್ನಾಟಕ) ಮುಖಾಂತರ ನೀಡುವ ಮಾಹಿತಿ ಆಧರಿಸಿ ಅಂಗಾಂಗ ದಾನ ಮಾಡಿದ ದಿನಾಂಕದಿಂದ 10 ದಿನಗಳ ಒಳಗೆ ಪ್ರಾಥಮಿಕ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸುವ ಬಗ್ಗೆ ಕ್ರಮವಹಿಸಬೇಕು.

ತದ ನಂತರ ಸಾರ್ವಜನಿಕ ಸಮಾರಂಭಗಳಾದ 15ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ (ಅಂದರೆ, ವರ್ಷದ ಜನವರಿ 26 ರಿಂದ 14ನೇ ಆಗಸ್ಟ್‌ವರೆಗೆ ಅಂಗಾಂಗಗಳನ್ನು ದಾನ ಮಾಡಿದವರ ಕುಟುಂಬ ಸದಸ್ಯರಿಗೆ) ಮತ್ತು 26ನೇ ಗಣರಾಜ್ಯೋತ್ಸವದ ಸಮಾರಂಭದಲ್ಲಿ(ಅಂದರೆ, ಹಿಂದಿನ ವರ್ಷದ ಆಗಸ್ಟ್ 15ರಿಂದ ಸಂಬಂಧಿತ ವರ್ಷ ಜನವರಿ 25ನೇ ದಿನಾಂಕದವರೆಗೆ ಅಂಗಾಂಗಗಳನ್ನು ದಾನ ಮಾಡಿದವರ ಕುಟುಂಬದವರಿಗೆ) ಆಯಾಯ ಜಿಲ್ಲಾಡಳಿತ ವತಿಯಿಂದ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. 2023ನೇ ಸಾಲಿನಿಂದ ಜುಲೈ 2024ರವರೆಗೆ ಅಂಗಾಂಗ ದಾನ ಮಾಡಿರುವ ಕುಟುಂಬದವರಿಗೆ 2024ರ ಆ.15ರಂದು ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದಾರೆ.

ಅಭಿವೃದ್ಧಿಗೆ ಹಣವಿಲ್ಲ... ಬೇಕಾದ ಅಧಿಕಾರಿಗಳ ನಿಯೋಜನೆ ಆಗ್ತಿಲ್ಲಾ...

ಕಾಂಗ್ರೆಸ್ ಯುವ ಶಾಸಕರ ಪಡೆಯಲ್ಲಿ ತೀವ್ರ ಅಸಮಾಧಾನ

ಬೆಂಗಳೂರು, ಜು. 17(ಕೆಎಂಶಿ)– ಅಭಿವೃದ್ಧಿಗೆ ಹಣವಿಲ್ಲ, ಕ್ಷೇತ್ರದಲ್ಲಿ ನಮಗೆ ಬೇಕಾದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅಧಿಕಾರಕ್ಕೂ ಕಡಿವಾಣ ಹಾಕಿರುವ ಬಗ್ಗೆ ಯುವ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಿನ್ನೆ ರಾತ್ರಿ ನಗರದ ಖಾಸಗಿ ಪಂಚತಾರಾ ಹೋಟೆಲ್ ಒಂದರಲ್ಲಿ ಸೇರಿದ್ದ 40ಕ್ಕೂ ಹೆಚ್ಚು ಶಾಸಕರು, ಸರ್ಕಾರ ಹಾಗೂ ಸಚಿವರ ನಿರ್ಧಾರಗಳ ಬಗ್ಗೆ ತೀವ್ರ ಕಿಡಿಕಾರಿದ್ದಾರೆ.

ಒಂದೆಡೆ ನಮ್ಮ ಕ್ಷೇತ್ರಗಳಿಗೆ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ, ಮತ್ತೊಂದೆಡೆ ನಮಗೆ ಬೇಕಾದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅಧಿಕಾರವನ್ನೂ ಕಿತ್ತುಕೊಂಡರೆ ನಾವು ಏನು ಮಾಡಬೇಕು ಎಂದು ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಸಚಿವರುಗಳು ಲಾಬಿ ನಡೆಸುತ್ತಿರುವ ಬೆನ್ನಲ್ಲೇ ಯುವ ಶಾಸಕರ ಪಡೆ ಸಭೆ ಸೇರಿ ಅತೃಪ್ತಿ ವ್ಯಕ್ತಪಡಿಸಿರುವುದು ರಾಜ್ಯ ಕಾಂಗ್ರೆಸ್ ನಾಯಕತ್ವದ ವಿರುದ್ಧ ಬಂಡಾಯ ಎದ್ದಂತಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುವ ರವಿ ಗಣಿಗ ಅವರ ಮುಂದಾಳತ್ವದಲ್ಲಿ ಮಂಗಳವಾರ ರಾತ್ರಿ ನಡೆದ ಸಭೆಯಲ್ಲಿ ಯುವ ಶಾಸಕರೇ ಹೆಚ್ಚಾಗಿ ಭಾಗವಹಿಸಿದ್ದರು.

ಕಳೆದ ವರ್ಷದ ಪ್ರಾರಂಭದಲ್ಲೂ ಇಂತಹ ಸಭೆ ಮಾಡಿದ್ದರಾದರೂ, ಅದು ಕೇವಲ ಒಂದು ಸ್ನೇಹಕೂಟಕ್ಕೆ ಸೀಮಿತವಾಗಿತ್ತು. ಆದರೆ ನಿನ್ನೆ ನಡೆದ ಸಭೆಯಲ್ಲಿ ಸರ್ಕಾರದ ನಿರ್ಧಾರಗಳ ಬಗ್ಗೆ ಅಪಸ್ವರಗಳು ಕೇಳಿಬಂದಿವೆ.

ಮುಖ್ಯಮಂತ್ರಿಗಳ (ಶಾಸಕರ) ನಿಧಿಯಿಂದ ಕ್ಷೇತ್ರ ಅಭಿವೃದ್ಧಿಗೆ 25 ಕೋಟಿ ರೂ. ಬಿಡುಗಡೆ ಮಾಡುವುದಾಗಿ ಕಳೆದ ನಾಲ್ಕು ತಿಂಗಳ ಹಿಂದೆಯೇ ಸಿದ್ದರಾಮಯ್ಯ ತಿಳಿಸಿದ್ದರು.

ಇದುವರೆಗೂ ಆ ಹಣ ಬಿಡುಗಡೆಯಾಗಿಲ್ಲ. ಅಲ್ಲದೆ, ಬೇರೆ ಇಲಾಖೆಗಳ ಲೆಕ್ಕದ ಬಾಬ್ತಿನಡಿಯಲ್ಲೂ ಅಭಿವೃದ್ಧಿ ಕಾರ್ಯಕ್ಕೆ ಹಣ ಸಿಗುತ್ತಿಲ್ಲ. ಬಡವರಿಗಾಗಿ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ತಂದರೂ ಲೋಕಸಭಾ ಚುನಾವಣೆಯಲ್ಲಿ ಅದರ ಪೂರ್ಣ ಲಾಭ ನಮಗೆ ದಕ್ಕಿಲ್ಲ.

ಕ್ಷೇತ್ರಗಳಲ್ಲಿ ರಸ್ತೆ ಗುಂಡಿಗಳನ್ನೂ ಮುಚ್ಚಲಾಗದೆ ನಮ್ಮ ಸ್ಥಿತಿ ಚಿಂತಾಜನಕವಾಗಿದೆ. ಇದರ ನಡುವೆ ಕೆಳಹಂತದ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳುವ ಅವಕಾಶವೂ ತಪ್ಪುತ್ತಿದೆ.

ಮತ ನೀಡಿದವರು ಅಭಿವೃದ್ಧಿ ಬಗ್ಗೆ ಪ್ರಶ್ನೆ ಮಾಡಿದರೆ ಉತ್ತರಿಸುವ ಶಕ್ತಿ ಇಲ್ಲದಂತಾಗಿರುವುದಲ್ಲದೆ, ತಮ್ಮವರೊಬ್ಬರನ್ನು ಕ್ಷೇತ್ರದಲ್ಲಿ ಅಧಿಕಾರಿಯಾಗಿ ನಿಯೋಜಿಸುವಂತೆ ಮಾಡಿದ ಮನವಿಗೂ ಸ್ಪಂದನೆ ಇಲ್ಲವಾಗಿದೆ.

ವೈದ್ಯರು ಮತ್ತು ಶಿಕ್ಷಕರನ್ನು ಕೌನ್ಸೆಲಿಂಗ್ ಮೂಲಕ ನಿಯೋಜಿಸಲಾಗುತ್ತಿದೆ. ಇದೀಗ ಗ್ರಾಮೀಣಾಭಿವೃದ್ಧಿಯಡಿ ಬರುವ ಪಿಡಿಒಗಳು ಹಾಗೂ ಕಂದಾಯ ಇಲಾಖೆಯಡಿ ಬರುವ ನೋಂದಣಿ ಅಧಿಕಾರಿಗಳ ನಿಯೋಜನೆಗೂ ಇದೇ ಪದ್ಧತಿ ತರಲಾಗಿದೆ.

ಪೊಲೀಸ್ ವರ್ಗಾವಣೆಗೂ ಹೊಸ ಮಾರ್ಗಸೂಚಿ ಬಂದಿದೆ. ಇದರಿಂದ ನಾವು ನಮ್ಮ ಕ್ಷೇತ್ರದಲ್ಲಿ ಬೇಕಾದ 'ಸಿ' ಮತ್ತು 'ಡಿ' ದರ್ಜೆ ನೌಕರರನ್ನೂ ನಿಯೋಜಿಸಿಕೊಳ್ಳುವ ಅಧಿಕಾರ ಇಲ್ಲದಂತಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶಾಸಕರ ಕ್ರೀಡಾಕೂಟ ನೆಪದಲ್ಲಿ ಸೇರಿದ್ದ ಸಭೆ ಕೊನೆಯಲ್ಲಿ, ಮುಖ್ಯಮಂತ್ರಿ ಹಾಗೂ ಸಚಿವರುಗಳ ನಿರ್ಧಾರಗಳ ಬಗ್ಗೆ ಪರೋಕ್ಷ ಅಸಮಾಧಾನ ವ್ಯಕ್ತವಾಗಿದೆ.

ರವಿ ಗಣಿಗ ಅವರ ಮುಂದಾಳತ್ವದಲ್ಲಿ ಸಭೆ ನಡೆಯಿತಾದರೂ ಹಳೇ ಮೈಸೂರು ಭಾಗದ ಹಿರಿಯ ಸಚಿವರೊಬ್ಬರು ತೆರೆಮರೆಯಲ್ಲಿ ಈ ಔತಣಕೂಟದ ಮುಂದಾಳತ್ವ ವಹಿಸಿದ್ದರು.

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೇವೆ ಆರಂಭ

● ಮೋಹನ್ ಕಾಯಕ

ಮೈಸೂರು, ಜು.17– ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕ ಆರಂಭವಾಗಿದ್ದು, ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳೊಂದಿಗೆ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ.

ಮೈಸೂರಿನ ಮೆಡಿಕಲ್ ಹಬ್ ಎಂದೇ ಗುರ್ತಿಸಿಕೊಂಡಿರುವ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ನೆಫ್ರೋ ಪ್ಲಸ್ ಸಹಯೋಗದಲ್ಲಿ ನೂತನ ಡಯಾಲಿಸಿಸ್ ಘಟಕ ಆರಂಭವಾಗಿದ್ದು, ಡಯಾಲಿಸಿಸ್ ಅಗತ್ಯ ಇರುವವರು ಇಲ್ಲಿ ಉಚಿತವಾಗಿ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.



ಡಯಾಲಿಸಿಸ್ ಯಂತ್ರ ಪರಿಶೀಲನೆ ನಡೆಸುತ್ತಿರುವ ಘಟಕದ ಮುಖ್ಯಸ್ಥ ಬಿ.ರವಿ

ಎಪಿಎಲ್, ಬಿಪಿಎಲ್ ಕಾರ್ಡ್‌ದಾರರಿಗೆ ಮುಕ್ತ

> ಡಯಾಲಿಸಿಸ್ ಘಟಕ ಆರಂಭವಾಗಿದ್ದು, ಎಪಿಎಲ್, ಬಿಪಿಎಲ್ ಕಾರ್ಡ್ ಇದ್ದವರಿಗೆ ಉಚಿತವಾಗಿ ಚಿಕಿತ್ಸಾ ಸೇವೆ ನೀಡಲಾಗುತ್ತಿದೆ. ಆರಂಭದಲ್ಲಿ ಮೂರು ಬೆಡ್‌ಗಳಿದ್ದು, ಹೊಸದಾಗಿ ಇನ್ನೂ ಮೂರು ಬೆಡ್‌ಗಳನ್ನು ಅಳವಡಿಸಲಾಗುತ್ತಿದೆ. ಮುಖ್ಯವಾಗಿ ಬಡವರಿಗೆ ಅನುಕೂಲವಾಗಬೇಕು. ಅಕ್ಕ–ಪಕ್ಕದ ತಾಲೂಕುಗಳಿಂದ ಬರುವವರಿಗೂ ಸೇವೆ ಕಲ್ಪಿಸುತ್ತಿದ್ದೇವೆ.
>
> – ಡಾ.ಜೆ.ಹರಿಪ್ರಸಾದ್, ಆರ್‌ಎಂಓ, ಜಿಲ್ಲಾಸ್ಪತ್ರೆ, ಮೈಸೂರು

ಎಪಿಎಲ್, ಬಿಪಿಎಲ್ ಕಾರ್ಡುದಾರರು ಹಾಗೂ ಬಡವರು, ಶ್ರೀಮಂತರು ಸೇರಿದಂತೆ ಯಾರೇ ಆದರೂ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಅತ್ಯಾಧುನಿಕ ಸಲಕರಣೆಗಳೊಂದಿಗೆ ನುರಿತ ವೈದ್ಯರು, ತಾಂತ್ರಿಕ ಸಿಬ್ಬಂದಿ ಡಯಾಲಿಸಿಸ್ ವಿಭಾಗದಲ್ಲಿದ್ದು, ಆರಂಭಗೊಂಡ ತಿಂಗಳಲ್ಲಿಯೇ ಸುಮಾರು 20 ಮಂದಿಗೆ ಡಯಾಲಿಸಿಸ್ ಸೇವೆ ನೀಡಲಾಗಿದೆ.

ಜಿಲ್ಲಾಸ್ಪತ್ರೆಯ ಐಸಿಯು ವಿಭಾಗದ ಪಕ್ಕದಲ್ಲಿಯೇ ಡಯಾಲಿಸಿಸ್ ಘಟಕವಿದ್ದು, ವಿಶಾಲ ಕೊಠಡಿಯಲ್ಲಿ ಸೇವೆ ನೀಡಲಾಗುತ್ತಿದೆ. ಲಭ್ಯವಿರುವ 6 ಡಯಾಲಿಸಿಸ್ ಯಂತ್ರಗಳಲ್ಲಿ ಮೂರು ಯಂತ್ರಗಳನ್ನು ಬಳಕೆ ಮಾಡಲಾಗುತ್ತಿದ್ದು, ಅಗತ್ಯತೆಗೆ ಅನುಗುಣವಾಗಿ ಎಲ್ಲಾ ಯಂತ್ರಗಳನ್ನು ಬಳಕೆ ಮಾಡಲು ನಿರ್ಧರಿಸಲಾಗಿದೆ. ಈ ಎಲ್ಲಾ ಡಯಾಲಿಸಿಸ್ ಯಂತ್ರಗಳು ಆಧುನಿಕ ತಂತ್ರಜ್ಞಾನದಿಂದ ಕೂಡಿದ್ದು, ತ್ವರಿತ ರಕ್ತ ಶುದ್ಧೀಕರಣಕ್ಕೆ ಪೂರಕವಾಗಿವೆ.

ಏಕ ಬಳಕೆ(ಸಿಂಗಲ್ ಯೂಸ್)ಯ ಡಯಾಲೈಸರ್ ಬಳಕೆ: ಮುಖ್ಯವಾಗಿ ದೇಹದ ರಕ್ತದಲ್ಲಿನ ಕಲ್ಮಶಗಳನ್ನು ಹೊರಹಾಕಿ ರಕ್ತ ಶುದ್ಧ ಮಾಡುವ ಏಕ ಬಳಕೆಯ ಡಯಾಲೈಸರ್(ಫಿಲ್ಟರ್ ರೀತಿ ಕೆಲಸ ಮಾಡುವ ವೈದ್ಯಕೀಯ ಸಾಧನ) ಗಳನ್ನು ಬಳಕೆ ಮಾಡಲಾಗುತ್ತಿದೆ. ಸದ್ಯಕ್ಕೆ ಮೂರು ಡಯಾಲಿಸಿಸ್ ಯಂತ್ರಗಳಲ್ಲಿ ಏಕ ಬಳಕೆಯ ಡಯಾಲೈಸರ್‌ಗಳನ್ನು ಬಳಸಲಾಗುತ್ತಿದೆ ಇದರಿಂದ ಯಾವುದೇ ಸೋಂಕು ತಗುಲುವುದಿಲ್ಲ ಎಂದು ಜಿಲ್ಲಾಸ್ಪತ್ರೆಯ ಡಯಾಲಿಸಿಸ್ ಘಟಕ ಮುಖ್ಯಸ್ಥ ಹಾಗೂ ನರ್ಸಿಂಗ್ ಅಧಿಕಾರಿ ಬಿ.ರವಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈ ಹಿಂದೆ ಬಹು(ಮಲ್ಟಿ ಯೂಸ್) ಬಳಕೆಯ ಡಯಾಲೈಸರ್‌ಗಳನ್ನು ಬಳಕೆ ಮಾಡಲಾಗುತ್ತಿತ್ತು. ಡಯಾಲಿಸಿಸ್‌ಗೆ ಬಹು ಬಳಕೆಯ ಡಯಾಲೈಸರ್ ಬಳಸುತ್ತಿದ್ದರಿಂದ ಒಬ್ಬರಿಂದ ಮತ್ತೊಬ್ಬರಿಗೆ ಸೋಂಕು ತಗುಲುವುದು ಕಂಡು ಬಂದ ಹಿನ್ನೆಲೆಯಲ್ಲಿ ಅದರ ಬಳಕೆ ನಿಲ್ಲಿಸಲಾಗಿದೆ. ಅಲ್ಲದೆ ರಾಜ್ಯ ಸರ್ಕಾರವೇ ಬಹು ಬಳಕೆ ಡಯಾಲೈಸರ್ ಬಳಕೆ ಬದಲು ಏಕ ಬಳಕೆ ಡಯಾಲೈಸರ್ ಬಳಸುವಂತೆ ಸೂಚಿಸಿದೆ ಎಂದು ತಿಳಿಸಿದರು.



ಆರೋಗ್ಯದಲ್ಲಿ ಸುಧಾರಣೆ: ಏಕ ಬಳಕೆ ಡಯಾಲೈಸರ್‌ಗಳ ಬಳಕೆಯಿಂದ ಡಯಾಲಿಸಿಸ್ ಅಗತ್ಯ ಇರುವವರ ಆರೋಗ್ಯದಲ್ಲಿ ಸುಧಾರಣೆ ಆಗಲಿದೆ. ರಕ್ತದಲ್ಲಿ ಕಲ್ಮಶವನ್ನು ಈ ಏಕ ಬಳಕೆಯ ಡಯಾಲೈಸರ್ ಕ್ಲೀನ್ ಮಾಡಿ, ಶುದ್ಧ ರಕ್ತವನ್ನು ದೇಹಕ್ಕೆ ಒದಗಿಸಲಿದೆ. ಇದರಿಂದ ಡಯಾಲಿಸಿಸ್‌ಗೆ ಒಳಗಾಗಿದ್ದರೂ ಸಾಮಾನ್ಯರಂತೆಯೇ ಲವಲವಿಕೆಯಿಂದ ಚಟುವಟಿಕೆಯಿಂದ ತೊಡಗಿಕೊಳ್ಳಲಿದ್ದಾರೆ. ಇದುವರೆಗೆ 20 ಜನರಿಗೆ ಡಯಾಲಿಸಿಸ್ ಸೇವೆ ನೀಡಿದ್ದು, ಅದರಲ್ಲಿನ 19 ಮಂದಿ ಸಾಮಾನ್ಯರಂತೆ ಹೊಸ ಚೈತನ್ಯ ಪಡೆದಿದ್ದಾರೆ ಎಂದು ವಿವರಿಸಿದರು.

ಉತ್ತಮ ಮತ್ತು ಉಚಿತ ಸೇವೆ: ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ಬಡಜನರಿಗೆ ಉಚಿತವಾಗಿ ಡಯಾಲಿಸಿಸ್ ಸೇವೆ ಒದಗಿಸುವ ನಿಟ್ಟಿನಲ್ಲಿ ಬಡವರು ಸೇರಿದಂತೆ ಎಲ್ಲಾ ವರ್ಗದವರಿಗೂ ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಸೇವೆ ನೀಡುತ್ತಿದ್ದೇವೆ. 10 ರೂ. ಹೊರರೋಗಿ ಚೀಟಿ ಪಡೆದು ಬಂದರೆ ಸಾಕು. ಸೇವೆ ಲಭ್ಯವಿದೆ. ಸದ್ಯಕ್ಕೆ ಮೂರು ಬೆಡ್‌ಗಳಿದ್ದು, ಹೊಸದಾಗಿ ಬಂದಿರುವ ಮೂರು ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಿ, ಬೆಡ್‌ಗಳ ಸಂಖ್ಯೆಯನ್ನು ಸದ್ಯದಲ್ಲಿಯೇ 6ಕ್ಕೆ ಹೆಚ್ಚಿಸಲಾಗುವುದು ಎಂದು ತಿಳಿಸಿದರು.

ಇಂಜೆಕ್ಷನ್ ಉಚಿತ: ದೇಹದಲ್ಲಿ ರಕ್ತದ ಪ್ರಮಾಣ ಹೆಚ್ಚಿಸುವ ಐರನ್ (ಕಬ್ಬಿಣಾಂಶ) ಇಂಜೆಕ್ಷನ್ ಹಾಗೂ ಎರಿಥ್ರೋಪ್ರೋಟೀನ್ ಇಂಜೆಕ್ಷನ್‌ಗಳನ್ನು ಉಚಿತವಾಗಿ ನೀಡುತ್ತಿದ್ದೇವೆ. ನುರಿತ ವೈದ್ಯರು, ಯಂತ್ರಗಳ ನಿರ್ವಹಣೆ ಮಾಡುವ ಟೆಕ್ನಿಷಿಯನ್‌ಗಳಿದ್ದು, ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲಾಗುತ್ತಿದೆ. ಬೇರೆ ಖಾಸಗಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಚಿಕಿತ್ಸೆಗೆ ಸಾವಿರಾರು ರೂ. ಪಾವತಿಸಬೇಕಿದೆ. ಆದರೆ ಇಲ್ಲಿ ಉಚಿತ ಹಾಗೂ ಗುಣಮಟ್ಟದ ಸೇವೆ ನೀಡುತ್ತಿದ್ದೇವೆ ಎಂದು ಹೇಳಿದರು.



ಮೈಸೂರಿನ ಜಿಲ್ಲಾಸ್ಪತ್ರೆಯಲ್ಲಿರುವ ನೂತನ ಡಯಾಲಿಸಿಸ್ ಘಟಕ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹಿಂದೂಸ್ತಾನಿ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ರಾಜಕಮಲ್	
ಸರ್ಫಿರಾ (ಹಿಂ)	4 ಪ್ರದರ್ಶನಗಳು
ಸಂಗಂ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ಜಾಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ತೆ): ಬೆ.9.35ಕ್ಕೆ, ಇಂಡಿಯನ್ 2 (ತ): ಮ.1ಕ್ಕೆ, ಇನ್‌ಸೈಡ್ ಔಟ್ 2 (3ಡಿ)(ಇಂ): ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸರ್ಫಿರಾ (ಹಿಂ): ಬೆ.9.45ಕ್ಕೆ, ಮ.12.50ಕ್ಕೆ, ರಾ.7.20ಕ್ಕೆ, ರಾ.10.20ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಬೆ.9.30ಕ್ಕೆ, ಮ.12.55ಕ್ಕೆ, ಫ್ಲೈ ಮಿ ಟು ದಿ ಮೂನ್ (ಇಂ): ಸಂ.4.20ಕ್ಕೆ, ರಾ.10.25ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.9.25ಕ್ಕೆ, ಮ.3.10ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೂಟಗಳ್ಳಿ ನಗರಸಭೆ ದಿವ್ಯ ನಿರ್ಲಕ್ಷ್ಯ: ವಿದ್ಯುತ್ ಪ್ರವಹಿಸಿ ಹಸು ಸಾವು



ಮೈಸೂರು, ಜು.17– ಹೂಟಗಳ್ಳಿ ನಗರಸಭೆ ನಿರ್ಲಕ್ಷ್ಯದಿಂದ ಇಲ್ಲಿನ ಎಸ್‌ಆರ್‌ಎಸ್ ಬಡಾವಣೆಯಲ್ಲಿ 1.20 ಲಕ್ಷ ರೂ. ಬೆಲೆಬಾಳುವ ಗರ್ಭಿಣಿ ಹಸು ರಸ್ತೆ ಬದಿಯಲ್ಲಿದ್ದ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸ್ವಿಚ್ ಬಾಕ್ಸ್ ಸ್ಪರ್ಶಿಸಿ ಸ್ಥಳದಲ್ಲೆ ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ.

ಬಡಾವಣೆಯ ರವಿಕುಮಾರ್ ಎಂಬುವರು ಮಂಗಳವಾರ ಬೆಳಗ್ಗೆ ತಮ್ಮ ಮನೆಯಿಂದ ಹಸುವನ್ನು ಜಮೀನಿನ ಬಳಿ ಕಟ್ಟಿಹಾಕಲು ಕರೆದುಕೊಂಡು ಹೋಗುತ್ತಿದ್ದ ವೇಳೆ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಸ್ವಿಚ್‌ಬಾಕ್ಸ್ ಪಕ್ಕದ ಕಬ್ಬಿಣದ ಪೈಪ್ ಸ್ಪರ್ಶಿಸಿ ಸ್ಥಳದಲ್ಲೇ ಪ್ರಾಣ ಬಿಟ್ಟಿದೆ.

ಈ ಹಿಂದೆ ಚರಂಡಿ ಮೇಲಿದ್ದ ಸ್ವಿಚ್‌ಬಾಕ್ಸ್ ಅನ್ನು ಅಲ್ಲಿಂದ ರಸ್ತೆಗೆ ಸ್ಥಳಾಂತರಿಸಲಾಗಿತ್ತು. ಸ್ವಿಚ್‌ಬಾಕ್ಸ್ ಪಕ್ಕದಲ್ಲಿದ್ದ ಕಬ್ಬಿಣದ ಪೈಪ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಈ ಅವಘಡ ಸಂಭವಿಸಿದೆ.


ಸ್ಥಳಕ್ಕೆ ಪೊಲೀಸರು, ಚೆಸ್ಕಾಂ ಸಿಬ್ಬಂದಿ, ನಗರಸಭೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	111.90 ಅಡಿ
ಒಳಹರಿವು	35534 ಕ್ಯೂಸೆಕ್
ಹೊರಹರಿವು	2443 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಬುಧವಾರ	2282.12 ಅಡಿ
ಒಳಹರಿವು	38660 ಕ್ಯೂಸೆಕ್
ಹೊರಹರಿವು	50000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2852.07 ಅಡಿ
ಒಳಹರಿವು	11236 ಕ್ಯೂಸೆಕ್
ಹೊರಹರಿವು	10000 ಕ್ಯೂಸೆಕ್

ಹಸಿರು ನಮ್ಮ ಉಸಿರು

ಪ್ಯಾರಿಸ್ ಒಲಿಂಪಿಕ್ಸ್: 117 ಕ್ರೀಡಾಪಟುಗಳ ಪಟ್ಟಿ ಬಿಡುಗಡೆ, ಅಭಾಗಿಲ್ಲ ಅವಕಾಶ

ನವದೆಹಲಿ: ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತವನ್ನು 117 ಕ್ರೀಡಾಪಟುಗಳು ಪ್ರತಿನಿಧಿಸಲಿದ್ದಾರೆ. ಈ ಸಂಬಂಧ ಭಾರತ ಒಲಿಂಪಿಕ್ ಸಂಸ್ಥೆ (LMJ) ಪಟ್ಟಿಯನ್ನು ಬಿಡುಗಡೆಗೊಳಿಸಿದೆ.

ಭಾರತದಿಂದ ತೆರಳಲಿರುವ ಕ್ರೀಡಾಪಟುಗಳೊಂದಿಗೆ 140 ಸಹಾಯಕ ಸಿಬ್ಬಂದಿ ಹಾಗೂ ಅಧಿಕಾರಿಗಳು ಇರಲಿದ್ದಾರೆ. ಈ ಪೈಕಿ 72 ಮಂದಿಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಆದರೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರೂ ಷಾಟ್‌ಪುಟ್ ಸ್ಪರ್ಧಿ ಅಭಾ ಖತುವಾ ಅವರ ಹೆಸರು ಪಟ್ಟಿಯಲ್ಲಿಲ್ಲ. ಕೆಲವು ದಿನಗಳ ಹಿಂದೆಯಷ್ಟೇ ವಿಶ್ವ ಅಥ್ಲೆಟಿಕ್ಸ್ ಪ್ರಕಟಿಸಿದ ಭಾರತೀಯ ಕ್ರೀಡಾಪಟುಗಳ ಪಟ್ಟಿಯಲ್ಲೂ ಅಭಾ ಹೆಸರಿರಲಿಲ್ಲ. ಅಭಾ ಹೆಸರು ಕೈಬಿಟ್ಟಿರುವುದಕ್ಕೆ LMJ ಯಾವುದೇ ಕಾರಣವನ್ನು ನೀಡಿಲ್ಲ.

ಭಾರತವನ್ನು ಅಥ್ಲೆಟಿಕ್ಸ್ ವಿಭಾಗದಲ್ಲಿ ಅತೀ ಹೆಚ್ಚು ಕ್ರೀಡಾಪಟುಗಳು ಪ್ರತಿನಿಧಿಸಲಿದ್ದಾರೆ. 18 ಪುರುಷರು ಹಾಗೂ 11 ಮಹಿಳೆಯರು ಸೇರಿದಂತೆ ಒಟ್ಟು 29 ಮಂದಿ ಕ್ರೀಡಾಪಟುಗಳು ಇದ್ದಾರೆ.

ಶೂಟಿಂಗ್‌ನಲ್ಲಿ 21, ಹಾಕಿಯಲ್ಲಿ 19, ಟೇಬಲ್ ಟೆನಿಸ್‌ನಲ್ಲಿ 8, ಬ್ಯಾಡ್ಮಿಂಟನ್ 7, ಕುಸ್ತಿ, ಆರ್ಚರಿ ಹಾಗೂ ಬಾಕ್ಸಿಂಗ್‌ನಲ್ಲಿ ತಲಾ 6, ಗಾಲ್ಫ್ 4, ಟೆನಿಸ್ 3, ಈಜು 2, ಸೇಲಿಂಗ್ 2 ಮತ್ತು ಜೂಡೋ, ರೋಯಿಂಗ್ ಮತ್ತು ವೇಟ್‌ಲಿಫ್ಟಿಂಗ್‌ನಲ್ಲಿ ತಲಾ ಒಬ್ಬರು ಇರಲಿದ್ದಾರೆ.


ಕಳೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು 119 ಕ್ರೀಡಾಪಟುಗಳು ಸ್ಪರ್ಧಿಸಿದ್ದರು. ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ನೀರಜ್ ಚೋಪ್ರಾ ಚಿನ್ನ ಸೇರಿದಂತೆ ಒಟ್ಟು ಏಳು ಪದಕಗಳೊಂದಿಗೆ ಭಾರತ ಸಾರ್ವಕಾಲಿಕ ಶ್ರೇಷ್ಠ ಸಾಧನೆ ಮಾಡಿತ್ತು.













ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು, ಅದರ ಮಾಲೀಕರಾದ ಶ್ರೀಮತಿ ಬಿ. ಎಮ್. ಉಷಾ ಕೋಂ ಬಿ. ಎಸ್. ಮಧುಸೂಧನ್ ಇವರಿಂದ ಖರೀದಿಸಬೇಕೆಂದುಕೊಂಡಿದ್ದು, ಅನುಸೂಚಿ ಸ್ವತ್ತಿನ ವಿಚಾರವಾಗಿಯೋ ಅಥವಾ ಅದರ ಮಾರಾಟದ ವಿಚಾರವಾಗಿ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಅಥವಾ ತಕರಾರು ಇದ್ದಲ್ಲಿ, ಅವುಗಳನ್ನು ಸೂಕ್ತ ದಾಖಲಾತಿಗಳ ಆಧಾರದೊಂದಿಗೆ ಈ ಕೆಳಗೆ ಸಹಿಮಾಡಿರುವವರಿಗೆ ಈ ಪ್ರಕಟಣೆಯ ದಿನಾಂಕದಿಂದ 21 (ಇಪ್ಪತ್ತೊಂದು) ದಿನಗಳಲ್ಲಿ ಕಳಿಸತಕ್ಕದ್ದು. ಸದರಿ ಅವಧಿಯೊಳಗೆ ಯಾವುದೇ ತಕರಾರುಗಳು ಬರದಿದ್ದಲ್ಲಿ, ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸುವುದಕ್ಕೆ ಮುಂದುವರಿಯುತ್ತಾರೆ. ಸದರಿ ಅವಧಿಯ ನಂತರ ಸ್ವೀಕೃತವಾದ ಯಾವುದೇ ತಕರಾರುಗಳನ್ನು ಪುರಸ್ಕರಿಸಲಾಗುವುದಿಲ್ಲ.

ಅನುಸೂಚಿ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಹಿನಕಲ್ ಗ್ರಾಮದಲ್ಲಿರುವ ಸರ್ವೆ ನಂ. 273/2 ಆಳತೆ 1 ಎಕರೆ 5.5 ಗುಂಟೆಯುಳ್ಳ ಪರಿವರ್ತಿತ ಜಮೀನು (ಪರಿವರ್ತನೆ ಆದೇಶ/ಅಧಿಕೃತ ಜ್ಞಾಪನ ಸಂಖ್ಯೆ ಸಿಆರ್. 719/2017 (31260) ದಿನಾಂಕ 17.03.2018) ಇದಕ್ಕೆ ಚಕ್ಕುಬಂದಿ

ಪೂರ್ವಕ್ಕೆ	:	ಸರ್ವೆ ನಂ. 271ರ ಜಮೀನು
ಪಶ್ಚಿಮಕ್ಕೆ	:	ಸರ್ವೆ ನಂ. 273/3ರ ಜಮೀನು
ಉತ್ತರಕ್ಕೆ	:	ಸರ್ವೆ ನಂ. 272 ರ ಜಮೀನು
ದಕ್ಷಿಣಕ್ಕೆ	:	ಸರ್ವೆ ನಂ. 273/3 (ಬ್ಲಾಕ್–2) ರ ಜಮೀನು.

ಎ. ಸಂತೋಷ್, ವಕೀಲರು
ನಂ. 20, ಮೂರನೇ ಮಹಡಿ, ಮೊದಲನೇ ಮುಖ್ಯರಸ್ತೆ,
ಗಾಂಧಿನಗರ, ಬೆಂಗಳೂರು 560009, ಮೊ.ನಂ. 9845151157

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನನ್ನು ಅದರ ಮಾಲೀಕರಾದ ಶ್ರೀಮತಿ ಪದ್ಮಪ್ರಿಯಾ ಆರ್ ಕೋಂ ಶ್ರೀ ಮಧುಸೂಧನ್ ಎಂ ಬಿ ಮನೆ ನಂ.806 ಎಮಿನೆನ್ಸ್ ಪಾರ್ಕ್, ಜೆ ಎಸ್ ಎಸ್ ಶಾಲೆ ಎದುರು, ಶ್ರೀರಾಂಪುರ, ಮೈಸೂರು–570023 ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂಧವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳ ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ತಮಗಿರುವ ಹಕ್ಕು, ಆಸಕ್ತಿ, ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೆ ಸಹಿತ ನನ್ನ ಕಕ್ಷಿದಾರರಿಗಾಗಲೀ ಅಥವಾ ನನಗಾಗಲೀ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸರ್ವೆ ನಂ.191/1 ರಲ್ಲಿರುವ 2 ಎಕರೆ 39 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಮಲ್ಲಪ್ಪರವರ ಜಮೀನು, ಪಶ್ಚಿಮಕ್ಕೆ: ತಮ್ಮಯ್ಯ ಚಾರಿ ರವರ ಜಮೀನು. ಉತ್ತರಕ್ಕೆ: ಗುರುಮಲ್ಲಪ್ಪರವರ ಜಮೀನು, ದಕ್ಷಿಣಕ್ಕೆ: ಖರಾಬು ಹಾಲೆ

(ಹೆಚ್.ಎಂ. ಸುಧಾಕರ)
ವಕೀಲರು, ಕೆಎಆರ್ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ವಿವೇಕಾನಂದನಗರ, ಮೈಸೂರು Ph: 94485 58136

BASIL WOODS INSTITUTIONS — BASIL WOODS Juniors PRESCHOOLS AND DAYCARE

PUBLIC NOTICE

On behalf of Basil Woods Institutions, this is to bring to the notice that we have been receiving enquiries regarding the admissions procedure and availability of seats at one Basil Buds International School, Kuvempu Nagar, Mysore.

To avoid any confusion, and to prevent anyone from unlawfully profiting from our name, fame and reputation, we hereby clarify, in the interest of our stakeholders, well-wishers and the public that **Basil Buds International School in Mysore is not run by or connected with the Basil Woods Institutions.**

Basil Woods is conceived by the team of ISKCON Bangalore and the names "Basil Woods Institutions" and "Basil Woods Juniors", are all registered trademarks under which our schools and preschools operate across India. Currently, we do not have any branches in Mysore.

Further, we wish to caution all our esteemed patrons and the general public that Basil Woods Institutions does not have any kind of interest whatsoever in Basil Buds International School, Mysore nor do we endorse or take any kind of responsibility with the latter's school, be it concerning statutory approvals, academics, admissions, operations, and all other aspects.

We encourage the public to know more about our institution and its various campuses from our official website www.basilwoods.in

Conceived by the team of Srila Prabhupada's ISKCON BANGALORE

CONTACT US: 78469 09009

